ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಸೆಪ್ಟೆಂಬರ್ 19 ಸೋಮವಾರ 2022

ಸಂಪುಟ: 43 | ಸಂಚಿಕೆ: 154 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4

ವಿವಿಧ ಯೋಜನೆ ಕುರಿತು ಕರ್ನಾಟಕ–ಕೇರಳ ದ್ವಿಪಕ್ಷೀಯ ಮಾತುಕತೆ

ಕೇರಳ ಬೇಡಿಕೆಗಳಿಗೆ ಬೊಮ್ಮಾಯಿ ತಿರಸ್ಕಾರ



ಕರ್ನಾಟಕ ಮತ್ತು ಕೇರಳ ನಡುವಿನ ಮಹತ್ವದ ರೈಲ್ವೆ ಯೋಜನೆಗಳ ಸಂಬಂಧ ಕೇರಳ ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಭಾನುವಾರ ಬೆಂಗಳೂರಿನ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ, ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಬೆಂಗಳೂರು, ಸೆ.18–ಕರ್ನಾಟಕ ಮತ್ತು ಕೇರಳ ನಡುವಿನ ಮಹತ್ವದ ರೈಲ್ವೆ ಯೋಜನೆಗಳ ಸಂಬಂಧ ಕೇರಳ ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಅವರು ಭಾನುವಾರ ಬೆಂಗಳೂರಿನ ಮುಖ್ಯಮಂತ್ರಿಗಳ ಗೃಹ ಕಚೇರಿ ಕೃಷ್ಣಾದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ, ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಈ ಮಾತುಕತೆ ವೇಳೆ ಕೇರಳ ಮುಖ್ಯಮಂತ್ರಿಗಳು ಪ್ರಸ್ತಾಪಿಸಿದ ಎಲ್ಲಾ ಯೋಜನೆಗಳಿಗೂ ಸಹಮತ ವ್ಯಕ್ತಪಡಿಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನಿರಾಕರಿಸಿದ್ದಾರೆ. ರಾಜ್ಯದ ಸೂಕ್ಷ್ಮ ಪರಿಸರ ಪ್ರದೇಶದಲ್ಲಿ ಹಾಗೂ ವನ್ಯಜೀವಿ ಧಾಮದಲ್ಲಿ ಯಾವುದೇ ಕಾಮಗಾರಿ ಕೈಗೊಳ್ಳಲು ಸಾಧ್ಯವಿಲ್ಲ ಎಂದು ಖಡಾಖಂಡಿತವಾಗಿ ಕರ್ನಾಟಕ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಗಳು ತಿಳಿಸಿದ್ದಾರೆ. ಸಭೆಯ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ,

ಕೇರಳ ಸರ್ಕಾರದ ಪ್ರಸ್ತಾವನೆಗಳು

- ಕಾಞಂಗಾಡ್–ಕಾಣಿಯೂರು ರೈಲ್ವೆ ಮಾರ್ಗ
- ತಲಚೇರಿ–ಮೈಸೂರು ರೈಲ್ವೆ ಮಾರ್ಗ
- ಬಂಡೀಪುರ ಮೂಲಕ ರಾತ್ರಿ ವೇಳೆ ಮತ್ತೆ ಎರಡು ಬಸ್ ಸಂಚಾರಕ್ಕೆ ಅನುಮತಿ

ದಕ್ಷಿಣ ವಲಯ ಪರಿಷತ್ತಿನ ಸಭೆಯ ತೀರ್ಮಾನದಂತೆ ದ್ವಿಪಕ್ಷೀಯ ಮಾತುಕತೆ ನಡೆಸಲು ಕೇರಳ ಮುಖ್ಯಮಂತ್ರಿ ಪಿಣರಾಯ್ ವಿಜಯನ್ ಆಗಮಿಸಿದ್ದರು. ರಾಜ್ಯದ ಸೂಕ್ಷ್ಮ ಪರಿಸರ ಪ್ರದೇಶ ಹಾಗೂ ವನ್ಯಜೀವಿ ಧಾಮಗಳಲ್ಲಿ ಯಾವುದೇ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲು ಸಾಧ್ಯವಿಲ್ಲ ಎಂದು ಅವರಿಗೆ ಸ್ಪಷ್ಟಪಡಿಸಿದ್ದೇನೆ ಎಂದರು.

ಕಾಞಂಗಾಡ್–ಕಾಣಿಯೂರು ರೈಲ್ವೆ ಮಾರ್ಗ ಸೇರಿದಂತೆ ವಿವಿಧ ರೈಲ್ವೆ ಮತ್ತು ಹೆದ್ದಾರಿ ಯೋಜನೆಗಳಿಗೆ ಸಹಮತಿ ನೀಡುವಂತೆ ಕೇರಳ ಸರ್ಕಾರ ಕೋರಿತು. ಪ್ರಸ್ತಾಪಿತ ಕಾಞಂಗಾಡ್–ಕಾಣಿಯೂರು ರೈಲ್ವೆ ಮಾರ್ಗವು ಸುಳ್ಯಾ ಭಾಗದಲ್ಲಿ ಬರುತ್ತದೆ. ಈ ಮಾರ್ಗವು ಕೇರಳದಲ್ಲಿ 40 ಕಿ.ಮೀ. ಮತ್ತು ಕರ್ನಾಟಕದಲ್ಲಿ 31 ಕಿ.ಮೀ. ಹಾದು ಹೋಗುತ್ತದೆ. ಇದರಿಂದ ರಾಜ್ಯಕ್ಕೆ ಹೆಚ್ಚಿನ ಅನುಕೂಲವೇನೂ ಇಲ್ಲ. ಅಲ್ಲದೇ ಪಶ್ಚಿಮಘಟ್ಟದ ಜೀವ ವೈವಿಧ್ಯ ಸೂಕ್ಷ್ಮ ಪ್ರದೇಶದಲ್ಲಿ ಈ ರೈಲ್ವೆ ಮಾರ್ಗ ಹಾದು ಹೋಗುವ ಕಾರಣ ಈ ಯೋಜನೆಗೆ ಸಹಮತ ನೀಡಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಲಾಗಿದೆ ಎಂದು ಸಿಎಂ ಬೊಮ್ಮಾಯಿ ತಿಳಿಸಿದರು.

ಹಳೆಯ ಯೋಜನೆಯಾದ ತಲಚೇರಿ–ಮೈಸೂರು ರೈಲ್ವೆ ಯೋಜನೆಯನ್ನೂ ಕೂಡ ಪ್ರಸ್ತಾಪಿಸಿದರು. ಈ ರೈಲ್ವೆ ಮಾರ್ಗವು ಬಂಡೀಪುರ–ನಾಗರಹೊಳೆ ರಾಷ್ಟ್ರೀಯ ಉದ್ಯಾನದ ಮಧ್ಯ ಭಾಗದಲ್ಲಿ ಹಾದು ಹೋಗುವುದರಿಂದ ವನ್ಯಜೀವಿ ಸಂಪತ್ತು ಮತ್ತು ಅರಣ್ಯ ಸಂಪತ್ತಿಗೆ ಹಾನಿಯಾಗುತ್ತದೆ. ಹೀಗಾಗಿ ಈ ಯೋಜನೆಗೂ ಕೂಡ ಸಮ್ಮತಿ ನೀಡಲು ಸಾಧ್ಯವಿಲ್ಲ ▶ 8ನೇ ಪುಟಕ್ಕೆ

ದಸರಾ ಮಹೋತ್ಸವಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಚಾಲನೆ

ಚಾಮುಂಡಿಬೆಟ್ಟದಲ್ಲಿ ಭದ್ರತೆ, ಸಿದ್ಧತೆ ಪರಿಶೀಲಿಸಿದ ಸಚಿವ ಎಸ್‌ಟಿಎಸ್



ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಮುಂಡಿಬೆಟ್ಟದಲ್ಲಿ ಭದ್ರತೆ ಹಾಗೂ ಸಿದ್ಧತಾ ಕಾರ್ಯ ಪರಿಶೀಲಿಸಿದರು.


ಮೈಸೂರು, ಸೆ.18(ಎಂಟಿವೈ)– ನಾಡಹಬ್ಬ ದಸರಾ ಮಹೋತ್ಸವ ಆರಂಭಕ್ಕೆ ದಿನಗಣನೆ ಆರಂಭವಾಗಿದ್ದು, ದಸರಾ ಮಹೋತ್ಸವಕ್ಕೆ ರಾಷ್ಟ್ರಪತಿ ದ್ರೌಪದಿ ಮುರ್ಮು ಚಾಲನೆ ನೀಡಲಿರುವ ಹಿನ್ನೆಲೆಯಲ್ಲಿ ಭಾನುವಾರ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಮುಂಡಿಬೆಟ್ಟಕ್ಕೆ ತೆರಳಿ ಭದ್ರತೆ ಹಾಗೂ ಸಿದ್ಧತಾ ಕಾರ್ಯವನ್ನು ಪರಿಶೀಲಿಸಿದರು.

ಪ್ರಸಕ್ತ ಸಾಲಿನ ದಸರಾ ಮಹೋತ್ಸವವನ್ನು ಸೆ.26ರಂದು ಬೆಳಗ್ಗೆ ಚಾಮುಂಡಿಬೆಟ್ಟದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ನಾಡದೇವಿಯ ಉತ್ಸವ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಲಿದ್ದು, ಅದಕ್ಕಾಗಿ ಬೆಟ್ಟದಲ್ಲಿ ಕೈಗೊಳ್ಳಬೇಕಾಗಿರುವ ಸಿದ್ಧತಾ ಕಾರ್ಯ ಹಾಗೂ ಭದ್ರತೆ ಬಗ್ಗೆ ಅವಲೋಕಿಸಿದರು. ಚಾಮುಂಡಿಬೆಟ್ಟದ ದೇವಾಲಯದ ಪಕ್ಕದ

- 1500 ಮಂದಿಗೆ ಆಸನದ ವ್ಯವಸ್ಥೆ
- ಅಂದು ಭಕ್ತರ ಪ್ರವೇಶಕ್ಕೆ ನಿರ್ಬಂಧವಿಲ್ಲ
- ರಾಷ್ಟ್ರಪತಿಗಳಿಗೆ ಭದ್ರತೆ ನೀಡುವ ಪ್ರೋಟೋಕಾಲ್ ಪರಿಗಣಿಸಲು ಸೂಚನೆ


ಪ್ರಾಂಗಣದಲ್ಲಿ ದಸರಾ ಉದ್ಘಾಟನಾ ಕಾರ್ಯಕ್ರಮ ವಾಟರ್ ಪ್ರೂಫ್ ವೇದಿಕೆ ನಿರ್ಮಿಸಲಾಗುತ್ತಿದ್ದು, ಗಣ್ಯರು ಹಾಗೂ ಸಾರ್ವಜನಿಕರು ಆಸೀನರಾಗಲು ಆಸನದ ವ್ಯವಸ್ಥೆ ಮಾಡಬೇಕು. ರಾಷ್ಟ್ರಪತಿಗಳ ವಾಹನ ನಿಲುಗಡೆ, ಅವರ ವಾಹನ ಬರುವಾಗ ಸಾರ್ವಜನಿಕರ ವಾಹನ ಸಂಚಾರಕ್ಕೆ ಕೈಗೊಳ್ಳಬೇಕಾದ ಕ್ರಮ ಸೇರಿದಂತೆ ಇನ್ನಿತರ ವಿಷಯಗಳ ಬಗ್ಗೆ ಅವಲೋಕಿಸಿ, ಮಾಹಿತಿ ಪಡೆದರಲ್ಲದೆ ವೇದಿಕೆ ನಿರ್ಮಾಣದ ▶ 8ನೇ ಪುಟಕ್ಕೆ

ರಾಜ್ಯಕ್ಕೆ ಸದ್ಯಕ್ಕಿಲ್ಲ ಚೀತಾ ಯೋಜನೆ



ಬೆಂಗಳೂರು,ಸೆ.18–ನಮೀಬಿಯಾದ ಚಿರತೆಗಳು ಭಾರತಕ್ಕೆ ಬಂದಿಳಿದಿದ್ದು, ಕರ್ನಾಟಕ ಅರಣ್ಯ ಇಲಾಖೆ ಅಧಿಕಾರಿಗಳು ಮತ್ತು ತಜ್ಞರ ನಿರಾಸಕ್ತಿಯಿಂದ ರಾಜ್ಯಕ್ಕೆ ಚೀತಾ ದರ್ಶನ ತಡವಾಗಲಿದೆ. ಬನ್ನೇರುಘಟ್ಟ ಜೈವಿಕ ಉದ್ಯಾನವನವು ಮೃಗಾಲಯದಲ್ಲಿ ಚೀತಾಗಳಿಗಾಗಿ ಹೆಚ್ಚು ಸಮಯ ಕಾಯಬೇಕಾಗುತ್ತದೆ ಎಂದು ಬಿಬಿಪಿ ಅಧಿಕಾರಿಗಳು ಹೇಳಿದ್ದಾರೆ. ಕರ್ನಾಟಕ ಮೃಗಾಲಯ ಪ್ರಾಧಿಕಾರ ಮೈಸೂರು ಮೃಗಾಲಯದಲ್ಲಿ ಯಶಸ್ವಿ ಸಂತಾನೋತ್ಪತ್ತಿಯ ನಿರೀಕ್ಷೆಯಲ್ಲಿದೆ. ಪ್ರಸ್ತುತ, ಮೃಗಾಲಯದಲ್ಲಿ ಒಂದು ಗಂಡು ಮತ್ತು ಎರಡು ಹೆಣ್ಣು ಚೀತಾಗಳಿದ್ದು, ಹೈದರಾಬಾದ್‌ನಲ್ಲಿ ಒಂದು ಗಂಡು ಚೀತಾ ಇದೆ. ಈ ಕುರಿತು ಮಾತನಾಡಿರುವ ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧಿಕಾರಿಯೊಬ್ಬರು, 'ಜಗತ್ತಿನಾದ್ಯಂತ ಪ್ರಾಣಿಸಂಗ್ರಹಾಲಯಗಳಲ್ಲಿ ಚಿರತೆಗಳ ಕೊರತೆಯಿದೆ, ಆದ್ದರಿಂದ ಅವುಗಳನ್ನು BBPಗೆ ಪಡೆಯುವುದು ಕಷ್ಟ, ಇದು ಬಹಳ ಹಿಂದಿನಿಂದಲೂ ಸಂಗ್ರಹಿಸಬೇಕಾದ ಕಾಡು ಪ್ರಾಣಿಗಳ ಪಟ್ಟಿಯಲ್ಲಿದೆ. ಮೈಸೂರು ಮೃಗಾಲಯದ ತಳಿಯ ಚೀತಾಗಳ ನಂತರ, BBP ಅವುಗಳನ್ನು ▶ 8ನೇ ಪುಟಕ್ಕೆ

ರಾಣಿ ಎಲಿಜಬೆತ್‌ಗೆ ಗೌರವ ಅರ್ಪಿಸಿದ ದ್ರೌಪದಿ ಮುರ್ಮು





ಲಂಡನ್, ಸೆ.18– ಬ್ರಿಟನ್ ರಾಣಿ 2ನೇ ಎಲಿಜಬೆತ್ ಅವರ ಪಾರ್ಥಿವ ಶರೀರವನ್ನು ಇರಿಸಲಾಗಿರುವ ಲಂಡನ್‌ನ ವೆಸ್ಟ್‌ಮಿನ್‌ಸ್ಟರ್ ಹಾಲ್‌ಗೆ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಭಾನುವಾರ ಭೇಟಿ ನೀಡಿದರು. ಮುರ್ಮು ಅವರು ತಮ್ಮ ಪರವಾಗಿ ಮತ್ತು ಭಾರತದ ನಾಗರಿಕರ ಪರವಾಗಿ ರಾಣಿಗೆ ಶ್ರದ್ಧಾಂಜಲಿ ಅರ್ಪಿಸಿದ್ದಾರೆ ಎಂದು ರಾಷ್ಟ್ರಪತಿ ಕಚೇರಿ ಟ್ವೀಟ್ ಮಾಡಿ ಮಾಹಿತಿ ನೀಡಿದೆ. ರಾಣಿಯವರ ಸ್ಮರಣೆಗಾಗಿ ಲಂಡನ್‌ನ ಲ್ಯಾಂಕಾಸ್ಟರ್ ಹೌಸ್‌ನಲ್ಲಿ ಇರಿಸಲಾಗಿರುವ ಸಂತಾಪ ಸೂಚಕ ಪುಸ್ತಕಕ್ಕೂ ರಾಷ್ಟ್ರಪತಿಯವರು ಸಹಿ ಹಾಕಿದರು. ಬ್ರಿಟನ್‌ನ ರಾಣಿ, 96 ವರ್ಷ ವಯಸ್ಸಿನ ಎರಡನೇ ಎಲಿಜಬೆತ್ ಸೆಪ್ಟೆಂಬರ್ 8ರ ರಾತ್ರಿ ನಿಧನರಾದರು. ಬ್ರಿಟಿಷ್ ಇತಿಹಾಸದಲ್ಲಿಯೇ ಸುದೀರ್ಘ ಕಾಲ ರಾಣಿಯಾಗಿದ್ದ ಹಿರಿಮೆ ಅವರದಾಗಿದೆ.

ಭರದಿಂದ ಸಾಗಿದೆ ವಿದ್ಯುತ್ ದೀಪಾಲಂಕಾರ ಕಾರ್ಯ

ಪ್ರತಿದಿನ ಸಂಜೆ ವೇಳೆ ಪ್ರಾಯೋಗಿಕ ಪರೀಕ್ಷೆ



ಮೈಸೂರು, ಸೆ.18(ಜಿಎ)– ಮೈಸೂರು ದಸರಾ ಮಹೋತ್ಸವ ದೀಪಾಲಂಕಾರ ಲೈಟುಗಳ ಅಳವಡಿಕೆ ಕಾರ್ಯ ಭರದಿಂದ ಸಾಗುತ್ತಿದ್ದು, ಪ್ರಾಯೋಗಿಕವಾಗಿ ಹಂತ ಹಂತದಲ್ಲಿಯೇ ದೀಪಗಳನ್ನು ಪರೀಕ್ಷಿಸಲಾಗುತ್ತಿದೆ. ದಸರಾ ಮಹೋತ್ಸವದಲ್ಲಿ ಜಂಬೂ ಸವಾರಿಯಂತೆ ವಿದ್ಯುತ್ ದೀಪಾಲಂಕಾರವು ಪ್ರಮುಖ ಆಕರ್ಷಣೆಯಾಗಿದ್ದು, ಈಗಾಗಲೇ ಮೈಸೂರು ನಗರದಾದ್ಯಂತ ದೀಪಾಲಂಕಾರ ಕಾರ್ಯವು ▶ 8ನೇ ಪುಟಕ್ಕೆ

ರಾಹುಲ್ ಪಾದಯಾತ್ರೆ ಜನರ ಪರವಾಗಿಯೇ ಹೊರತು ಸ್ವಾರ್ಥಕ್ಕಲ್ಲ

ಭಾರತ್ ಜೋಡೋ ಪಾದಯಾತ್ರೆ ಪೂರ್ವ ಸಿದ್ಧತಾ ಸಭೆಯಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ

ಬಾಯಿ ತಪ್ಪಿ ಮೋದಿ ಪಾದಯಾತ್ರೆ ಎಂದ ಸಿದ್ದರಾಮಯ್ಯ

ಸಿದ್ದರಾಮಯ್ಯ ಅವರು ತಮ್ಮ ಭಾಷಣದ ವೇಳೆ ರಾಹುಲ್ ಗಾಂಧಿ ಪಾದಯಾತ್ರೆ ಎಂದು ಹೇಳುವ ಬದಲು ಬಾಯಿ ತಪ್ಪಿ ಮೋದಿ ಪಾದಯಾತ್ರೆ ಎಂದು ಹೇಳಿದರು. ತಕ್ಷಣ ಪ್ರತಿಕ್ರಿಯಿಸಿದ ಕಾರ್ಯಕರ್ತರು ಮೋದಿ ಅಲ್ಲ, ರಾಹುಲ್ ಗಾಂಧಿ ಎಂದು ಕೂಗಿದಾಗ ಸಿದ್ದರಾಮಯ್ಯ ಅವರಿಗೆ ತಮ್ಮ ತಪ್ಪಿನ ಅರಿವಾಯಿತು. ಕೂಡಲೇ ಎಚ್ಚೆತ್ತುಕೊಂಡು ಹೌದು ಮೋದಿಯಲ್ಲ. ರಾಹುಲ್ ಗಾಂಧಿ ಎಂದು ಸ್ಪಷ್ಟಪಡಿಸಿದ ಪ್ರಸಂಗ ನಡೆಯಿತು.

ಮೈಸೂರು,ಸೆ.18(ಆರ್‌ಕೆಬಿ)–ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಕನ್ಯಾಕುಮಾರಿಯಿಂದ ಕಾಶ್ಮೀರದವರೆಗೆ ನಡೆಯಲಿರುವ ಭಾರತವನ್ನು ಒಗ್ಗೂಡಿಸುವ (ಭಾರತ್ ಜೋಡೋ) ಪಾದಯಾತ್ರೆ ಮೈಸೂರಿಗೆ ಬಂದಾಗ ಹೆಚ್ಚಿನ ಜನರು ಸೇರುವ ಮೂಲಕ ಯಶಸ್ವಿಗೊಳಿಸಿ, ರಾಹುಲ್ ಗಾಂಧಿ ಅವರಿಗೆ ಹೆಗಲಿಗೆ ಹೆಗಲು ಕೊಟ್ಟು ಶಕ್ತಿ ತುಂಬುವಂತೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಕಾಂಗ್ರೆಸ್ ಕಾರ್ಯಕರ್ತರಿಗೆ ಕರೆ ನೀಡಿದರು.

ಮೈಸೂರಿನ ರೈಲ್ವೆ ನಿಲ್ದಾಣದ ಬಳಿಯಿರುವ ಕಾಂಗ್ರೆಸ್ ಭವನದಲ್ಲಿ ಭಾನುವಾರ ಮೈಸೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಆಯೋಜಿಸಿದ್ದ ಭಾರತ್ ಜೋಡೋ ಕಾರ್ಯಕ್ರಮದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿದರು. ರಾಹುಲ್‌ಗಾಂಧಿ ಅವರು ಭಾರತವನ್ನು ಒಗ್ಗೂಡಿಸಲು ಕೈಗೊಂಡಿರುವ ಪಾದಯಾತ್ರೆ ಸಾಮಾನ್ಯ ಜನರ ಪರವಾಗಿ ಮಾಡುತ್ತಿದ್ದಾರೆಯೇ ಹೊರತು ತಮ್ಮ ಸ್ವಾರ್ಥಕ್ಕಾಗಿ ಅಲ್ಲ. ದೇಶ ಜೋಡಿಸುವ ಇಂತಹ ಬೃಹತ್ ಪಾದಯಾತ್ರೆಯನ್ನು ಸ್ವಾತಂತ್ರ್ಯ ನಂತರ ಯಾವ ಪಕ್ಷದವರೂ ಮಾಡಿಲ್ಲ ಎಂದು ಹೇಳಿದರು.

ನರೇಂದ್ರ ಮೋದಿ 8 ವರ್ಷಗಳ ಆಡಳಿತದಲ್ಲಿ ತಳ ಸಮುದಾಯ, ಮಧ್ಯಮ ವರ್ಗದ ಜನರು ನೆಮ್ಮದಿ ಇಲ್ಲದಂತಾಗಿದೆ. ಸಮಾಜದಲ್ಲಿ ಶಾಂತಿ ಇಲ್ಲ. ಧರ್ಮ ರಾಜಕಾರಣದ ಮೂಲಕ ದೇಶವನ್ನು ಒಡೆಯಲಾಗುತ್ತಿದೆ. ಬಿಜೆಪಿ ▶ 8ನೇ ಪುಟಕ್ಕೆ



ಭಾನುವಾರ ಮೈಸೂರಿನ ಕಾಂಗ್ರೆಸ್ ಕಚೇರಿ ಆವರಣದಲ್ಲಿ ರಾಹುಲ್‌ಗಾಂಧಿ ಅವರ 'ಭಾರತ್ ಜೋಡೋ ಪಾದಯಾತ್ರೆ'ಯ ಪೂರ್ವ ಸಿದ್ಧತಾ ಸಭೆಯಲ್ಲಿ ವಿಪಕ್ಷ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಶಾಸಕ ತನ್ವೀರ್‌ಸೇಠ್, ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಜಾನ್ ರೋಸಿ, ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಶಾಸಕರಾದ ವಾಸು, ಎಂ.ಕೆ.ಸೋಮಶೇಖರ್, ಜಿಲ್ಲಾ ಗ್ರಾಮಾಂತರ ಕಾಂಗ್ರೆಸ್ ಅಧ್ಯಕ್ಷ ಡಾ. ಬಿ.ಜೆ.ವಿಜಯಕುಮಾರ್, ನಗರಾಧ್ಯಕ್ಷ ಆರ್.ಮೂರ್ತಿ, ಶಿವಣ್ಣ ಇನ್ನಿತರರು ಶಕ್ತಿ ಪ್ರದರ್ಶಿಸಿದರು.

> “ಭಾರತ್ ಜೋಡೋ ಪೂರ್ವ ಸಿದ್ಧತಾ ಸಭೆಯಲ್ಲಿ ವೈದ್ಯರು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರ ಆರೋಗ್ಯ ತಪಾಸಣೆ ಮಾಡಿದರು. ತಪಾಸಣೆಗೆ ನಿರಾಕರಿಸಿದ ಅವರು ನಂತರ ವೈದ್ಯರು ಮತ್ತು ಎಲ್ಲರ ಒತ್ತಡಕ್ಕೆ ಮಣಿದು ತಪಾಸಣೆಗೆ ಒಳಗಾದರು. ಮನೆ ಬಿಟ್ಟು 11 ದಿನಗಳಾಗಿದ್ದರಿಂದ ತುಂಬಾ ಸುಸ್ತಾಗಿದ್ದೇನೆ. ಪ್ರವಾಸ ಮಾಡುತ್ತಿದ್ದೇನೆ. ದೇಹದ ಉಷ್ಣಾಂಶ 100 ಡಿಗ್ರಿ ಇರುವುದರಿಂದಾಗಿ ವೈದ್ಯರು ತಪಾಸಣೆ ಮಾಡಿಸಿಕೊಳ್ಳಲು ಸೂಚಿಸಿದ್ದರಿಂದ ತಪಾಸಣೆಗೆ ಒಳಗಾಗಿದ್ದೇನೆ. **–ಡಿ.ಕೆ.ಶಿವಕುಮಾರ್, ಕೆಪಿಸಿಸಿ ಅಧ್ಯಕ್ಷ**

ರಾಹುಲ್‌ಗಾಂಧಿಗೆ ಬಲ ತುಂಬಲು ಡಿಕೆಶಿ ಕರೆ

ಮೈಸೂರು: ಭಾರತವನ್ನು ಒಗ್ಗೂಡಿಸಲು ರಾಹುಲ್ ಗಾಂಧಿ ಕೈಗೊಂಡಿರುವ ಪಾದಯಾತ್ರೆ ವಿಜಯದಶಮಿ ವೇಳೆಗೆ ಮೈಸೂರಿಗೆ ಬರಲಿದ್ದು, ಪ್ರತಿ ಕ್ಷೇತ್ರದಿಂದ ಕನಿಷ್ಠ 10ರಿಂದ 15 ಸಾವಿರ ಜನರು ಭಾಗವಹಿಸಬೇಕು. ದೇಶಕ್ಕಾಗಿ ಕಾರ್ಯಕರ್ತರು ಪಾದಯಾತ್ರೆಯಲ್ಲಿ ಸಕ್ರಿಯವಾಗಿ ಹೆಚ್ಚು ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು. ರಾಹುಲ್‌ಗಾಂಧಿ ಅವರಿಗೆ ಬಲ ತುಂಬಬೇಕು ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಕರೆ ನೀಡಿದರು. ಬೆಲೆಗಳು ಗಗನಕ್ಕೇರುತ್ತಿದ್ದರೆ, ಆದಾಯ ಪಾತಾಳಕ್ಕೆ ಇಳಿದಿದೆ. ಬೆಂಗಳೂರು ಭ್ರಷ್ಟಾಚಾರದ ರಾಜಧಾನಿಯಂತಾಗಿದೆ. ರೈತರು, ಜನಸಾಮಾನ್ಯರಿಗೆ ಭದ್ರತೆಯೇ ಇಲ್ಲದಂತಾಗಿದೆ. ರಾಹುಲ್‌ಗಾಂಧಿ ಅವರ ಜನಸಾಮಾನ್ಯರ ಪರ ಕಳಕಳಿಯನ್ನು ದೇಶದ ಜನರು ಅರ್ಥ ಮಾಡಿಕೊಳ್ಳಬೇಕು. ಪ್ರಧಾನಿ ಸ್ಥಾನವನ್ನು ತ್ಯಾಗ ಮಾಡಿರುವ ಅವರು ಬಿಜೆಪಿ ಯಾವ ಬೆದರಿಕೆಗೂ ಮಣಿಯುವುದಿಲ್ಲ. ಜೈಲಿಗೆ ಹೋಗಲು ಸಿದ್ಧರಾಗಿದ್ದಾರೆ ಎಂದರು.

ಮೈಸೂರು ಮಿತ್ರ ಸೋಮವಾರ 19 ಸೆಪ್ಟೆಂಬರ್ 2022

ರಸ್ತೆಯಲ್ಲಿ ಬಿದ್ದಿದ್ದ ಹಣವಿದ್ದ ಪರ್ಸ್ ಮಾಲೀಕರಿಗೆ ಹಿಂದಿರುಗಿಸಿದ ಪ್ರಾಮಾಣಿಕ ಗೃಹರಕ್ಷಕ ದಳದ ಮಹಿಳಾ ಸಿಬ್ಬಂದಿಗೆ ಪ್ರಶಂಸೆ

ಮೈಸೂರು, ಸೆ.18(ಎಂಟಿವೈ)– ರಸ್ತೆಯಲ್ಲಿ ಬಿದ್ದಿದ್ದ ಹಣವಿದ್ದ ಪರ್ಸ್‌ವೊಂದನ್ನು ಹಿಂದಿರುಗಿಸಿ ಪ್ರಾಮಾಣಿಕತೆ ಮೆರೆದ ಗೃಹರಕ್ಷಕ ಮಹಿಳಾ ಸಿಬ್ಬಂದಿಯೊಂದಿಗೆ ಮೈಸೂರಿನ ಎನ್.ಆರ್.ಠಾಣೆ ಪೊಲೀಸರು ಕರ್ತವ್ಯನಿಷ್ಠೆಯ ಪ್ರಶಂಸನಾ ಪತ್ರ ನೀಡಿ ಉತ್ತೇಜಿಸಿದ್ದಾರೆ.



ಎನ್.ಆರ್.ಠಾಣೆ ವ್ಯಾಪ್ತಿಯಲ್ಲಿ ಬಿವಿಎನ್ ವೃತ್ತದಲ್ಲಿ ಆ.31ರಂದು ಕರ್ತವ್ಯ ನಿರ್ವಹಿಸುತ್ತಿದ್ದ ಹೋಂ ಗಾರ್ಡ್ ಆರ್. ಮಂಗಳಾ ಎಂಬುವರಿಗೆ ರಸ್ತೆಯ ಹಂಪ್ಸ್ ಬಳಿ ಪರ್ಸ್‌ವೊಂದು ಸಿಕ್ಕಿತ್ತು. ಅದರೊಳಗೆ 20 ಸಾವಿರಕ್ಕೂ ಹೆಚ್ಚು ನಗದು ಇದ್ದದ್ದು ಕಂಡುಬಂದಿತ್ತು. ಅದನ್ನು ಇಟ್ಟುಕೊಂಡಿದ್ದ ಮಂಗಳಾ ಅವರು ಪರ್ಸ್ ಹುಡುಕಿಕೊಂಡು ಬಂದ ದಂಪತಿಗೆ ಅಗತ್ಯ ಮಾಹಿತಿ ಪಡೆದು ಹಿರಿಯ ಪೇದೆಯ ಸಮ್ಮುಖದಲ್ಲಿ ಹಿಂದಿರುಗಿಸಿದರು. ಈ ವಿಚಾರವನ್ನು ತಿಳಿದ ಎನ್.ಆರ್. ಠಾಣೆಯ ಇನ್ಸ್‌ಪೆಕ್ಟರ್ ಅಜರುದ್ದೀನ್ ಹೋಂ ಗಾರ್ಡ್ ಆರ್.ಮಂಗಳಾ ಅವರಿಗೆ ಪ್ರಶಂಸನಾ ಪತ್ರ ನೀಡಿದ್ದಾರೆ. ಮೈಸೂರಿನ ಸಿದ್ದಾರ್ಥ ನಗರದ ಮೋಕ್ಷ ಮಾರ್ಗದ ನಿವಾಸಿಯಾಗಿರುವ ಮಂಗಳಾ 2014ರಿಂದ ಹೋಂಗಾರ್ಡ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ.

ಕಿಕ್ ಬಾಕ್ಸಿಂಗ್‌ನಲ್ಲಿ ಚಿನ್ನ, ಬೆಳ್ಳಿ ಪದಕ ವಿಜೇತರು

ಮೈಸೂರು, ಸೆ.18–ಇತ್ತೀಚೆಗೆ ಕೊಲ್ಕತ್ತಾ ಮತ್ತು ಚೆನ್ನೈನಲ್ಲಿ ನಡೆದ ಕಿಕ್ ಬಾಕ್ಸಿಂಗ್ ಸ್ಪರ್ಧೆಯಲ್ಲಿ ಕೋಚ್ ಸಂಜಯ್ ಕುಮಾರ್ ಎಂ.ಕೆ. ನೇತೃತ್ವದ (ವಾಕೋ ಇಂಡಿಯಾ ಮಾನ್ಯತೆ ಪಡೆದ) ಮೈಸೂರಿನ ಅಪ್ಪು ಫೈಟ್ ಕ್ಲಬ್ ಕಿಕ್ ಬಾಕ್ಸಿಂಗ್ ಕ್ರೀಡಾಪಟುಗಳಾದ ವಿನಯ್ ಹಾಗೂ ಉಲ್ಲಾಸ್ ರಾಷ್ಟ್ರೀಯ ಮಟ್ಟದಲ್ಲಿ ಚಿನ್ನ ಹಾಗೂ ಬೆಳ್ಳಿ ಪದಕ ಪಡೆದುಕೊಂಡಿದ್ದಾರೆ.



17 ವರ್ಷದ ವಿನಯ್ ಕೊಲ್ಕತ್ತಾದಲ್ಲಿ ನಡೆದ ಕಿರಿಯ ನ್ಯಾಷನಲ್ಸ್ ಕಿಕ್ ಬಾಕ್ಸಿಂಗ್ k1 45 ಕೆ.ಜಿ. ವಿಭಾಗದಲ್ಲಿ ಚಿನ್ನದ ಪದಕವನ್ನು ಗೆದ್ದಿದ್ದಾರೆ. ಇವರು ಬಿಜಿಎಸ್ ಕಾಲೇಜಿನಲ್ಲಿ ದ್ವಿತೀಯ ಪಿಯುಸಿ ವ್ಯಾಸಂಗ ಮಾಡುತ್ತಿದ್ದಾರೆ. 19 ವರ್ಷದ ಉಲ್ಲಾಸ್ ಚೆನ್ನೈನಲ್ಲಿ ನಡೆದ ಹಿರಿಯರ ನ್ಯಾಷನಲ್ಸ್ ಕಿಕ್ ಲೈಟ್ 79 ಕೆ.ಜಿ. ವಿಭಾಗದಲ್ಲಿ ಬೆಳ್ಳಿಯ ಪದಕವನ್ನು ಗೆದ್ದಿದ್ದಾರೆ. ಇವರು ಕಾಲೇಜಿನಲ್ಲಿ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾರೆ. ಗೆದ್ದ ಪದಕಗಳನ್ನು ದಿವಂಗತ ನಟ ಪುನೀತ್ ರಾಜಕುಮಾರ್ ಅವರಿಗೆ ಸಮರ್ಪಿಸಲಾಗುವುದು ಎಂದು ತರಬೇತುದಾರ ಸಂಜಯ್‌ಕುಮಾರ್ ಎಂ.ಕೆ. ತಿಳಿಸಿದ್ದಾರೆ.



ಕಾರ್ಯನಿಮಿತ್ತ ಭಾನುವಾರ ಮೈಸೂರಿಗೆ ಭೇಟಿ ನೀಡಿದ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರನ್ನು ಮೈಸೂರು ವಿಮಾನ ನಿಲ್ದಾಣದಲ್ಲಿ ಜಿಪಂ ಮಾಜಿ ಅಧ್ಯಕ್ಷರೂ ಆದ ಮೈಸೂರು ತಾಲೂಕು ಒಕ್ಕಲಿಗ ಸಂಘದ ಅಧ್ಯಕ್ಷ ಕೂರ್ಗಳ್ಳಿ ಮಾದೇವ್, ಉಪಾಧ್ಯಕ್ಷ ಬೆಳವಾಡಿ ಶ್ರೀನಿವಾಸ್, ಕಾರ್ಯದರ್ಶಿ ಕೃಷ್ಣೇಗೌಡ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಗ್ರಾಮಾಂತರ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ವಕೀಲ ಹಾಗೂ ಯುವ ಮುಖಂಡ ಜೀವನ್ ಮಾದೇವ್ ಇನ್ನಿತರರು ಸ್ವಾಗತಿಸಿದರು.



ಮೈಸೂರಿನ ವಾರ್ಡ್ ನಂ.18ರ ಯಾದವಗಿರಿಯಲ್ಲಿ 15ನೇ ಹಣಕಾಸು ಯೋಜನೆಯಡಿ ಮುಖ್ಯರಸ್ತೆಗಳ ಮರು ಡಾಂಬರೀಕರಣಕ್ಕೆ ಚಾಲನೆ ನೀಡಲಾಯಿತು. ಈ ವೇಳೆ ನಗರಪಾಲಿಕೆ ಸದಸ್ಯ ಬಿ.ವಿ.ರವೀಂದ್ರ, ಮುಖಂಡರಾದ ಪ್ರಶಾಂತ್, ಕಿರಣ್ ಬೋಳಾರ್, ವಿಜಯ್‌ಕುಮಾರ್, ಸುದರ್ಶನ್, ಮಂಜುನಾಥ್, ಯೋಗಾನಂದ, ಇಂಜಿನಿಯರ್ ರಾಮಣ್ಣ ಇನ್ನಿತರರಿದ್ದರು.

ಸೆ.25ರಂದು ಕೊಡಗು ಸಹಕಾರ ಸಂಘದ ವಾರ್ಷಿಕ ಮಹಾಸಭೆ

ಮೈಸೂರು, ಸೆ. 18– ಕೊಡಗು ಸಹಕಾರ ಸಂಘದ 2021–22ನೇ ವಾರ್ಷಿಕ ಸರ್ವ ಸದಸ್ಯರ ಮಹಾಸಭೆಯು ಸೆ.25ರಂದು ಬೆಳಗ್ಗೆ 10.30 ಗಂಟೆಗೆ ಜಯಲಕ್ಷ್ಮಿಪುರಂನಲ್ಲಿರುವ ಸಂಘದ ಆವರಣದಲ್ಲಿ ನಡೆಯಲಿದೆ. ಸಭೆಯ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಎ.ಸಿ.ನಂಜಮ್ಮ ವಹಿಸಲಿದ್ದಾರೆ.

ಇದೇ ವೇಳೆ 2021–22ನೇ ಸಾಲಿನ ಪರೀಕ್ಷೆಯಲ್ಲಿ ಅತೀ ಹೆಚ್ಚು ಅಂಕ ಪಡೆದು ಉತ್ತೀರ್ಣರಾದ ಸಂಘದ ಸದಸ್ಯರ ಮಕ್ಕಳನ್ನು ಸನ್ಮಾನಿಸಲಾಗುವುದು. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿಯಲ್ಲಿ ಅತೀ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗೆ ಪುಳಿಯಂಡ ಎ. ದೇವಯ್ಯನವರ ಸ್ಮರಣಾರ್ಥ ಬಹುಮಾನ ನೀಡಲಾಗುವುದು.

ಎಸ್‌ಎಸ್‌ಎಲ್‌ಸಿ (ಸಿಬಿಎಸ್‌ಇ) ಟಾಪರ್‌ಗೆ ದಿವಂಗತ ಇಟ್ಟಿರ ಕಾರ್ಯಪ್ಪ ಮತ್ತು ದಿವಂಗತ ಪಾರ್ವತಿ ಕುಟ್ಟಪ್ಪ ವಿದ್ಯಾರ್ಥಿ ವೇತನ, ಬಿಬಿಎಂ ಮತ್ತು ಬಿಸಿಎ ಟಾಪರ್‌ಗೆ ದಿವಂಗತ ಮಲ್ಲಂಗಡ ಲಾಲಿ ಗಣಪತಿ ಸ್ಮರಣಾರ್ಥ ಬಹುಮಾನ, 7ನೇ ತರಗತಿ ಟಾಪರ್‌ಗೆ ದಿವಂಗತ ಮುಂಜಾಂದಿರ ಚಿಮ್ಮಿ ಉತ್ತಯ್ಯ ಸ್ಮರಣಾರ್ಥ ಬಹುಮಾನ, ಬಿ.ಎ. ಟಾಪರ್‌ಗೆ ದಿವಂಗತ ದಾಸಂಡ ಸಿ.ತಮ್ಮಯ್ಯ ಸ್ಮರಣಾರ್ಥ ಬಹುಮಾನ, ಎಂ.ಎ., ಎಂ.ಕಾಂ. ಮತ್ತು ಎಂ.ಎಸ್ಸಿ ಟಾಪರ್ಸ್‌ಗೆ ದಿವಂಗತ ವಲ್ಲಂಡ ಪಿ. ಮುತ್ತಣ್ಣ ಸ್ಮರಣಾರ್ಥ ಬಹುಮಾನ, ಬಿ.ಇ., ಎಂ.ಎ. ಇಂಗ್ಲಿಷ್ ಸಾಹಿತ್ಯ, ದ್ವಿತೀಯ ಪಿಯುಸಿ (ಕನ್ನಡ ಮತ್ತು ಇಂಗ್ಲಿಷ್)ಯಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಸಂಘವು ವಿದ್ಯಾರ್ಥಿ ವೇತನ ನೀಡಲಾಗುವುದು. ಅರ್ಹ ವಿದ್ಯಾರ್ಥಿಗಳು ಅರ್ಜಿಯ ಜೊತೆ ಅಂಕಪಟ್ಟಿಯ ಪ್ರತಿಯನ್ನು ಸೆ.20ರೊಳಗೆ ಸಂಘದ ಕಾರ್ಯದರ್ಶಿಯವರಿಗೆ ತಲುಪಿಸುವಂತೆ ಸಂಘದ ಕಾರ್ಯ ನಿರ್ವಾಹಕ ನಿರ್ದೇಶಕಿ ಪೂಂಜಂಡ ಲಿಲ್ಲಿ ಅಪ್ಪಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನಿಧನ

ಶ್ರೀಮತಿ ನಾಗಮ್ಮ



ಮೈಸೂರು, ಸೆ.18–ಮೈಸೂರು ತಾಲೂಕು ಸಿದ್ದಲಿಂಗಾಪುರದ ಹಿರಿಯ ರಂಗ ಕಲಾವಿದ ದಿವಂಗತ ಸಿದ್ದರಾಮಯ್ಯ ಅವರ ಪತ್ನಿ ನಾಗಮ್ಮ(75) ಭಾನುವಾರ ನಿಧನರಾದರು.

ಮೃತರು ನಾಲ್ವರು ಪುತ್ರರು, ಮೂವರು ಪುತ್ರಿಯರು ಹಾಗೂ ಅಪಾರ ಬಂಧುವರ್ಗವನ್ನು ಅಗಲಿದ್ದು, ಅಂತ್ಯಕ್ರಿಯೆ ನಾಳೆ (ಸೋಮವಾರ) ಸಿದ್ದಲಿಂಗಾಪುರದಲ್ಲಿರುವ ಅವರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಂಡ್ಯ ಜಿಲ್ಲೆಯ ಕೆಆರ್ ಪೇಟೆ ತಾಲೂಕಿನ ಕಾವೇರಿ–ಹೇಮಾವತಿ–ಲಕ್ಷ್ಮಣತೀರ್ಥ ನದಿಗಳ ತ್ರಿವೇಣಿ ಸಂಗಮದಲ್ಲಿ

ಅ.14ರಿಂದ 16ರವರೆಗೆ ಮಹಾಕುಂಭಮೇಳ

ಮೈಸೂರು,ಸೆ.18(ಪಿಎಂ)– ಮಲೆ ಮಹದೇಶ್ವರರು ಶ್ರೀಶೈಲದಿಂದ ಬಂದು ಮೊದಲು ಪಾದ ಸ್ಪರ್ಶ ಮಾಡಿದ ಪವಿತ್ರಸ್ಥಳವಾದ ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆ ತಾಲೂಕಿನ ಅಂಬಿಗರಹಳ್ಳಿ–ಸಂಗಾಪುರ–ಪುರ ಗ್ರಾಮಗಳ ಕಾವೇರಿ–ಹೇಮಾವತಿ–ಲಕ್ಷ್ಮಣ ತೀರ್ಥ ನದಿಗಳ ತ್ರಿವೇಣ ಸಂಗಮದಲ್ಲಿ ರಾಜ್ಯ ಸರ್ಕಾರ, ಮಂಡ್ಯ ಜಿಲ್ಲಾಡಳಿತ ಮತ್ತು ಶ್ರೀ ಮಲೆ ಮಹದೇಶ್ವರ ಜಯಂತೋತ್ಸವ ಸಮಿತಿ ಸಂಯುಕ್ತಾಶ್ರಯದಲ್ಲಿ ಅ.14ರಿಂದ 16ರವರೆಗೆ ಮಹಾಕುಂಭಮೇಳ ಹಮ್ಮಿಕೊಳ್ಳಲಾಗಿದೆ ಎಂದು ಕುಂಭಮೇಳದ ಸಂಚಾಲಕ ಡಾ.ಅಂ.ಚಿ.ಸಣ್ಣಸ್ವಾಮಿಗೌಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಹಿಂದೆ 2013ರಲ್ಲಿ ಇಲ್ಲಿ ಮಹಾ ಕುಂಭಮೇಳ ಆಯೋಜಿಸಲಾಗಿತ್ತು. ಇದೀಗ 2ನೇ ಬಾರಿಗೆ ನಡೆಯುತ್ತಿರುವ ಐತಿಹಾಸಿಕ ಕುಂಭಮೇಳದಲ್ಲಿ ಪಾಲ್ಗೊಳ್ಳುವಂತೆ ಉತ್ತರ ಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಸಚಿವ ನಾರಾಯಣಗೌಡ ಆಹ್ವಾನಿಸಿದ್ದು, ಅವರು ಅ.16ರಂದು ಆಗಮಿಸಲು ಸಮ್ಮತಿಸಿದ್ದಾರೆ. ಅಂದು ರಾಜ್ಯದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಸೇರಿದಂತೆ ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಹಲವು ಸಚಿವರು ಪಾಲ್ಗೊಳ್ಳಲಿದ್ದಾರೆ ಎಂದು ಹೇಳಿದರು.

ಇಲ್ಲಿನ 30 ಎಕರೆ ಭೂ ಪ್ರದೇಶದಲ್ಲಿ ಮಹಾ ಕುಂಭಮೇಳದ ಸಿದ್ಧತೆಗಳು ಮಂಡ್ಯ ಜಿಲ್ಲಾಡಳಿತ ಮತ್ತು ರಾಜ್ಯ ಸರ್ಕಾರದಿಂದ ಭರದಿಂದ ನಡೆಯುತ್ತಿದೆ. ಕೈಗಾರಿಕಾ ಮೇಳ, ಕೃಷಿ ಮೇಳ ಸೇರಿದಂತೆ ಹತ್ತು ಹಲವು ವಸ್ತು ಪ್ರದರ್ಶನಗಳು ಕುಂಭಮೇಳದ ಅಂಗವಾಗಿ ಆಯೋಜನೆಗೊಳ್ಳಲಿವೆ. ಕಾಶಿಯಿಂದ 25 ಮಂದಿ ಪಂಡಿತರು ಆಗಮಿಸಲಿದ್ದಾರೆ. ಮೂರು ದಿನಗಳು ಸಂಜೆ ಗಂಗಾರತಿ ಕಾರ್ಯಕ್ರಮ ವಿಶೇಷವಾಗಿ ನಡೆಯಲಿದೆ. ಅ.6ರಂದು ಮಲೆ ಮಹಾದೇಶ್ವರ ಬೆಟ್ಟದಿಂದ ಜ್ಯೋತಿ ಯಾತ್ರೆ ಆರಂಭವಾಗಲಿದ್ದು, ಮೂರು ಜ್ಯೋತಿಗಳು ಮೂರು ಮಾರ್ಗಗಳಲ್ಲಿ ಸಂಚರಿಸಿ ಅ.12ರಂದು ಕೆಆರ್ ಪೇಟೆ ತಲುಪಲಿವೆ. ಬಳಿಕ ಪಟ್ಟಣದಲ್ಲಿ ಸುಮಾರು 50 ಸಾವಿರ ಭಕ್ತಾದಿಗಳು ಪಾಲ್ಗೊಳ್ಳುವ ಮೆರವಣಿಗೆ ಮೂಲಕ ಜ್ಯೋತಿ ಯಾತ್ರೆಗಳು ತ್ರಿವೇಣಿ ಸಂಗಮಕ್ಕೆ ಬರಲಿವೆ ಎಂದು ವಿವರಿಸಿದರು.

5ರಿಂದ 6 ಲಕ್ಷ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಭಕ್ತರ ಅನುಕೂಲಕ್ಕೆ ಎಲ್ಲಾ ಮೂಲಸೌಲಭ್ಯ ಕಲ್ಪಿಸುವ ಕೆಲಸ ಕಾರ್ಯಗಳು ಭರದಿಂದ ಸಾಗಿವೆ. ಮೂರು ದಿನಗಳು ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ. ಕುಂಭಮೇಳ ಯಶಸ್ವಿಗೆ ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಕೆ.ಗೋಪಾಲಯ್ಯ, ಸಚಿವ ನಾರಾಯಣಗೌಡ ಅವರು ವಿಶೇಷ ಆಸಕ್ತಿ ವಹಿಸಿದ್ದಾರೆ. ಸೆ.23ರಂದು ಸುತ್ತೂರು ಶ್ರೀಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಆದಿಚುಂಚನಗಿರಿ ಶ್ರೀ ನಿರ್ಮಲಾನಂದನಾಥ ಸ್ವಾಮೀಜಿ ಸೇರಿದಂತೆ ಇನ್ನಿತರ ಸಾಧು ಸಂತರ ಸಮ್ಮುಖದಲ್ಲಿ ನಡೆಯುವ ಪೂರ್ವಭಾವಿ ಸಭೆಯಲ್ಲಿ ಕುಂಭಮೇಳಕ್ಕೆ ಆಗಮಿಸುವ ಗಣ್ಯಾತಿಗಣ್ಯರ ಅಂತಿಮ ಪಟ್ಟಿ ಸಿದ್ಧಗೊಳ್ಳಲಿದೆ ಎಂದು ತಿಳಿಸಿದರು.

ಶ್ರೀ ಮಲೆ ಮಹದೇಶ್ವರ ಜಯಂತೋತ್ಸವ ಸಮಿತಿ ಅಧ್ಯಕ್ಷರೂ ಆದ ವಿಧಾನಪರಿಷತ್ ಮಾಜಿ ಸದಸ್ಯ ಡಿ.ಮಾದೇಗೌಡ ಮಾತನಾಡಿ, ಇದು ಕೇವಲ ಧಾರ್ಮಿಕ ಆಚರಣೆಯಲ್ಲ. ಇದೊಂದು ಜನಜಾಗೃತಿ ಕಾರ್ಯಕ್ರಮ. ಮಹದೇಶ್ವರರರು ಈ ಭಾಗದಲ್ಲಿ ಲೋಕ ಕಲ್ಯಾಣಕ್ಕಾಗಿ ಸಂಚರಿಸಿದವರು. ಮಲೆ ಮಹಾದೇಶ್ವರರ ಜನಪದ ಸಾಹಿತ್ಯ ಬೃಹತ್ ಆಗಿದ್ದು, 1982ರಲ್ಲಿ ಇದು ಪ್ರಕಟವಾಯಿತು. ಅದುವರೆಗೆ ಬೃಹತ್ ಮಹಾಕಾವ್ಯ ಕನ್ನಡದಲ್ಲಿ ಇರಲಿಲ್ಲ. ಮಹದೇಶ್ವರರು ಪಾದವಿಟ್ಟ ಸ್ಥಳಗಳೆಲ್ಲವೂ ಪುಣ್ಯಕ್ಷೇತ್ರವಾಗಿವೆ ಎಂದು ಹೇಳಿದರು.

ಶ್ರೀ ಮಲೆ ಮಹದೇಶ್ವರ ಜಯಂತೋತ್ಸವ ಸಮಿತಿ ಮೂಲಕವೇ ಇಲ್ಲಿ ಕುಂಭಮೇಳ ಪ್ರಾರಂಭವಾಯಿತು. ಮೊದಲ ಕುಂಭಮೇಳಕ್ಕೆ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯ 50 ಲಕ್ಷ ರೂ. ಅನುದಾನ ಕಲ್ಪಿಸಿದ್ದರು. ಅಲ್ಲದೆ, ಈ ಕುಂಭಮೇಳದ ಬಳಿಕ 3 ಕೋಟಿ ರೂ. ವೆಚ್ಚದ ಅಭಿವೃದ್ಧಿ ಕಾಮಗಾರಿಗಳು ಆ ಭಾಗದಲ್ಲಿ ನಡೆಯಿತು ಎಂದರು. ಸರ್ಕಾರ ಇಂದು ಹತ್ತಾರು ಕೋಟಿ ವೆಚ್ಚ ಮಾಡಿ ಕುಂಭಮೇಳ ಆಯೋಜಿಸುತ್ತಿದ್ದು, ಭವಿಷ್ಯದಲ್ಲಿ ಈ ಮೇಳವು ಕೇಂದ್ರ ಸರ್ಕಾರದ ಗಮನ ಸೆಳೆಯುವ ಎಲ್ಲಾ ಸಾಧ್ಯತೆಗಳಿವೆ. ಜೊತೆಗೆ ಪ್ರವಾಸೋದ್ಯಮ ಅಭಿವೃದ್ಧಿಗೆ ಈ ತ್ರಿವೇಣಿ ಸಂಗಮ ಸೂಕ್ತ ಸ್ಥಳ. ಕಾವೇರಿ ಪ್ರವಾಸೋದ್ಯಮ ಅಭಿವೃದ್ಧಿ ಪ್ರಾಧಿಕಾರ ರಚನೆಯಾಗಿದೆ. ಆದರೆ ಚಾಲನೆ ಆಗಿಲ್ಲ. ಈ ಮೇಳದ ಮೂಲಕ ಅದಕ್ಕೆ ಚಾಲನೆ ದೊರೆಯುವ ಸಾಧ್ಯತೆ ಇದೆ ಎಂದು ಅಭಿಪ್ರಾಯಪಟ್ಟರು. ಶ್ರೀ ಮಲೆ ಮಹದೇಶ್ವರ ಜಯಂತೋತ್ಸವ ಸಮಿತಿಯ ಚಾಮರಾಜನಗರ ಅಧ್ಯಕ್ಷ ಪ್ರಭುಸ್ವಾಮಿ ಗೋಷ್ಠಿಯಲ್ಲಿದ್ದರು.

ಉತ್ತರಪ್ರದೇಶ ಸಿಎಂ ಯೋಗಿ ಆದಿತ್ಯನಾಥ್ ಅ.16ರಂದು ಭಾಗಿ



5ರಿಂದ 6 ಲಕ್ಷ ಭಕ್ತರು ಪಾಲ್ಗೊಳ್ಳುವ ನಿರೀಕ್ಷೆ ಇದೆ. ಭಕ್ತರ ಅನುಕೂಲಕ್ಕೆ ಎಲ್ಲಾ ಮೂಲಸೌಲಭ್ಯ ಕಲ್ಪಿಸುವ ಕೆಲಸ ಕಾರ್ಯಗಳು ಭರದಿಂದ ಸಾಗಿವೆ. 3 ದಿನ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯಲಿವೆ.

ಜಂಬೂಸವಾರಿಯ ಮಂಡ್ಯ ಜಿಲ್ಲಾ ಸ್ತಬ್ಧಚಿತ್ರದಲ್ಲಿ ಮೇಳಕ್ಕೆ ಪ್ರಚಾರ ನೀಡಲು ಕೋರಿಕೆ

"ಕುಂಭಮೇಳಕ್ಕೆ ಕೇಂದ್ರದ ಪ್ರವಾಸೋದ್ಯಮ ಸಚಿವರನ್ನು ಆಹ್ವಾನಿಸುವಂತೆ ಸರ್ಕಾರಕ್ಕೆ ಮನವಿ ಮಾಡಿದ್ದೇವೆ. ಸಾವಿರಕ್ಕೂ ಹೆಚ್ಚು ಜಾನಪದ ಕಲಾವಿದರು ಮೇಳದಲ್ಲಿ ಪಾಲ್ಗೊಳ್ಳಲಿದ್ದಾರೆ. ದಸರಾ ಜಂಬೂ ಸವಾರಿ ಮೆರವಣಿಗೆಯಲ್ಲಿ ಮಂಡ್ಯದ ಸ್ತಬ್ಧಚಿತ್ರದಲ್ಲಿ ಮಹಾಕುಂಭಮೇಳದ ವಿವರಗಳನ್ನು ನೀಡಿ, ಮೇಳದ ಪ್ರಚಾರ ಮಾಡುವಂತೆ ಮಂಡ್ಯ ಜಿಲ್ಲಾಡಳಿತಕ್ಕೆ ಮನವಿ ಮಾಡಲಾಗಿದೆ. **–ಡಿ.ಮಾದೇಗೌಡ**

ಪ್ರಧಾನಿ ಮೋದಿ ಹುಟ್ಟುಹಬ್ಬ: ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾದಿಂದ

'ಅರಳಿಗಿಡ' ನೆಡುವ ಅಭಿಯಾನಕ್ಕೆ ಚಾಲನೆ

ಮೈಸೂರು, ಸೆ.18(ಪಿಎಂ)– ಪ್ರಧಾನಿ ನರೇಂದ್ರ ಮೋದಿಯವರ ಜನ್ಮದಿನದ ಅಂಗವಾಗಿ ಆಯೋಜಿಸಿರುವ ಸೇವಾ ಪಾಕ್ಷಿಕ ಕಾರ್ಯಕ್ರಮದಡಿ ಬಿಜೆಪಿ ಹಿಂದುಳಿದ ವರ್ಗಗಳ ಮೋರ್ಚಾ ನಗರ ಘಟಕದ ವತಿಯಿಂದ ಹಮ್ಮಿಕೊಂಡಿರುವ 'ಅರಳಿಗಿಡ' ನೆಡುವ ಅಭಿಯಾನಕ್ಕೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಭಾನುವಾರ ಚಾಲನೆ ನೀಡಿದರು.

ಮೈಸೂರಿನ ನಜರ್‌ಬಾದ್‌ನ ಸರ್ಕಾರಿ ಅತಿಥಿಗೃಹದ ಆವರಣದಲ್ಲಿ ಅರಳಿಗಿಡವೊಂದನ್ನು ನೆಟ್ಟು ನೀರೆರೆಯುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಲಾಯಿತು. ನರೇಂದ್ರ ಮೋದಿಯವರ ಹುಟ್ಟುಹಬ್ಬದ ಅಂಗವಾಗಿ ಸಾರ್ವಜನಿಕರು, ಪರಿಸರಕ್ಕೆ ಅನುಕೂಲವಾಗುವ ನಿಟ್ಟಿನಲ್ಲಿ ರಾಜ್ಯದ ಎಲ್ಲಾ ಹಿಂದುಳಿದ ವರ್ಗಗಳ ಮೋರ್ಚಾದ ಕಾರ್ಯಕರ್ತರು ತಮ್ಮ ವ್ಯಾಪ್ತಿಯ ಶಾಲಾ–ಕಾಲೇಜು, ಸರ್ಕಾರಿ ಸ್ಥಳ ಮೊದಲಾದ ಆವರಣದಲ್ಲಿ ಅರಳಿಗಿಡಗಳನ್ನು ನೆಡುವ ಅಭಿಯಾನ ನಡೆಸಲು ರಾಜ್ಯ ಬಿಜೆಪಿ ನಿರ್ದೇಶನ ನೀಡಿದೆ.

ಇದೇ ವೇಳೆ ಮಾತನಾಡಿದ ಕೋಟಾ ಶ್ರೀನಿವಾಸ ಪೂಜಾರಿ, ಪರಿಸರ ನಮ್ಮೆಲ್ಲರ ಆಸ್ತಿ. ನರೇಂದ್ರ ಮೋದಿಯವರ ಹುಟ್ಟುಹಬ್ಬದ ಪ್ರಯುಕ್ತ ಯಾವುದೇ ರೀತಿಯ ಆಡಂಬರವಿಲ್ಲದಂತೆ ಈ ರೀತಿಯ ಪರಿಸರಕ್ಕೆ ಪೂರಕ ಕಾರ್ಯಕ್ರಮ ನಡೆಸಲು ನಮ್ಮ ಪಕ್ಷ ಮುಂದಾಗಿದೆ ಎಂದರು.



ಮೈಸೂರಿನ ಸರ್ಕಾರಿ ಅತಿಥಿಗೃಹದ ಆವರಣದಲ್ಲಿ ಅರಳಿಗಿಡವೊಂದನ್ನು ನೆಟ್ಟು ನೀರೆರೆಯುವ ಮೂಲಕ 'ಅರಳಿಗಿಡ' ನೆಡುವ ಅಭಿಯಾನಕ್ಕೆ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಚಾಲನೆ ನೀಡಿದರು. ಶಾಸಕ ಎಲ್.ನಾಗೇಂದ್ರ ಇನ್ನಿತರರು ಇದ್ದಾರೆ.

ಮುಂದೊಂದು ದಿನ ವಾಯುಮಾಲಿನ್ಯದಿಂದ ಆಗುವ ಅನಾಹುತ ತಡೆಗಟ್ಟಲು ಅರಳಿಗಿಡ ನೆಡುವ ಅಭಿಯಾನ ಮಹತ್ವದ ಪಾತ್ರ ವಹಿಸಲಿದೆ. ಆ ಮೂಲಕ ಸಮಾಜಕ್ಕೆ ಮಾದರಿಯಾದ ಕೆಲಸ ನಮ್ಮಿಂದ ಆಗಲಿದೆ ಎಂದು ಅಭಿಪ್ರಾಯಪಟ್ಟರು.

ಶಾಸಕ ಎಲ್.ನಾಗೇಂದ್ರ ಮಾತನಾಡಿ, ಅರಳಿಮರ ಅತ್ಯಂತ ಶ್ರೇಷ್ಠತೆ ಹೊಂದಿದೆ. ವೈಜ್ಞಾನಿಕ ದೃಷ್ಟಿಯಿಂದಲೂ ಸಾರ್ವಜನಿಕರು ಹೆಚ್ಚಿರುವ ಸ್ಥಳಗಳಲ್ಲಿ ಅರಳಿಮರದ ಅವಶ್ಯಕತೆ ಇದೆ. ಪಾರ್ಕಿಗೊಂದು ಅರಳಿಮರ ಕಡ್ಡಾಯವಾಗಿ ಇರಬೇಕು. ಮೈಸೂರಿನ ಹೊರವರ್ತುಲ ರಸ್ತೆಯಲ್ಲಿ ಸಾವಿರಾರು ಅರಳಿಮರಗಳನ್ನು ಸಂಘ–ಸಂಸ್ಥೆಗಳ ಜೊತೆಗೂಡಿ ನೆಡುವ ಕಾರ್ಯ ಈಗಾಗಲೇ ಪ್ರಾರಂಭವಾಗಿದೆ ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಉಪಮೇಯರ್ ರೂಪ ಯೋಗೇಶ್, ಪಾಲಿಕೆ ಸದಸ್ಯರಾದ ಸತೀಶ್, ಕೆ.ಜೆ.ರಮೇಶ್, ಬಿಜೆಪಿ ನಗರಾಧ್ಯಕ್ಷ ಟಿ.ಎಸ್.ಶ್ರೀವತ್ಸ, ಹಿಂದುಳಿದ ವರ್ಗಗಳ ಮೋರ್ಚಾದ ನಗರಾಧ್ಯಕ್ಷ ಜೋಗಿ ಮಂಜು, ಬಿಜೆಪಿ ಮುಖಂಡರಾದ ಗೋಪಾಲ್, ಮಣಿರತ್ನಂ, ಸೋಮಶೇಖರ್ ರಾಜು, ಹರೀಶ್, ಪುನೀತ್, ರಮೇಶ್, ಚಿಕ್ಕಮ್ಮ ಬಸವರಾಜ್, ಶಿವರಾಜ್, ಕೃಷ್ಣಮೂರ್ತಿ, ಜಗದೀಶ್, ವಿಜಯ್, ಸೂರಜ್, ಅಂಕಿತ್ ಮತ್ತಿತರರು ಹಾಜರಿದ್ದರು.

ದೇಶದಲ್ಲಿ ಕಾನೂನು ನೆರವು ಕಾರ್ಯ ನಿರ್ಲಕ್ಷ್ಯ


ಕಟಕ್, ಸೆ.18– ದೇಶದಲ್ಲಿ ಕಾನೂನು ನೆರವಿನ ಕೆಲಸ ನಿರ್ಲಕ್ಷ್ಯಕ್ಕೊಳಗಾಗಿದೆ ಎಂದು ಸುಪ್ರೀಂಕೋರ್ಟ್ ಮುಖ್ಯ ನ್ಯಾಯಮೂರ್ತಿ ಯು.ಯು ಲಲಿತ್ ಹೇಳಿದ್ದಾರೆ ಇಂತಹ ಸೇವೆಗಳನ್ನು ನೀಡಲು ಕಾನೂನು ವಿದ್ಯಾರ್ಥಿಗಳು ತಮ್ಮ ಸಮಯವನ್ನು ಮೀಸಲಿಡುವಂತೆ ಒತ್ತಾಯಿಸಿದ್ದಾರೆ.



ಇಲ್ಲಿನ ರಾಷ್ಟ್ರೀಯ ಕಾನೂನು ವಿಶ್ವವಿದ್ಯಾಲಯದ ಘಟಿಕೋತ್ಸವ ಸಮಾರಂಭದಲ್ಲಿ ಮಾತನಾಡಿದ ಅವರು, ಒಂದೂವರೆ ವರ್ಷದಿಂದ ಕಾನೂನು ನೆರವಿನ ಕೆಲಸದಲ್ಲಿ ತೊಡಗಿಸಿಕೊಂಡಿದ್ದೇನೆ ನನ್ನ ಪ್ರಕಾರ ಇದು ದೂರು ಅಥವಾ ಅಗೌರವ ತೋರಿಸುವುದು ಎನ್ನಿಸಲಿಲ್ಲ, ಆದರೆ, ದೇಶದಲ್ಲಿ ಕಾನೂನು ನೆರವಿನ ಕಾರ್ಯ ನಿರ್ಲಕ್ಷ್ಯಕ್ಕೊಳಗಾಗಿದೆ. ಇದರ ವಿಸ್ತರಣೆಗೆ ಚಿಂತಿಸಬೇಕಾಗಿದೆ. ಅದಕ್ಕಾಗಿ ಸಮಯ ಮೀಸಲಿಡಬೇಕಾಗಿದೆ ಎಂದರು. ಹೊಣೆಗಾರಿಕೆಯೊಂದಿಗೆ ದಬ್ಬಾಳಿಕೆಯನ್ನು ತಡೆಯಲು ಕಾನೂನು ಪ್ರಯತ್ನಿಸುತ್ತದೆ ಎಂದು ನ್ಯಾಯಮೂರ್ತಿ ಡಿ ವೈ ಚಂದ್ರಚೂಡ್ ಹೇಳಿದರು.

ವಾರ್ಷಿಕ ಮಹಾಸಭೆ

ಮೈಸೂರು,ಸೆ.17–ಕುಂಬಾರಕೊಪ್ಪಲಿನ ಮೈಸೂರು ಜಿಲ್ಲಾ ಅಮೆಚೂರ್ ಕಬಡ್ಡಿ ಅಸೋಸಿಯೇಷನ್‌ನ ವಾರ್ಷಿಕ ಮಹಾಸಭೆಯು ಸೆ. 23ರಂದು ಬೆಳಗ್ಗೆ 11 ಗಂಟೆಗೆ ಅಸೋಸಿಯೇಷನ್ ಸಭಾಂಗಣದಲ್ಲಿ ಸಂಘದ ಅಧ್ಯಕ್ಷ ಅನಿಲ್‌ಕುಮಾರ್ ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ.



ಭಾನುವಾರ ಹುಟ್ಟುಹಬ್ಬ ಆಚರಿಸಿಕೊಂಡ ಮೈಸೂರು ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಎಸ್.ಆರ್.ರವಿಕುಮಾರ್ ಅವರನ್ನು ಎಸ್‌ಆರ್ ರವಿ ಸ್ನೇಹ ಬಳಗದ ವತಿಯಿಂದ ಅದ್ದೂರಿಯಾಗಿ ಸನ್ಮಾನಿಸಿ, ಹುಟ್ಟುಹಬ್ಬದ ಶುಭಾಶಯ ಕೋರಲಾಯಿತು.

ಉಮಾಗೆ ಪಿಹೆಚ್.ಡಿ



ಮೈಸೂರು,ಸೆ.18–ಡಾ.ಜಿ.ಟಿ.ರಾಮಚಂದ್ರಪ್ಪ ಅವರ ಮಾರ್ಗದರ್ಶನದಲ್ಲಿ ಉಮಾ ಅವರು ರಾಜ್ಯಶಾಸ್ತ್ರ ವಿಷಯದಲ್ಲಿ ಸಂಶೋಧಿಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಮೈಸೂರು ವಿವಿ ಪಿಎಚ್.ಡಿ ಪದವಿ ನೀಡಿದೆ.


ನಾಳೆ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ

ಮೈಸೂರು,ಸೆ.18–ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘದಿಂದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯನ್ನು ಸೆ.20ರಂದು ಬೆಳಗ್ಗೆ 11 ಗಂಟೆಗೆ ಸಂಘದ ಅಧ್ಯಕ್ಷ ಎಂ.ಟಿ.ಅಣ್ಣೇಗೌಡ ಅಧ್ಯಕ್ಷತೆಯಲ್ಲಿ ಮೈಸೂರು ಮೆಡಿಕಲ್ ಕಾಲೇಜಿನ ಅಮೃತ ಮಹೋತ್ಸವ ಭವನದಲ್ಲಿ ಮಹಾಸಭೆ ಜರುಗಲಿದೆ.

ಹೆಚ್.ಡಿ.ಕೋಟೆಯಲ್ಲಿ ಕುಡಿತ ಬಿಡಿಸುವ ಉಚಿತ ಶಿಬಿರ

ಮೈಸೂರು,ಸೆ.18–ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಮತ್ತು ವಿವಿಧ ಸಂಘಸಂಸ್ಥೆಗಳ ಸಹಯೋಗದೊಂದಿಗೆ ಅಕ್ಟೋಬರ್ 3ರವರೆಗೆ 13ನೇಯ ಕುಡಿತ ಬಿಡಿಸುವ ಉಚಿತ ಶಿಬಿರವನ್ನು ಹೆಚ್.ಡಿ.ಕೋಟೆಯ ಜೆಎಸ್‌ಎಸ್ ಮಂಗಳ ಮಂಟಪದಲ್ಲಿ ಏರ್ಪಡಿಸಲಾಗಿದೆ. ಮದ್ಯಪಾನದಿಂದ ಜನರ ಆರೋಗ್ಯದ ಮೇಲೆ ದುಷ್ಪರಿಣಾಮ ಉಂಟಾಗುವುದನ್ನು ಮನಗಂಡು ಸಾರ್ವಜನಿಕರಲ್ಲಿ ಈ ಸಮಸ್ಯೆಯ ಬಗ್ಗೆ ಅರಿವು ಮೂಡಿಸಿ, ಮದ್ಯವ್ಯಸನ ಮುಕ್ತರಾಗಿಸಲು ಹಲವಾರು ವರ್ಷಗಳಿಂದ ಶಿಬಿರಗಳನ್ನು ಏರ್ಪಡಿಸಿಕೊಂಡು ಬರಲಾಗುತ್ತಿದೆ. ಇದುವರೆಗೆ 12 ಶಿಬಿರಗಳು ನಡೆದಿವೆ. ಶಿಬಿರದಲ್ಲಿ ಪಾಲ್ಗೊಳ್ಳಲು ಆಸಕ್ತಿಯುಳ್ಳವರು ಆದಷ್ಟು ಜಾಗ್ರತೆ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಈ ಸಾಮಾಜಿಕ ಸಮಸ್ಯೆಯ ಪರಿಹಾರದಲ್ಲಿ ಆಸಕ್ತಿಯುಳ್ಳವರು ಸಹ ಮದ್ಯವ್ಯಸನಿಗಳನ್ನು ಆಧಾರ್ ಕಾರ್ಡ್‌ನ ಜೆರಾಕ್ಸ್ ಪ್ರತಿ, ಭಾವಚಿತ್ರ, ಅಗತ್ಯ ಬಟ್ಟೆ ಹಾಗೂ ಹೊದಿಕೆಗಳೊಡನೆ ಕರೆದುಕೊಂಡು ಬಂದು ಶಿಬಿರಕ್ಕೆ ಸೇರಿಸಬಹುದಾಗಿದೆ. ಮಾಹಿತಿಗಾಗಿ ಚುಂಚನಹಳ್ಳಿ ಶ್ರೀ, ಡಾ.ಎಂ.ಪಿ.ಸೋಮಶೇಖರ್, ಎಸ್. ಬಸವರಾಜು ಮತ್ತು ಡಾ. ನಾಗೇಂದ್ರ ಅವರುಗಳನ್ನು 9945494612, 9448653897, 9886476142 ಮತ್ತು 9740056456 ಮೂಲಕ ಸಂಪರ್ಕಿಸಲು ಕೋರಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.09.2022 ಸೋಮವಾರ, ಮಳೆ ನಕ್ಷತ್ರ: ಉತ್ತರ 14.09.2022 ರಿಂದ 26.09.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಭಾದ್ರಪದ ಮಾಸ, ಕೃಷ್ಣ ಪಕ್ಷ,
ತಿಥಿ : ನವಮಿ, ನಕ್ಷತ್ರ : ಆದ್ರಾ, ರಾಹುಕಾಲ: ಸಂಜೆ 7.30 ರಿಂದ 9ರವರೆಗೆ

- **ಧನ್ಯ ಸ್ಕೂಲ್ ಆಫ್ ಯೋಗ ಹಾಗೂ ಮುದ್ರಾ ಪ್ರಾಣಾಯಾಮ ರಿಸರ್ಚ್ ಸೆಂಟರ್ :** ಮುದ್ರಾ ಪ್ರಾಣಾಯಾಮ ಶಿಬಿರ, ಸ್ಥಳ: ಮಹಿಳಾ ಸಮಾಜ, ಜೆಎಲ್‌ಬಿ ರಸ್ತೆ, ಬೆಳಗ್ಗೆ 6.30ರಿಂದ.
- **ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ :** ವಿಸ್ತ್ರ–22–ಸಾಂಸ್ಕೃತಿಕ ಹಬ್ಬ, ಸ್ಥಳ: ವಿಶ್ವವಿದ್ಯಾಲಯದ ಆವರಣ, ಹಂಚ್ಯಾ, ಸಾತಗಳ್ಳಿ ಲೇಔಟ್, ಬೆಳಗ್ಗೆ 9.30ಕ್ಕೆ.
- **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10ರಿಂದ.
- **ರಂಗಾಯಣ, ಮೈಸೂರು :** ಭಾರತೀಯ ರಂಗ ಸಂಗೀತೋತ್ಸವ, ಉದ್ಘಾಟನೆ: ಮುಂಬೈ ರಂಗ ಸಂಗೀತ ನಿರ್ದೇಶಕ ಅಮೋದ್ ಭಟ್, ಮುಖ್ಯ ಅತಿಥಿ: ರಂಗಭೂಮಿ ಕಲಾವಿದರು, ಚಲನಚಿತ್ರ ನಟರಾದ ಅರುಣ್ ಸಾಗರ್, ಅಧ್ಯಕ್ಷತೆ: ರಂಗಾಯಣ ನಿರ್ದೇಶಕ ಅಡ್ಡಂಡ ಸಿ. ಕಾರ್ಯಪ್ಪ, ಸ್ಥಳ: ಭೂಮಿಗೀತ, ಸಂಜೆ 6 ಗಂಟೆಗೆ.
- **ಡಾ.ರಾಜ್‌ಕುಮಾರ್ ಕಲಾ ಸೇವಾ ಟ್ರಸ್ಟ್:** ಸಾಂಸ್ಕೃತಿಕ ಕಾರ್ಯಕ್ರಮ, ಹರಿಕಥೆ: ರೂಪ ಅವರಿಂದ, ಕವಿರಾಜ್ ಅವರಿಂದ ಸುಗಮ ಸಂಗೀತ, ಸ್ಥಳ: ನಾದಬ್ರಹ್ಮ ಸಂಗೀತ ಸಭಾ, ಸಂಜೆ 6 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ಹಾಗೂ ಸಂಜೆ 5ಕ್ಕೆ: ಶತಮಾನದ ಸ್ಮರಣೆಗಳು: "ಮಂಡ್ಯ ಜಿಲ್ಲೆಯ ಶತಮಾನದ ನೆನಪುಗಳು" ಲೇಖನ ಪ್ರಸ್ತುತಿ–ಡಿ.ಎನ್.ಶ್ರೀಪಾದ್, 6.40 ಅರಿವಿನ ಶಿಖರ–ಗಾಯನ ಬಿ.ಶ್ರೀರಾಂಭಟ್, ಕೆ.ಬಿ.ಸುನೀತಾ ಆಚಾರ್ಯ, ವ್ಯಾಖ್ಯಾನ– ಡಾ.ಹೆಚ್.ಎನ್.ಮಂಜುರಾಜ್, 6.50 ರೈತರಿಗೆ ಸಲಹೆ, 7.45 ನಿತ್ಯ ವಿಜ್ಞಾನ, 10.00 ಲಯಸಂಭ್ರಮ: ತಾಳ, ಲಯ, ರಸಾಸ್ವಾದ, ಶಿಕ್ಷಕರ ದಿನಾಚರಣೆಯ ಸಂದರ್ಭದಲ್ಲಿ ಪರಿಕಲ್ಪನೆ ಮತ್ತು ಪ್ರಸ್ತುತಿ– ಹೆಚ್.ಎಲ್.ಶಿವಶಂಕರಸ್ವಾಮಿ, ನಿರ್ಮಾಣ– ಎಸ್.ಸುಬ್ರಹ್ಮಣ್ಯ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ. **ಮಧ್ಯಾಹ್ನ:** 12.30 ಭಕ್ತಿಗೀತೆಗಳು: ಆರ್.ಕೆ.ಶ್ರೀಕಂಠನ್, ಉದಯಕಿರಣ್, 12.45 ನಮ್ಮ ಆರೋಗ್ಯ: 'ಆಲ್ಝೈಮರ್ ಕಾಯಿಲೆ' ಕುರಿತು ಡಾ.ಹನುಮಂತಾಚಾರ್ ಜೋಷಿ, ಅವರೊಂದಿಗೆ ಮಾತುಕತೆ, 1.20 ಭಾವಗೀತೆಗಳು, 3.00 ಎ.ಪಿ.ಶ್ರೀನಿವಾಸ್–ವಯೋಲಿನ್, 4.00 ಮಹಿಳಾ ರಂಗ: 'ಡಾಕ್ಟರ್ ಸಮಯ' ನೇರ ಫೋನ್ ಇನ್ ಕಾರ್ಯಕ್ರಮ, ಭಾಗವಹಿಸುವ ವೈದ್ಯರು–ಡಾ. ಕಲಾವತಿ, ವಿಷಯ–ಮಹಿಳೆಯರ ಆರೋಗ್ಯದ ತೊಂದರೆಗಳು, ಪ್ರಸ್ತುತಿ–ಎಂ.ಎಸ್.ಭಾರತಿ, 4.30 ಝೇಂಕಾರ: ಮಕ್ಕಳ ಗೀತ ಗಾಯನ ಕಲಿಕಾ ಕಾರ್ಯಕ್ರಮ, ಕವಿ–ದಿವಾಕರ ಹೆಗಡೆ. **ಸಂಜೆ:** 6.50 ಕೃಷಿರಂಗ: 'ಸಮಗ್ರ ಕೃಷಿಯಲ್ಲಿನ ಆರ್ಥಿಕತೆ' ಈ ವಿಚಾರವಾಗಿ ಜಿ.ಮಹೇಶ್ ಅವರೊಡನೆ ಸಂದರ್ಶನ, 9.30 'ನೆಲ ಮೂಲ': ಜನಪದ ಆಚರಣೆ ಮತ್ತು ಸಂಪ್ರದಾಯಗಳನ್ನು ಕುರಿತ ಸರಣಿ ಕಾರ್ಯಕ್ರಮ. ರಚನೆ– ಡಾ.ಪಿ.ಕೆ.ರಾಜಶೇಖರ್ ಪ್ರಸ್ತುತಿ– ಡಾ.ಮೈಸೂರು ಉಮೇಶ್, 10.30 ಸವಿನೆನಪು.

ಮೈಸೂರು ದಸರಾ ಮಹೋತ್ಸವ-2022



ಲಕ್ಷ್ಮೀ ಆನೆ ಹಾಗೂ ಮರಿ ಶ್ರೀ ದತ್ತಾತ್ರೇಯ

ಅರಮನೆ ಆವರಣದಲ್ಲಿ ಮಾವುತ, ಕಾವಾಡಿ, ಕುಟುಂಬಸ್ಥರಿಗೆ ಉಪಾಹಾರ

ದಸರಾ ಆನೆ ಲಕ್ಷ್ಮಿ ಗಂಡು ಮರಿಗೆ ಜನ್ಮ ನೀಡಿದ ಹಿನ್ನೆಲೆ ಹೋಳಿಗೆ ವಿಶೇಷ



ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಾವುತ, ಕಾವಾಡಿಗಳಿಗೆ ಉಪಾಹಾರ ಬಡಿಸುತ್ತಿರುವುದು.

ಮೈಸೂರು,ಸೆ.18(ಎಂಟಿವೈ)- ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಗಜಪಡೆಯೊಂದಿಗೆ ಆಗಮಿಸಿರುವ ಮಾವುತ, ಕಾವಾಡಿಗಳು ಹಾಗೂ ಅವರ ಕುಟುಂಬದ ಸದಸ್ಯರಿಗಾಗಿ ಜಿಲ್ಲಾಡಳಿತದ ವತಿಯಿಂದ ಭಾನುವಾರ ಆಯೋಜಿಸಿದ್ದ ಉಪಾಹಾರ ಕೂಟದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಉಪಹಾರ ಬಡಿಸುವ ಮೂಲಕ ಉಪಚರಿಸಿದರು.

ಮೈಸೂರು ಅರಮನೆ ಆವರಣದಲ್ಲಿ ದಸರಾ ಆನೆಗಳು ಬೀಡು ಬಿಟ್ಟಿರುವ ಸ್ಥಳದ ಬಳಿ ಮಾವುತ, ಕಾವಾಡಿ ಹಾಗೂ ಕುಟುಂಬದ ಸದಸ್ಯರಿಗೆ ಉಪಾಹಾರ ನೀಡುವ ಸಂಪ್ರದಾಯವನ್ನು ಹಲವು ವರ್ಷಗಳಿಂದ ಜಿಲ್ಲಾಡಳಿತ ನಡೆಸಿಕೊಂಡು ಬಂದಿದೆ. ಈ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ ನಡೆದ ಉಪಹಾರ ಕೂಟದಲ್ಲಿ ದಸರಾ ಗಜಪಡೆಯ ಎಲ್ಲಾ 15(ಮರಿ ಆನೆ ಶ್ರೀ ದತ್ತಾತ್ರೇಯ ಸೇರಿದಂತೆ) ಆನೆಗಳ ಮಾವುತ, ಕಾವಾಡಿ, ವಿಶೇಷ ಮಾವುತರು ಹಾಗೂ ಕುಟುಂಬದ ಸದಸ್ಯರೂ ಸೇರಿದಂತೆ ನೂರಾರು ಮಂದಿ ಉಪಾಹಾರ ಸೇವಿಸಿ, ಸಂಭ್ರಮಿಸಿದರು.

ಉಪಾಹಾರ ಕೂಟದಲ್ಲಿ ಇಡ್ಲಿ, ಉದ್ದಿನ ವಡೆ, ಕೇಸರಿ ಬಾತ್, ಮಸಾಲೆ ದೋಸೆ, ಉಪ್ಪಿಟ್ಟು, ಹೋಳಿಗೆ, ಪೊಂಗಲ್, ಚಟ್ನಿ, ಪಲ್ಯ ಹಾಗೂ ಕಾಫಿ, ಟಿ ವ್ಯವಸ್ಥೆ ಮಾಡಲಾಗಿತ್ತು. ಸಚಿವರು ಹಾಗೂ ಇನ್ನಿತರ ಗಣ್ಯರು ಮಾವುತ, ಕಾವಾಡಿಗಳಿಗೆ ಉಪಾಹಾರ ನೀಡಿ ಶುಭ ಕೋರಿದರು.

ಶ್ರೀ ದತ್ತಾತ್ರೇಯ ಜನನ ಸಂಭ್ರಮ: ಇದೇ ವೇಳೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದ ಲಕ್ಷ್ಮಿ ಆನೆ ಅರಮನೆ ಆವರಣದಲ್ಲಿ ಗಂಡು ಮರಿಗೆ ಜನ್ಮ ನೀಡಿರುವುದು ಸಂತೋಷದ ಸಂಗತಿ. ಕಾಡಿನಿಂದ ನಾಡಿಗೆ ಬಂದು ಆನೆ ಮರಿಗೆ ಜನ್ಮ ನೀಡಿರುವುದು ಗಜಪಡೆಯ ಮಾವುತ, ಕಾವಾಡಿಗಳಲ್ಲಿ ಸಂಭ್ರಮದ ವಾತಾವರಣ ಉಂಟು ಮಾಡಿದೆ. ಈಗಾಗಲೇ ಲಕ್ಷ್ಮೀಯ ಗಂಡು ಮರಿಗೆ ಶ್ರೀ ದತ್ತಾತ್ರೇಯ ಎಂದು ನಾಮಕರಣ ಮಾಡಲಾಗಿದೆ. ಇಂದು ಅದಕ್ಕಾಗಿ ಮಾವುತ, ಕಾವಾಡಿ ಹಾಗೂ ಕುಟುಂಬದ ಸದಸ್ಯರಿಗೆ ಹೋಳಿಗೆಯೊಂದಿಗೆ ಉಪಹಾರದ ವ್ಯವಸ್ಥೆ ಮಾಡಿ ಸಂಭ್ರಮಿಸಲಾಗಿದೆ ಎಂದರು.

ಸಿದ್ಧತೆ ಅಂತಿಮ ಹಂತಕ್ಕೆ: ನಾಡಹಬ್ಬ ದಸರಾ ಮಹೋತ್ಸವಕ್ಕೆ ಸಂಬಂಧಿಸಿದಂತೆ ಎಲ್ಲಾ ಕಾರ್ಯಕ್ರಮಗಳ ಸಿದ್ಧತಾ ಕಾರ್ಯ ಅಂತಿಮ ಹಂತಕ್ಕೆ ಬಂದಿದೆ. ರಾಷ್ಟ್ರಪತಿಗಳ ಕಚೇರಿಯಿಂದ ಮಾಹಿತಿ ಬಂದ ಬಳಿಕ ಆಹ್ವಾನ ಪತ್ರಿಕೆ ಸೇರಿದಂತೆ ಇನ್ನಿತರ ಚಟುವಟಿಕೆಗಳ ಸಿದ್ಧತೆ ಪೂರ್ಣಗೊಳ್ಳಲಿದೆ. ಯುವ ದಸರಾ ಸೇರಿದಂತೆ ಕೆಲ ಕಾರ್ಯಕ್ರಮಗಳಲ್ಲಿ ಯಾವ ಯಾವ ಕಲಾವಿದರು ಪಾಲ್ಗೊಳ್ಳುತ್ತಾರೆ ಎಂದು ಇನ್ನೆರಡು ದಿನಗಳಲ್ಲಿ ನಿರ್ಧಾರವಾಗಲಿದೆ ಎಂದು ತಿಳಿಸಿದರು.

ಸೆ.26ರಿಂದ ಅ.5ರವರೆಗೆ ರಜೆ ಘೋಷಣೆ: ದಸರಾ ಮಹೋತ್ಸವದ ಅಂಗವಾಗಿ ಮೈಸೂರು ಜಿಲ್ಲೆಯಲ್ಲಿ ಸೆ.26ರಿಂದ ಅ.5 ರವರೆಗೆ ಶಾಲೆಗಳಿಗೆ ರಜೆ ನೀಡುವಂತೆ ಸೂಚನೆ ನೀಡಲಾಗಿದೆ. ಈ ಹಿಂದೆ ಮುಂದಿನ ತಿಂಗಳ ಎರಡನೇ ವಾರದಲ್ಲಿ ರಜೆ ನೀಡಲು ನಿರ್ಧರಿಸಲಾಗಿತ್ತು. ಆದರೆ ದಸರಾ ಮಹೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲೆಂಬ ಉದ್ದೇಶದಿಂದ ನವರಾತ್ರಿ ವೇಳೆ ಶಾಲೆಗೆ ರಜೆ ನೀಡುವಂತೆ ಸೂಚಿಸಲಾಗಿದೆ ಎಂದು ಸ್ಪಷ್ಟಪಡಿಸಿದರು.

ತೆರಿಗೆ ವಿನಾಯಿತು: ದಸರಾ ವೇಳೆ ಪ್ರವಾಸಿಗರು ಮೈಸೂರಿಗೆ ಬರುವುದಕ್ಕೆ ಪ್ರೇರೇಪಿಸಲು ಹೊರ ರಾಜ್ಯದಿಂದ ಮೈಸೂರಿಗೆ ಬರುವ ಪ್ರವಾಸಿ ವಾಹನಗಳಿಗೆ ತೆರಿಗೆ ವಿನಾಯಿತಿ ನೀಡಲಾಗುತ್ತಿದೆ ಮಂಡ್ಯ ಜಿಲ್ಲೆಯ ಹಲವು ಪ್ರವಾಸಿ ತಾಣಗಳನ್ನು ನೋಡುವುದಕ್ಕೆ ಪ್ರವಾಸಿಗರು ಬಯಸುವು ದರಿಂದ ತೆರಿಗೆ ವಿನಾಯಿತಿಯನ್ನು ಮಂಡ್ಯ ಜಿಲ್ಲೆಗೂ ವಿಸ್ತರಿಸಲು ಸೂಚನೆ ನೀಡಲಾಗಿದೆ ಎಂದರು.

ಮಾವುತ, ಕಾವಾಡಿಗಳಿಗೆ ಕ್ರೀಡಾ ಸಾಮಗ್ರಿ ವಿತರಣೆ: ದಸರಾ ಗಜಪಡೆಯ ಮಾವುತ, ಕಾವಾಡಿಗಳು ಹಾಗೂ ಆನೆಗಳ ಪಾಲನೆ-ಪೋಷಣೆಯ ಕಾಯಕಕ್ಕಾಗಿ ನಿಯೋಜಿಸಿರುವ ಸಿಬ್ಬಂದಿಗಳು ಮೊಬೈಲ್‌ನಲ್ಲಿ ತಲ್ಲೀನರಾಗುವುದನ್ನು ತಡೆಗಟ್ಟಲು ಕಳೆದ ತಿಂಗಳು ಡಿಸಿಎಫ್ ಡಾ.ವಿ.ಕರಿಕಾಳನ್ ಮಾವುತ, ಕಾವಾಡಿಗಳಿಗಾಗಿ ಕೆಲವು ಕ್ರೀಡಾ ಸಾಮಗ್ರಿ ನೀಡಿದ್ದರು. ಇಂದು ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಮಾವುತ, ಕಾವಾಡಿಗಳಿಗೆ ಬ್ಯಾಟ್, ಬಾಲ್, ವಾಲೀಬಾಲ್ ನೀಡಿದ್ದಲ್ಲದೆ, ಮಾವುತರೊಂದಿಗೆ ಕ್ರಿಕೆಟ್ ಆಟ ಗಮನ ಸೆಳೆದರು.

ಶ್ರೀ ಧತ್ತಾತ್ರೇಯುನನ್ನು ವೀಕ್ಷಿಸಿದ ಸಚಿವರು: ಅರಮನೆ ಆವರಣದಲ್ಲಿ ಗಂಡು ಮರಿಗೆ ಜನ್ಮ ನೀಡಿದ ದಸರಾ ಆನೆ ಲಕ್ಷ್ಮಿ ಹಾಗೂ ಅದರ ಮರಿ ಶ್ರೀ ದತ್ತಾತ್ರೇಯನನ್ನು ಸಚಿವ ಎಸ್.ಟಿ.ಸೋಮಶೇಖರ್ ಹಾಗೂ ಇನ್ನಿತರರು ವೀಕ್ಷಿಸಿದರು. ಸಚಿವರಿಗೆ ಡಿಸಿಎಫ್ ಡಾ.ವಿ.ಕರಿಕಾಳನ್ ತಾಯಿ ಆನೆ ಲಕ್ಷ್ಮೀ ಹಾಗೂ ಅದರ ಮರಿಯ ಬಗ್ಗೆ ಮಾಹಿತಿ ನೀಡಿದರು.

ಈ ಸಂದರ್ಭದಲ್ಲಿ ಮೇಯರ್ ಶಿವಕುಮಾರ್, ಶಾಸಕ ಎಲ್.ನಾಗೇಂದ್ರ, ಸಂಸದ ಪ್ರತಾಪ ಸಿಂಹ, ವಿಧಾನ ಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಎಪಿಸಿಸಿಎಫ್ ಜಗತ್‌ರಾಮ್, ಜಿ.ಪಂ ಸಿಇಓ ಬಿ.ಆರ್. ಪೂರ್ಣಿಮಾ, ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಡಿಸಿಪಿ ಗೀತಾ ಪ್ರಸನ್ನ, ಎಡಿಸಿ ಮಂಜುನಾಥಸ್ವಾಮಿ, ಅರಮನೆ ಮಂಡಳಿ ಉಪನಿರ್ದೇಶಕ ಟಿ.ಎಸ್.ಸುಬ್ರಹ್ಮಣ್ಯ, ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಶಿವಕುಮಾರ್, ಕರ್ನಾಟಕ ಮೃಗಾಲಯ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.



ಮಾವುತರಿಗೆ ಸಚಿವರು ಕ್ರೀಡಾ ಸಾಮಗ್ರಿ ವಿತರಿಸುತ್ತಿರುವುದು

ಪ್ರವಾಸಿಗರ ಮನಸೂರೆಗೊಳ್ಳುವ ದೀಪಾಲಂಕಾರದಿಂದ ನೂರಾರು ಕಾರ್ಮಿಕರ ಜೀವನಕ್ಕೂ ಆಸರೆ

ಮೈಸೂರು, ಸೆ.18(ಎಸ್‌ಪಿಎನ್)- ಮೈಸೂರು ದಸರಾ ಮಹೋತ್ಸವದಲ್ಲಿ ವಿದ್ಯುತ್ ದೀಪಾಲಂಕಾರ ಪ್ರವಾಸಿಗರ ಹೃದಯ ಗೆಲ್ಲುವಲ್ಲಿ ಮಹತ್ವದ ಪಾತ್ರ ವಹಿಸುತ್ತದೆಯೋ, ಹಾಗೆ ಇದು ನೂರಾರು ಕಾರ್ಮಿಕರ ಜೀವನ ನಿರ್ವಹಣೆಗೆ ದಾರಿ ದೀಪವಾಗಿದೆ.



ಈ ಬಾರಿ ದಸರಾ ಮಹೋತ್ಸವ ದಲ್ಲಿ 124 ಕಿಮೀ ದೀಪಾಲಂಕಾರ ಮಾಡಿ ದಸರೆ ಕಳೆಗಟ್ಟುವಂತೆ ಮಾಡಲು ಜಿಲ್ಲಾಡಳಿತ ಶತಪ್ರಯತ್ನ ನಡೆಸುತ್ತಿದೆ. ಇದಕ್ಕೆ ಪೂರಕವಾಗಿ ಸ್ಥಳೀಯ 115ಕ್ಕೂ ಹೆಚ್ಚು ಮಂದಿ ಗುತ್ತಿಗೆದಾರರು ಹಾಗೂ 300ಕ್ಕೂ ಹೆಚ್ಚು ಮಂದಿ ಕಾರ್ಮಿಕರು ಕಳೆದ 4-5 ದಿನಗಳಿಂದ ಕೆಲಸ ಮಾಡುತ್ತಿದ್ದೇವೆ ಎಂದು ಕೆ.ಆರ್.ವೃತ್ತದಿಂದ ಆರ್ಯುವೇದ ವೃತ್ತದವರೆಗೆ ದೀಪಾಲಂಕಾರ ಗುತ್ತಿಗೆ ಪಡೆದಿರುವ ಗುತ್ತಿಗೆದಾರ ರವಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ನಾವು ಹಲವು ವರ್ಷಗಳಿಂದ ದಸರಾ ಸಂದರ್ಭದಲ್ಲಿ ದೀಪಾಲಂಕಾರ ಗುತ್ತಿಗೆ ಪಡೆದು ಕಾರ್ಯ ನಿರ್ವಹಿಸುತ್ತಿದ್ದೇವೆ ನಮ್ಮಂತೆ ಬೇರೆ ಇಲಾಖೆಗಳ ಸಮಿತಿಗಳಲ್ಲೂ ಕೆಲಸ ಮಾಡುತ್ತಿದ್ದಾರೆ. ಈ ಬಾರಿ ದೀಪಾಲಂಕಾರಕ್ಕೆ ಅಂದಾಜು ಕೋಟ್ಯಾಂತರ ರೂ. ವೆಚ್ಚವಾಗಬಹುದು. ಇದರಲ್ಲಿ 15 ದಿನದ ದೀಪಾಲಂಕಾರದ ವಿದ್ಯುತ್ ಬಿಲ್ ಕೂಡ ಸೇರಿಕೊಂಡಿರುತ್ತದೆ ಎಂದು ತಿಳಿಸಿದರು.

ದೀಪಾಲಂಕಾರಕ್ಕೆ ಪ್ರತಿ ದಿನ 5 ಸಾವಿರ ಯೂನಿಟ್ ವಿದ್ಯುತ್ ಬೇಕಾಗಬಹುದು. ದೀಪಾಲಂಕಾರ ಕೆಲಸ ಸೆ.25ರೊಳಗೆ ಪೂರ್ಣಗೊಂಡು, ಪ್ರವಾಸಿಗರ ವೀಕ್ಷಣೆಗೆ ಲಭ್ಯವಾಗಲಿದೆ. ಇದರ ಯಶಸ್ಸಿಗೆ ಪ್ರತಿ ನಿತ್ಯ 200ಕ್ಕೂ ಕಾರ್ಮಿಕರು ಶ್ರಮಿಸುತ್ತಿದ್ದಾರಲ್ಲದೆ, ಸಯ್ಯಾಜಿರಾವ್ ರಸ್ತೆಯ ಕೆ.ಆರ್.ಆಸ್ಪತ್ರೆ ಮುಂಭಾಗದಲ್ಲಿ ದೀಪಾಲಂಕರದ 'ಹಸಿರು ಚಪ್ಪರ' ಜೋಡಣ ಕಾರ್ಯ ಬಹುತೇಕ ಮುಗಿದಿದೆ. ಅಲ್ಲದೆ, ನಗರದ ಪ್ರಮುಖ ರಸ್ತೆ, ವೃತ್ತಗಳಲ್ಲಿ ದೀಪಗಳ ಅಲಂಕಾರ ಕಾರ್ಯ ಭರದಿಂದ ಸಾಗುತ್ತಿದೆ. ಒಟ್ಟಿನಲ್ಲಿ ಪ್ರತಿ ಬಾರಿ ದಸರಾ ನಮ್ಮ ಹೊಟ್ಟೆ ತುಂಬಿಸುತ್ತದೆ ಎಂದರೆ ತಪ್ಪಾಗಲಾರದು ಎಂದು ತಮ್ಮ ಅನಿಸಿಕೆ ತಿಳಿಸಿದರು.

ಮುಂದುವರೆದ ಗಜಪಡೆ ತಾಲೀಮು



ಮೈಸೂರು, ಸೆ18(ಎಸ್‌ಪಿಎನ್)-ದಸರಾ ಮಹೋತ್ಸವ ಪ್ರಮುಖ ಆಕರ್ಷಣೆಯಾದ ಗಜಪಡೆಯ ನಿತ್ಯ ತಾಲೀಮು ನಡೆಯುತ್ತಿದ್ದು, ಪ್ರವಾಸಿಗರು, ಪುಟಾಣಿಗಳನ್ನೂ ಆಕರ್ಷಿಸುತ್ತಿದೆ.

ಕಳೆದ 40 ದಿನಗಳಿಂದ ಅರಮನೆ ಆವರಣದಿಂದ ಬನ್ನಿಮಂಟಪದವರಿಗೆ ನಿತ್ಯ ಬೆಳಗ್ಗೆ -ಸಂಜೆ ಅರಣ್ಯ ಇಲಾಖೆ ಸಿಬ್ಬಂದಿಯೊಂದಿಗೆ ಗಜಪಡೆ ತಾಲೀಮು ನಡೆಸುತ್ತಿವೆ.

ಕೆಆರ್.ವೃತ್ತ ಆರ್ಯುವೇದ ಕಾಲೇಜು ವೃತ್ತ ನೇತಾಜಿ ಸುಭಾಷ್ ಚಂದ್ರ ಬೋಸ್ ವೃತ್ತ ಕಿವುಡ ಮೂಗರ ಶಾಲೆ ಮುಂಭಾಗ, ಹೈವೇ ವೃತ್ತ ಬನ್ನಿಮಂಟಪ ಮೈದಾನ ತಲುಪುವವರೆಗೆ ನೂರಾರು ಪುಟಾಣಿಗಳು, ಪ್ರವಾಸಿಗರು ಗಜ ಗಾಂಭೀರ್ಯದಿಂದ ಸಾಗುವ ಜಂಬೂ ಪಡೆಯ ತಾಲೀಮು ಅನ್ನು ದೂರದಲ್ಲಿ ನಿಂತು ಕಣ್ತುಂಬಿಕೊಳ್ಳುತ್ತಿದ್ದಾರೆ. ಇನ್ನು ಕೆಲವರು ಸೆಲ್ಫಿಗೆ ಮುಗಿ ಬೀಳುತ್ತಿದ್ದು, ಇನ್ನು ಕೆಲ ಹಿರಿಯರು ಗಜಪಡೆಗೆ ದೂರದಿಂದ ನಮಿಸುವ ದೃಶ್ಯ ಕಂಡು ಬರುತ್ತಿದೆ. ರಜಾ ದಿನಗಳಲ್ಲಿ ಜಂಬೂ ಪಡೆ ತಾಲೀಮು ಪುಟಾಣಿಗಳ ಆಕರ್ಷಣೆಯ ಕೇಂದ್ರ ಬಿಂದುವಾಗಿತ್ತು.

ಪರಿವಾಳ ಆಕರ್ಷಣೆಗೆ ಮನಸೋತ ಪ್ರವಾಸಿಗರು: ಕೋಟೆ ಆಂಜನೇಯಸ್ವಾಮಿ ದೇವಸ್ಥಾನ ಮುಂಭಾಗದಲ್ಲಿ ಗುಂಪುಗುಂಪಾಗಿ ಸೇರುವ ಪರಿವಾಳಗಳಿಗೆ ಆಹಾರ ನೀಡಲು ಪುಟಾಣಿಗಳು, ಪ್ರವಾಸಿಗರು ಮುಂದಾಗುತ್ತಿದ್ದು, ಇದಕ್ಕೆ ಮಕ್ಕಳ ಪೋಷಕರು ಸಹ ಸಾಥ್ ನೀಡುತ್ತಿದ್ದ ದೃಶ್ಯ ಎಲ್ಲರ ಗಮನ ಸೆಳೆದಿದೆ.

ದಸರಾದ ಇನ್ನಷ್ಟು ಸುದ್ದಿಗಳು ಪುಟ 6ರಲ್ಲಿ



ಮೈಸೂರು ಅರಮನೆ ಆವರಣದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಅವರು ದಸರಾ ಫಲಪುಷ್ಪ ಪ್ರದರ್ಶನದ ಬ್ರೋಷರ್ ಅನ್ನು ಭಾನುವಾರ ಬಿಡುಗಡೆ ಮಾಡಿದರು. ಈ ವೇಳೆ ಸಂಸದ ಪ್ರತಾಪ್ ಸಿಂಹ, ಎಂಎಲ್‌ಸಿ ಸಿ.ಎನ್.ಮಂಜೇಗೌಡ, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಬಗಾದಿ ಗೌತಮ್, ಜಿಪಂ ಸಿಇಓ ಪೂರ್ಣಿಮಾ, ಎಡಿಸಿ ಮಂಜುನಾಥ ಸ್ವಾಮಿ ಇನ್ನಿತರರಿದ್ದರು.

ದಸರಾ ವೇಳೆ 5 ಪ್ರವಾಸಿ ತಾಣಗಳಿಗೆ ಒಂದೇ ಟಿಕೆಟ್

ಮೈಸೂರು, ಸೆ.18(ಎಂಟಿವೈ)- ನಾಡಹಬ್ಬ ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳುವ ಸಾಂಸ್ಕೃತಿಕ ನಗರಿ ಮೈಸೂರಿಗೆ ಆಗಮಿಸುವ ಪ್ರವಾಸಿಗರಿಗೆ ನೆರವಾಗುವ ನಿಟ್ಟಿನಲ್ಲಿ ಮೈಸೂರು ಜಿಲ್ಲಾಡಳಿತ 5 ಪ್ರವಾಸಿ ತಾಣಗಳಿಗೆ ಭೇಟಿ ನೀಡಲು ಅನ್ವಯವಾಗುವ ಏಕೀಕೃತ(ಕಾಂಬೋ) ಟಿಕೆಟ್ ಪರಿಚಯಿಸಿದ್ದು, ಸೆ.20ರಿಂದ ಮೈಸೂರಿನ ವಿವಿಧೆಡೆ ಖರೀದಿಸಬಹುದಾಗಿದೆ.

ಮೈಸೂರು ಜಿಲ್ಲಾಡಳಿತ ಹಾಗೂ ಪ್ರವಾಸೋದ್ಯಮ ಇಲಾಖೆಯ ವತಿಯಿಂದ ಏಕೀಕೃತ ಟಿಕೆಟ್(ಕಾಂಬೋ ಟಿಕೆಟ್) ವ್ಯವಸ್ಥೆಯನ್ನು ಜಾರಿಗೊಳಿಸಲಾಗಿದೆ. ಮೈಸೂರು ಅರಮನೆ, ಮೃಗಾಲಯ, ಚಾಮುಂಡಿಬೆಟ್ಟ, ರೈಲ್ವೆ ಮ್ಯೂಸಿಯಂ ಹಾಗೂ ಕೆಆರ್‌ಎಸ್ ಬೃಂದಾವನಕ್ಕೆ ಪ್ರವೇಶಿಸಬಹುದಾದ ಕಾಂಬೋ ಟಿಕೆಟ್ ಅನ್ನು ಸೆ.20ರಿಂದ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಒಂದು ಟಿಕೆಟ್ ಬೆಲೆ 500 ರೂ.ಗಳಾಗಿದ್ದು, ಮಕ್ಕಳಿಗೆ ಟಿಕೇಟ್ ದರವನ್ನು 250 ರೂ.ಗಳಿಗೆ ನಿಗಧಿಪಡಿಸಲಾಗಿದೆ. ಟಿಕೆಟ್ ಖರೀದಿಸಿದ ಒಬ್ಬರು ಮಾತ್ರ ಪ್ರವಾಸಿ ತಾಣಕ್ಕೆ ಹೋಗಬಹುದಾಗಿದ್ದು, ಈ ಟಿಕೆಟ್ ಅನ್ನು ಕೆಎಸ್‌ಟಿಡಿಸಿ ಹೋಟೆಲ್ ಹಾಗೂ ಟ್ರಾವೆಲ್ಸ್ ವಿಭಾಗದಲ್ಲಿ, ಕೆಎಸ್‌ಆರ್‌ಟಿಸಿ ಗ್ರಾಮಾಂತರ ಹಾಗೂ ನಗರ ಬಸ್ ನಿಲ್ದಾಣಗಳಲ್ಲಿ, ರೈಲ್ವೆ ನಿಲ್ದಾಣದಲ್ಲಿ 2 ಕಡೆ, ಚಾಮುಂಡಿಬೆಟ್ಟ, ಮೃಗಾಲಯ, ಕೆಆರ್‌ಎಸ್, ಅರಮನೆ ಹಾಗೂ ಮೈಸೂರು ನಗರದ ಪ್ರಮುಖ ಹೋಟೆಲ್‌ಗಳಲ್ಲಿ ಟಿಕೆಟ್ ದೊರೆಯಲಿದೆ. ಇದರ ಸದುಪಯೋಗವನ್ನು ಪಡೆದುಕೊಳ್ಳುವಂತೆ ಸಾರ್ವಜನಿಕರು ಹಾಗೂ ಪ್ರವಾಸಿಗರಿಗೆ ಕೋರಲಾಗಿದೆ.

ದಸರಾ ಕುಸ್ತಿಯ ರೋಚಕ ಕ್ಷಣಗಳಿಗೆ ದಿನಗಣನೆ; ಸೆ.26ರಿಂದ ಅ.2ರವರೆಗೆ ಕುಸ್ತಿ ಪಂದ್ಯಾವಳಿ

ನಾಡಕುಸ್ತಿಗೆ ಜೋಡಿ ಕಟ್ಟುವ ಪ್ರಕ್ರಿಯೆಗೆ ಚಾಲನೆ

12 ಮಹಿಳೆಯರೂ ಸೇರಿದಂತೆ 450 ಪಟುಗಳು ನಾಡಕುಸ್ತಿಯಲ್ಲಿ ಭಾಗಿ

ಮೈಸೂರು,ಸೆ.18(ಪಿಎಂ)- ಮಟ್ಟಿ ಮಣ್ಣಿನ ಮಜ್ಜನದೊಂದಿಗೆ ಅಖಾಡದಲ್ಲಿ ಪಟ್ಟಿಗೆ ಪ್ರತಿಪಟ್ಟು ಹಾಕಿ ಸೆಣಸಾಡುವ ರೋಚಕ ಕ್ಷಣಗಳನ್ನು ಕಣ್ತುಂಬಿಕೊಳ್ಳುವ ಮೈಸೂರು ದಸರಾದ ಕುಸ್ತಿಗೆ ದಿನ ಗಣನೆ ಆರಂಭವಾಗಿದ್ದು, ದಸರಾ ಪ್ರಯುಕ್ತ ನಡೆಯುವ ನಾಡ ಕುಸ್ತಿಯ ಜೋಡಿ ಕಟ್ಟುವ ಪ್ರಕ್ರಿಯೆಗೆ ಭಾನುವಾರ ಚಾಲನೆ ನೀಡಲಾಯಿತು.

ನಾಡಕುಸ್ತಿ ಸೇರಿದಂತೆ ದಸರಾ ಕಂಠೀರವ, ದಸರಾ ಕೇಸರಿ, ದಸರಾ ಕಿಶೋರಿ ಮತ್ತು ದಸರಾ ಕುಮಾರ್ ಪ್ರಶಸ್ತಿಗಳಿಗೆ ನಡೆಯುವ ದಸರಾ ಪಾಯಿಂಟ್ ಕುಸ್ತಿ ಈ ಬಾರಿ ಸೆ.26ರಿಂದ ಅ.2ರವರೆಗೆ ಮೈಸೂರಿನ ದೊಡ್ಡಕೆರೆ ಮೈದಾನದ ಡಿ.ದೇವರಾಜ ಅರಸ್ ವಿವಿಧೋದ್ದೇಶ ಕ್ರೀಡಾಂಗಣದಲ್ಲಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ದಸರಾ ಕುಸ್ತಿ ಉಪಸಮಿತಿಯಿಂದ ಇಂದು ವಸ್ತು ಪ್ರದರ್ಶನ ಪ್ರಾಧಿಕಾರದ ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ನಾಡಕುಸ್ತಿಯಲ್ಲಿ ಪಾಲ್ಗೊಳ್ಳುವ ಪೈಲ್ವಾನರ ಜೋಡಿ ಕಟ್ಟುವ ಪ್ರಕ್ರಿಯೆಗೆ ಚಾಲನೆ ದೊರೆಯಿತು.

ರಾಜ್ಯದ ವಿವಿಧ ಭಾಗಗಳಿಂದ 12 ಮಹಿಳಾ ಪಟುಗಳು ಸೇರಿದಂತೆ 450 ಪಟುಗಳು ನಾಡಕುಸ್ತಿಯಲ್ಲಿ ಪಾಲ್ಗೊಳ್ಳಲು ಆಗಮಿಸಿದ್ದು, ಇವರ ಜೋಡಿ ಕಟ್ಟುವ ಪ್ರಕ್ರಿಯೆ ಮುಂದುವರೆದಿದೆ. ಮೂರು ದಿನಗಳ ಬಳಿಕ ಪರಸ್ಪರ ಕಾದಾಡುವ ಜೋಡಿಗಳ ಪಟ್ಟಿ ಪ್ರಕಟಗೊಳ್ಳಲಿದೆ. ಅಲ್ಲದೆ, ಇದೇ ನಾಡಕುಸ್ತಿಯಲ್ಲಿ ಮೇಯರ್ ಕಪ್, ಮುಖ್ಯಮಂತ್ರಿ ಕಪ್ ಸೇರಿದಂತೆ ವಿವಿಧ ಟೈಟಲ್‌ಗಳಿಗೂ ಕಾಳಗ ನಡೆಯಲಿದೆ.



ಮೈಸೂರಿನ ವಸ್ತು ಪ್ರದರ್ಶನ ಪ್ರಾಧಿಕಾರದ ಪಿ.ಕಾಳಿಂಗರಾವ್ ಗಾನ ಮಂಟಪದಲ್ಲಿ ಭಾನುವಾರ ದಸರಾ ನಾಡಕುಸ್ತಿಯಲ್ಲಿ ಪಾಲ್ಗೊಳ್ಳುವ ಪೈಲ್ವಾನರ ಜೋಡಿ ಕಟ್ಟುವ ಪ್ರಕ್ರಿಯೆಗೆ ಪೈಲ್ವಾನರಿಬ್ಬರ ಬೆನ್ನುತಟ್ಟುವ ಮೂಲಕ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮಶೇಖರ್ ಚಾಲನೆ ನೀಡಿದರು.

ದಸರಾ ಮಹೋತ್ಸವದ ಉದ್ಘಾಟನಾ ದಿನವಾದ ಸೆ.26ರಂದೇ ಚಾಲನೆ ಪಡೆಯುವ ಕುಸ್ತಿಯು 7 ದಿನಗಳ ಕಾಲ ಕ್ರೀಡಾಭಿಮಾನಿಗಳಲ್ಲಿ ರೋಮಾಂಚನ ಉಂಟು ಮಾಡಲಿದೆ. ಜೊತೆಗೆ ಪಾಯಿಂಟ್ ಕುಸ್ತಿ ವಿಭಾಗದಲ್ಲಿ ನಡೆಯುವ ವಿವಿಧ ಟೈಟಲ್‌ಗಳ ಕಾದಾಟಗಳು ಪ್ರಮುಖ ಆಕರ್ಷಣೆಯಾಗಲಿವೆ.

ಜೋಡಿ ಕಟ್ಟುವ ಪ್ರಕ್ರಿಯೆ ಚಾಲನೆ ಕಾರ್ಯಕ್ರಮದೊಂದಿಗೆ ಕುಸ್ತಿಗೆ ಪೂರಕವಾದ ಕೆಲ ಸಾಂಪ್ರದಾಯಿಕ ಕ್ರೀಡಾ ಸ್ಪರ್ಧೆಗಳನ್ನು ಸಾಂಕೇತಿಕವಾಗಿ ಇಂದು ನಡೆಸ ಲಾಯಿತು. ದಂಡ ಹೊಡೆಯುವ ಸ್ಪರ್ಧೆಯ ಪುರುಷರ ವಿಭಾಗದಲ್ಲಿ 17 ಮಂದಿ ಪಾಲ್ಗೊಂಡಿದ್ದರು. ಈ ಪೈಕಿ ಶಾಹೀದ್ ಪಾಷ, ಮೊಹಮ್ಮದ್ ಸಾಕೀಬ್ ಹಾಗೂ ಸೈಯದ್ ಹುಸೇನ್ ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದರು. ಪುರುಷರ ಗದೆ ತಿರುಗಿಸುವ ಸ್ಪರ್ಧೆಯಲ್ಲಿ 12 ಮಂದಿ ಭಾಗವಹಿಸಿದ್ದರು. ಈ ಪೈಕಿ ಸಲ್ಮಾನ್‌ಖಾನ್, ಯಶವಂತ್ ಮತ್ತು ಯುನಿಸ್ ಖಾನ್ ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನಗಳನ್ನು ಪಡೆದರು.

ಪುರುಷರ ದಂಡ ಸಪೋರ್ಟ್ ಸ್ಪರ್ಧೆಯಲ್ಲಿ (ದಂಡ ಮತ್ತು ಬಸ್ಕಿ ಎರಡೂ ಹೊಡೆಯುವ ಸ್ಪರ್ಧೆ) 21 ಮಂದಿ ಪಾಲ್ಗೊಂಡಿದ್ದರು. ಈ ಪೈಕಿ ಆಕಾಶ್, ವಿಕಾಸ್ ಮತ್ತು ಸೈಯದ್ ಹುಸೇನ್ ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದರು. 18 ಮಂದಿ ಭಾಗವಹಿಸಿದ್ದ ಪುರುಷರ ಬಸ್ಕಿ ಸ್ಪರ್ಧೆಯಲ್ಲಿ ವಿಕಾಸ್, ಸೈಯದ್ ಹುಸೇನ್ ಮತ್ತು ಕಿರಣ್ ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದರು. 14 ಮಂದಿ ಪಾಲ್ಗೊಂಡಿದ್ದ ಬಾಲಕರ ಬಸ್ಕಿ ಸ್ಪರ್ಧೆಯಲ್ಲಿ ನಿಖಿಲ್, ಚೈತನ್ಯ ಮತ್ತು ದನುಷ್ ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದರು.

ಬಾಲಕಿಯರ ವಿಭಾಗದ ದಂಡ ಸಪೋರ್ಟ್ ಸ್ಪರ್ಧೆಯಲ್ಲಿ 10 ಮಂದಿ ಭಾಗವಹಿಸಿದ್ದರು. ಈ ಪೈಕಿ ಜಾನವಿ, ರಕ್ಷಾ ಮತ್ತು ನಂದಿನಿ ಕ್ರಮವಾಗಿ ಪ್ರಥಮ, ದ್ವಿತೀಯ ಮತ್ತು ತೃತೀಯ ಸ್ಥಾನ ಪಡೆದರು. ಅಂತೆಯೇ ದಂಡ ಹೊಡೆಯುವ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ನಾಲ್ವರು ಬಾಲಕಿಯರಲ್ಲಿ ನಂದಿನಿ ಪ್ರಥಮ ಸ್ಥಾನ ಪಡೆದರೆ, ಗದೆ ತಿರುಗಿಸುವ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ನಾಲ್ವರು ಬಾಲಕಿಯರ ಪೈಕಿ ಜಾನವಿ ಪ್ರಥಮ ಸ್ಥಾನಕ್ಕೆ ಭಾಜನವಾದಳು. ವಿಜೇತರಿಗೆ ನಗದು ಬಹುಮಾನದೊಂದಿಗೆ ಪ್ರಮಾಣ ಪತ್ರಗಳನ್ನು ಕುಸ್ತಿ ಉಪಸಮಿತಿ ನೀಡಲಿದೆ.

ಉಸ್ತುವಾರಿ ಸಚಿವರಿಂದ ಚಾಲನೆ: ಪೈಲ್ವಾನ್ ದರ್ಶನ ಹಾಗೂ ಪೈಲ್ವಾನ್ ಆರ್.ಕುಶಾಲ್ ಅವರ ಬೆನ್ನು ತಟ್ಟುವ ಮೂಲಕ ನಾಡ ಕುಸ್ತಿಯ ಜೋಡಿ ಕಟ್ಟುವ ಪ್ರಕ್ರಿಯೆಗೆ ಜಿಲ್ಲಾ ಉಸ್ತುವಾರಿ ಸಚಿವ ಎಸ್.ಟಿ.ಸೋಮ ಶೇಖರ್ ಚಾಲನೆ ನೀಡಿದರು. ಎಸ್.ಟಿ. ಸೋಮಶೇಖರ್ ಸೇರಿದಂತೆ ಆಗಮಿಸಿದ್ದ ಅತಿಥಿ ಗಣ್ಯರಿಗೆ ಕುಸ್ತಿಯ ಪ್ರತೀಕವಾಗಿ ಕೇಸರಿ ಪೇಟ ತೊಡಿಸಲಾಯಿತು.

ಶಾಸಕ ಜಿ.ಟಿ.ದೇವೇಗೌಡ, ಸಂಸದ ಪ್ರತಾಪ್ ಸಿಂಹ, ಮೇಯರ್ ಶಿವಕುಮಾರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಮಿರ್ಲೆ ಶ್ರೀನಿವಾಸಗೌಡ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಚೇತನ್, ದಸರಾ ಉಪ ವಿಶೇಷಾಧಿಕಾರಿಗಳೂ ಆದ ಡಾ.ಬಿ. ಎನ್.ನಂದಿನಿ, ಡಿವೈಎಸ್‌ಪಿ ಎನ್. ಗೋವಿಂದರಾಜು, ಕುಸ್ತಿ ಉಪಸಮಿತಿ ಕಾರ್ಯದರ್ಶಿ ಎಸ್.ಜೆ. ಹರ್ಷವರ್ಧನ್, ಪೈಲ್ವಾನ್ ಎಸ್.ಮಹದೇವ್ ಮತ್ತಿತರರು ಹಾಜರಿದ್ದರು.

ನಕ್ಕರೆ ಅದೇ ಸ್ವರ್ಗ

ಟೀಚರ್ : ಒಂದರಿಂದ ಹತ್ತರವರೆಗೆ ಸಂಖ್ಯೆ ಹೇಳೋ ಗುಂಡ.
ಗುಂಡ : 1, 2, 3, 5, 6, 7, 8, 9, 10
ಟೀಚರ್ : ನಾಲ್ಕು ಎಲ್ಲೋ?
ಗುಂಡ : ನಾಲ್ಕು ಸತ್ತೋಗಿದೆ ಟೀಚರ್.
ಟೀಚರ್ : ಯಾರೋ ಹೇಳಿದ್ದು?
ಗುಂಡ : ನಿನ್ನೆ ಪೇಪರ್‌ನಲ್ಲಿ ಬಂದಿತ್ತು ಟೀಚರ್, ರಸ್ತೆ ಅಪಘಾತದಲ್ಲಿ ನಾಲ್ಕು ಸಾವು ಅಂತ.

ಮೈಸೂರು ಮಿತ್ರ

ಸೋಮವಾರ, 19 ಸೆಪ್ಟೆಂಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ. ಗೋವಿಂದೇಗೌಡ *M.A.*

ಅಮೃತವಾಹಿನಿ

"ಇತರರಿಗೆ ತಿಳಿಯದಂತೆ ಅವರನ್ನು ನಿಂದಿಸುವುದು ಮಹಾ ಅಪರಾಧ ಎಂಬುದನ್ನು ತಿಳಿಯಿರಿ. ಇದನ್ನು ನೀವು ಸಂಪೂರ್ಣ ತ್ಯಜಿಸಬೇಕು.

– ಸ್ವಾಮಿ ವಿವೇಕಾನಂದ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು

ಎಂದೋ ಬೀಸುವ ಬಿರುಗಾಳಿಗಿಂತ ದಿನ ಬೀಸುವ ತಂಗಾಳಿಯೇ ಉತ್ತಮ.

ನಿಮ್ಮ ಪತ್ರಗಳು

ಮೈಸೂರು ದಸರಾಕ್ಕೆ ಕೆಲವು ಸಲಹೆಗಳು

ಮಾನ್ಯರೆ,

ಮೈಸೂರು ಅರಮನೆ ನಗರ. ಬಹುಶಃ ಲಂಡನ್ ನಗರದಲ್ಲಿರುವ ಬಕಿಂಗ್‌ಹ್ಯಾಂ ಅರಮನೆಯನ್ನು ಮೈಸೂರು ಅರಮನೆ ಹೋಲುತ್ತದೆ. ಮೈಸೂರಿನ ಸುತ್ತಮುತ್ತ ಪ್ರಕೃತಿ ಸೌಂದರ್ಯ ಹಾಗೂ ಅನೇಕ ದೇವಾಲಯಗಳು ವಿಶ್ವ ವಿಖ್ಯಾತವಾಗಿವೆ. ಚಾಮುಂಡಿಬೆಟ್ಟದಲ್ಲಿ ವಿರಾಜಿಸಿರುವ ಚಾಮುಂಡಿದೇವಿಯನ್ನು ಮೈಸೂರಿಗೆ ಬರುವ ಎಲ್ಲ ಪ್ರವಾಸಿಗರು ತಪ್ಪದೇ ನೋಡುತ್ತಾರೆ.

ಈಗ ಮೈಸೂರಿನಲ್ಲಿ ದಸರಾ ಮಹೋತ್ಸವವನ್ನು ಮೂರು ವರ್ಷಗಳಿಂದ ಸರಳವಾಗಿ ಆಚರಿಸಲ್ಪಟ್ಟಿದ್ದು, ಈ ಬಾರಿ ವಿಶೇಷ ರೀತಿಯಿಂದ ಆಚರಿಸಲು ಸರ್ಕಾರ ನಿಶ್ಚಯಿಸಿದೆ. ಇತ್ತೀಚೆಗೆ ಸುರಿದ ಮಳೆಯಿಂದ ಮೈಸೂರು ನಗರದ ಹೆಚ್ಚಿನ ರಸ್ತೆಗಳು ಹದಗೆಟ್ಟಿವೆ. ಇದಲ್ಲದೆ ಯುಜಿಡಿಯವರು ದೇವರಾಜ ಅರಸ್ ರಸ್ತೆ, ಸಂತೆಪೇಟೆ ರಸ್ತೆಗಳನ್ನು ಅಗೆದು ಸಂಚಾರಕ್ಕೆ ಅಡೆತಡೆ ಉಂಟಾಗಿದೆ. ಮೈಸೂರು ನಗರವನ್ನು ವೀಕ್ಷಿಸಲು ಬರುವ ಪ್ರವಾಸಿಗರಿಗೆ ಅರಮನೆ ಸುತ್ತಮುತ್ತ ಕಾರು ನಿಲುಗಡೆಗೆ ಜಾಗ ಸಿಕ್ಕದೆ ಪರದಾಡಬೇಕಿದೆ. ಟೌನ್‌ಹಾಲ್ ಸುತ್ತ ಅರ್ಧ ಕಟ್ಟಿರುವ ಕಟ್ಟಡದಲ್ಲಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಬೇಕಿದೆ. ವಿಶ್ವೇಶ್ವರಯ್ಯ ಕಟ್ಟಡದ ಹಿಂಭಾಗ ಸರಕಾರಿ ಜಾಗದಲ್ಲಿ ತಾತ್ಕಾಲಿಕವಾಗಿ ವಾಹನ ನಿಲುಗಡೆಗೆ ವ್ಯವಸ್ಥೆ ಮಾಡಿದರೆ ಉತ್ತಮ. ಈ ಜಾಗ ನಗರ ಕೇಂದ್ರ ಭಾಗದಲ್ಲಿದ್ದು, ಸಯ್ಯಾಜಿರಾವ್ ರಸ್ತೆಯ ದೀಪಾಲಂಕಾರ ಹಾಗೂ ಅರಮನೆ ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಅನುಕೂಲವಾಗಲಿದೆ. ಇನ್ನು ಫಲಪುಷ್ಪ ಪ್ರದರ್ಶನ ನಡೆಯುವ ಜಾಗ ಕಿರಿದಾಗಿದ್ದು, ಮಳೆ ಬಂದರೆ ಈ ಜಾಗದಲ್ಲಿ ನೀರು ತುಂಬುತ್ತದೆ. ಫಲಪುಷ್ಪ ಪ್ರದರ್ಶನವನ್ನು ಮುಂದೆ ವಸ್ತುಪ್ರದರ್ಶನ ನಡೆಯುವ ದೊಡ್ಡಕೆರೆ ಮೈದಾನದ ಪೂರ್ವ ದಿಕ್ಕಿನಲ್ಲಿ ಇರುವ ಖಾಲಿ ಜಾಗದಲ್ಲಿ ಮಾಡಿದರೆ ಪ್ರವಾಸಿಗರಿಗೆ ಅನುಕೂಲವಾಗುತ್ತದೆ. ಮೈಸೂರಿನ ಸುತ್ತಮುತ್ತ ಇರುವ ಪ್ರವಾಸಿ ತಾಣಗಳಿಗೆ ಬೆಳಗ್ಗೆ ಹೋಗಿ ಸಾಯಂಕಾಲ ಬರುವ ವ್ಯವಸ್ಥೆ ಮಾಡಿದರೆ ಪ್ರವಾಸಿಗರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಬೃಂದಾವನ, ಕನ್ನಂಬಾಡಿ ಅಣೆಕಟ್ಟೆಯಲ್ಲಿ ಹೆಚ್ಚಿನ ದೀಪಾಲಂಕಾರ ಮಾಡಿದರೆ ಉತ್ತಮ. ವಿದೇಶಿ ಪ್ರವಾಸಿಗರಿಗೆ ದೂರದರ್ಶನ ಹಾಗೂ ಆಕಾಶವಾಣಿಗಳಲ್ಲಿ ಹೆಚ್ಚಿನ ಪ್ರಚಾರ ನೀಡಿದರೆ ಉತ್ತಮ. ಆಹಾರ ಮೇಳ, ಯುವ ಜನ ಮೇಳಕ್ಕೆ ಹೆಚ್ಚಿನ ಪ್ರಚಾರ ನೀಡಬೇಕಿದೆ. ಈ ವರ್ಷದ ದಸರಾ ಮಹೋತ್ಸವ ವಿವಿಧ ರಾಜ್ಯ ಹಾಗೂ ಪರದೇಶದಿಂದ ಬರುವ ಪ್ರವಾಸಿಗರಿಗೆ ಹೆಚ್ಚಿನ ಮೆರುಗು ನೀಡಲಿ ಎನ್ನುವುದು ಮೈಸೂರಿನ ಜನತೆಯ ಆಶಯ.

– ಮಜೂರು ರಘುವೀರ ಪುರಾಣಿಕ್, ಮೈಸೂರು.

ಸಾಮಾಜಿಕ ಭದ್ರತಾ ಪಿಂಚಣಿದಾರರ ಬವಣೆ

ಮಾನ್ಯರೆ,

ವೃದ್ಧಾಪ್ಯರು, ಅಂಗವಿಕಲರು, ವಿಧವೆಯರು ಹಾಗೂ ಮೈತ್ರಿ–ಮನಸ್ವಿನಿ ಈ ಯೋಜನೆಯಡಿ ಮಾಸಾಶನ ಪಡೆಯುತ್ತಿರುವುದು ಸರಿಯಷ್ಟೇ. ಕೆಲವರು ತಮ್ಮ ಬ್ಯಾಂಕಿನ ಖಾತೆಯ ಮೂಲಕ ಪಿಂಚಣಿ ಹಣ ಪಡೆಯುತ್ತಿದ್ದರೆ, ಮತ್ತೆ ಕೆಲವರು ಅಂಚೆ ಕಚೇರಿಯ ಮುಖಾಂತರ ಮಾಸಾಶನ ಹಣ ಪಡೆದುಕೊಳ್ಳುತ್ತಿದ್ದಾರೆ.

ಮೈಸೂರು ನಗರದ ನರಸಿಂಹರಾಜ ಅಂಚೆ ಕಚೇರಿಯಲ್ಲಿ ಸಾಮಾಜಿಕ ಭದ್ರತಾ ಫಲಾನುಭವಿಗಳು ಖಾತೆ ತೆರೆದು ಪ್ರತಿ ತಿಂಗಳು ಸರ್ಕಾರದಿಂದ ಮಂಜೂರಾಗಿರುವ ಪಿಂಚಣಿ ಹಣ ಪಡೆದುಕೊಳ್ಳುತ್ತಿದ್ದರು. ಕೆಲ ತಿಂಗಳಿಂದ ಕ್ಯಾಷ್ ಕೌಂಟರ್‌ನಲ್ಲಿ ಹಣ ಕೊಡುವುದನ್ನು ನಿಲ್ಲಿಸಿದ್ದು, ಅಂಚೆ ಪೇದೆಗಳು ಪ್ರತಿಯೊಬ್ಬ ಪಿಂಚಣಿದಾರರ ಫಿಂಗರ್ ಪ್ರಿಂಟ್ ಪಡೆದು ಹಣ ವಿತರಣೆ ಮಾಡುತ್ತಿದ್ದಾರೆ.


ಅಂಚೆ ಪೇದೆಗಳು ಬೆಳಗ್ಗೆ ಬೀಟ್‌ಗೆ ತೆರಳುವ ಮುನ್ನ ಒಂದು ತಾಸು ಮಧ್ಯಾಹ್ನ ಒಂದು ತಾಸು ಮಾತ್ರ ಪಿಂಚಣಿ ವಿತರಣೆ ಮಾಡುತ್ತಾರೆ. ಇದರಿಂದ ವಯೋವೃದ್ಧರು, ವಿಧವೆಯರು, ಅಂಗವಿಕಲರು ಬೆಳಗ್ಗೆಯೇ ಅಂಚೆ ಕಚೇರಿಯಲ್ಲಿ ಅಂಚೆ ಪೇದೆ ಕಚೇರಿಗೆ ಬರುವುದನ್ನೇ ಜಾತಕ ಪಕ್ಷಿಯಂತೆ ಕಾಯುವಂತಹ ಪರಿಸ್ಥಿತಿ ನಿಜಕ್ಕೂ ಶೋಚನೀಯ. ಈ ಕೂಡಲೇ ಸಂಬಂಧಪಟ್ಟ ಮೇಲಾಧಿಕಾರಿಗಳು ಈ ಸಮಸ್ಯೆಯನ್ನು ಬಗೆಹರಿಸಿ ಸಾಮಾಜಿಕ ಭದ್ರತಾ ಪಿಂಚಣಿದಾರರು ಹಣ ಪಡೆದುಕೊಳ್ಳಲು ಪಡುತ್ತಿರುವ ಬವಣೆ ತಪ್ಪಿಸಬೇಕಾಗಿ ಮನವಿ.

–ಎಸ್.ರಾಜಗೋಪಾಲ್, ಗಾಂಧಿನಗರ, ಮೈಸೂರು

ವಿನಯಶೀಲ ವಿದ್ವಾಂಸ

ಮಾನ್ಯರೆ,

ಖ್ಯಾತ ಇತಿಹಾಸಕಾರ ಪ್ರೊ. ಬಿ.ಷೇಕ್ ಅಲಿಯವರು ಇತ್ತೀಚೆಗೆ ಇತಿಹಾಸ ಲೀನರಾದರಷ್ಟೆ, ಇದೊಂದು ನೆನಪು.



ಹಿಂದೊಮ್ಮೆ ಮಹಾಜನ ಕಾಲೇಜಿನಲ್ಲಿ ನಡೆಯುತ್ತಿದ್ದ ಯಾವುದೋ ಕಾರ್ಯಕ್ರಮದಲ್ಲಿ ಕುಳಿತಿದ್ದ ಅಲಿ ಅವರತ್ತ ನಾನು ಹೋದ ಕೂಡಲೇ, ದಿಗ್ಗನೆ ಎದ್ದು ನಿಂತರು! (ನಮ್ಮ ನಡುವೆ ಕಿಂಚಿತ್ ಪರಿಚಯವಿತ್ತು). 'ಕುಳಿತುಕೊಳ್ಳಿ ಸರ್' ಎಂದೆ. ಅವರು ಕೊಟ್ಟ ಉತ್ತರವಾದರೂ ಏನು? 'No, no. I must honour you!' (ಇಲ್ಲ ಇಲ್ಲ, ನಾನು ನಿಮ್ಮನ್ನು ಗೌರವಿಸಬೇಕು).

ವಯಸ್ಸಿನಲ್ಲಾಗಲೀ, ವಿದ್ವತ್ತಿನಲ್ಲಾಗಲೀ ನಾನು ಅವರಿಗಿಂತ ತೀರಾ ಕಿರಿಯ. ಆದರೂ ಅವರು ತೋರಿದ ವರ್ತನೆ ವಿರಳ ರೀತಿಯದು!

'ತ್ರಿವಿಕ್ರಮ'(?): ಷೇಕ್ ಅಲಿಯವರು ಮಂಗಳೂರು ವಿವಿ ಕುಲಪತಿಯಾಗಿದ್ದಾಗ ಪ್ರೊ. ಬಿ.ಎ.ವಿವೇಕ ರೈ ಅವರ ಆಪ್ತ ಕಾರ್ಯದರ್ಶಿಯಾಗಿದ್ದರು. ಅನಂತರ ಕನ್ನಡ ವಿವಿ ಕುಲಪತಿಯಾದರು. ಅವರೇನೂ ನನ್ನ ವಿದ್ಯಾರ್ಥಿಯಲ್ಲ, ಮಿತ್ರರಷ್ಟೆ. ಒಂದೆಡೆ ನನ್ನ ಬಗೆಗೆ ಅವರ ಉಕ್ತಿಯಿದು: 'ಸಿಪಿಕೆ ಅನ್ನುವ ಮೂರು ಅಕ್ಷರಗಳು ಕನ್ನಡ ಸಾಹಿತ್ಯ, ಸಂಸ್ಕೃತಿಯನ್ನು ತ್ರಿವಿಕ್ರಮನಂತೆ ಆವರಿಸಿಕೊಂಡಿವೆ'. 'ಕೋಡು ಏನಾಯಿತು? ಮುರಿದು ಹೋಯಿತೆ?

ಇಂಥವರೂ ಇದ್ದರು; ಇದ್ದಾರೆ. ಅವರಿಗೆ ನನ್ನ ನಮನ!

– ಸಿಪಿಕೆ , ದತ್ತಪೀಠ ಆಸ್ಥಾನ ವಿದ್ವಾನ್, ಮೈಸೂರು.

ದಿಕ್ಕುದೆಸೆ



ಕಾರ್ಕಳ ಆನಂದಭಟ್
ಮೊ.7676554198

ನಿಷ್ಕ್ರಿಯ ಖಾತೆಗಳ ಸಮಸ್ಯೆಯಲ್ಲಿ ಬ್ಯಾಂಕ್‌ಗಳು

ಕಂಪ್ಯೂಟರ್ ತಂತ್ರಜ್ಞಾನ ಬರುವವರೆಗೆ ಬ್ಯಾಂಕ್‌ಗಳಲ್ಲಿ ಖಾತೆ ಹೊಂದಿದವರು ಹೊಸ ಗ್ರಾಹಕನಿಗೆ ಖಾತೆ ತೆರೆಯಲು ಪರಿಚಯಿಸುವ ಕ್ರಮವಿತ್ತು. ಆದರೆ ಪರಿಚಯಿಸುವವರು ಹೊಸಬನ ಬ್ಯಾಂಕ್ ವ್ಯವಹಾರಕ್ಕೆ ಸಂಬಂಧಿಸಿದಂತೆ ಬಾಧ್ಯನಾಗುವುದಿಲ್ಲ. ಈ ವಿಷಯದಲ್ಲಿ ದೇಶದ ಸರ್ವೋಚ್ಚ ನ್ಯಾಯಾಲಯವು ಕೂಡ ತನ್ನ ಒಂದು ತೀರ್ಪಿನಲ್ಲಿ ಯಾವುದೇ ಅಧಿಕೃತ ಪುರಾವೆ, ದಾಖಲೆ ಅಥವಾ ಸಾಕ್ಷ್ಯವಿಲ್ಲದೇ ಹೊಸ ಖಾತೆದಾರ ಮಾಡಿರುವ ವಂಚನೆ ಅಥವಾ ಸುಸ್ತಿ ಸಾಲಕ್ಕೆ ಪರಿಚಯಿಸಿದವನು ಜವಾಬ್ದಾರನಾಗುವುದಿಲ್ಲ, ಆತನನ್ನು ಜವಾಬ್ದಾರಿ ಮಾಡುವಂತೆಯೂ ಇಲ್ಲವೆಂದು ತಿಳಿಸಿತ್ತು. ಈ ತೀರ್ಪಿನ ನಂತರ ಖಾತೆ ತೆರೆಯುವ ನಿಯಮಗಳಲ್ಲಿ ಅನೇಕ ಬದಲಾವಣೆಗಳಾದವು. ಇಂದಿನ ದಿನಗಳಲ್ಲಿ ಪರಿಚಯಿಸುವಿಕೆ ಕಡ್ಡಾಯವಲ್ಲ. ಇದನ್ನು ಆರ್‌ಬಿಐ ಕೂಡಾ ಬೆಂಬಲಿಸಿದೆ. ಆದರೆ ಇದನ್ನು ಸ್ಥಾನೀಯ ಪರಿಸ್ಥಿತಿ ಹಾಗೂ ಪ್ರಬಂಧಕರ ವಿವೇಚನೆಗೆ ಬಿಡಲಾಗಿದೆ. ಅದೇ ರೀತಿ ಹೊಸ ಗ್ರಾಹಕ ತನ್ನ ವಿಳಾಸದ ದಾಖಲೆ ಭಾವಚಿತ್ರ ಹಾಗೂ ಅಗತ್ಯ ದಾಖಲೆಗಳನ್ನು ಕಡ್ಡಾಯವಾಗಿ ನೀಡಬೇಕು.



ಜನಸಾಮಾನ್ಯರು ಉದ್ಯೋಗ ಹಾಗೂ ಇನ್ನಿತರ ಉದ್ದೇಶ ನಿಮಿತ್ತ ವಲಸೆ ಹೋಗುವುದು ಸಹಜ ಸಂಗತಿಯಾಗಿದೆ. ಇಂತಹ ಸಂದರ್ಭಗಳಲ್ಲಿ ಹೊಸ ಸ್ಥಳಗಳಲ್ಲಿ ಹೊಸತಾಗಿ ಬ್ಯಾಂಕ್ ಖಾತೆಗಳನ್ನು ತೆರೆಯುತ್ತಾರೆ. ಆದರೆ ತಮ್ಮ ಹಣಕಾಸು ಸಂಬಂಧಿ ವ್ಯವಹಾರಗಳ ವಿಷಯವನ್ನು ತಮ್ಮ ಕುಟುಂಬ, ಪರಿವಾರ ಕೊನೆಗೆ ಸ್ನೇಹಿತರಿಗೂ ತಿಳಿಸುವುದಿಲ್ಲ. ಇದು ಸರಿ ಎನಿಸಿದರೂ ಕೆಲವು ಸಂದರ್ಭಗಳಲ್ಲಿ ಸಮಸ್ಯೆಯನ್ನು ಸೃಷ್ಟಿಸುತ್ತವೆ. ಆಕಸ್ಮಿಕವಾಗಿ ಖಾತೆದಾರನಿಗೆ ಏನಾದರೂ ಆದಲ್ಲಿ ಪರಿಚಯಿಸಿದವರಿಂದ ಸಮಸ್ಯೆ ಪರಿಹಾರವಾಗುವ ಸಂಭಾವ್ಯತೆ ಇರುತ್ತದೆ.

ಇಂತಹ ಅವಕಾಶಗಳಿಲ್ಲದಾಗ ಖಾತೆಗಳು ವ್ಯವಹಾರವಿಲ್ಲದೆ, ವಾರಸುದಾರರಿಲ್ಲದೆ ನಿಷ್ಕ್ರಿಯವಾಗುತ್ತವೆ. ಆರ್‌ಬಿಐ ಮಾರ್ಗದರ್ಶಿ ಸೂತ್ರದಂತೆ ಹತ್ತು ವರ್ಷಗಳಿಂದ ಒಂದು ಖಾತೆಯಲ್ಲಿ ಬ್ಯಾಂಕ್‌ಗಳು ಜಮಾ ಮಾಡುವ ಬಡ್ಡಿ ಮತ್ತು ಖಾತೆಗೆ ವಿಧಿಸುವ ನಿರ್ವಹಣಾ ಶುಲ್ಕ ಹೊರತುಪಡಿಸಿ ಖಾತೆದಾರ ಸ್ವತಃ ಯಾವುದೇ ವ್ಯವಹಾರ ಮಾಡದಿದ್ದಲ್ಲಿ ಅಂತಹ ಖಾತೆಯನ್ನು ನಿಷ್ಕ್ರೀಯ ಖಾತೆ ಎಂದು ಪರಿಗಣಿಸಲಾಗುತ್ತದೆ.

ವ್ಯವಹಾರವಿಲ್ಲದ ಉಳಿತಾಯ, ಚಾಲ್ತಿ, ಆವರ್ತನ ಹಾಗೂ ನಿರಖು ಠೇವಣಿ ಖಾತೆಗಳು, ಸಾಲ ಮರುಪಾವತಿಸಿದ ನಂತರ ಉಳಿದ ಹೆಚ್ಚುವರಿ ಹಣ, ಬ್ಯಾಂಕ್‌ಗಳು ನೀಡಿದ ಪ್ರೀಪೇಯ್ಡ್ ಕಾರ್ಡ್‌ನಿಂದ ಪಡೆಯದೇ ಉಳಿದ ಹಣ, ನಗದೀಕರಿಸಲು ಸಲ್ಲಿಸಿದ ಡಿಮ್ಯಾಂಡ್ ಡ್ರಾಫ್ಟ್, ಪೇ ಆರ್ಡರ್ ಇತ್ಯಾದಿಗಳನ್ನು ನಿಷ್ಕ್ರಿಯ ಖಾತೆಗಳೆಂದು ಪರಿಗಣಿಸಲಾಗುತ್ತದೆ. ಬ್ಯಾಂಕ್‌ನವರು ಇಂತಹ ಖಾತೆದಾರರನ್ನು ಸಂಪರ್ಕಿಸಿ ಖಾತೆಗಳನ್ನು ಊರ್ಜಿತ ಅಥವಾ ಮುಕ್ತಾಯಗೊಳಿಸಲು ತಿಳಿಸಬೇಕು.

ಹಕ್ಕು ಮಂಡಿಸದ ಠೇವಣಿಗಳ ಪ್ರಮಾಣ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿರುವುದು ಬ್ಯಾಂಕ್‌ಗಳಿಗೆ ಸಮಸ್ಯೆಯಾಗಿ ಪರಿಣಮಿಸಿದೆ. ಆರ್‌ಬಿಐ ನೀಡಿರುವ ಮಾಹಿತಿಯಂತೆ 2008ರಲ್ಲಿ ಹಕ್ಕು ಮಂಡಿಸದೇ ನಿಷ್ಕ್ರಿಯವಾಗಿರುವ ವಿವಿಧ ಖಾತೆಗಳಲ್ಲಿ ಉಳಿದ ಠೇವಣಿ ಮೊತ್ತ ರೂ. 1188 ಕೋಟಿಯಾಗಿತ್ತು. ಮುಂದಿನ ಐದು ವರ್ಷಗಳಲ್ಲಿ ಅಂದರೆ 2013 ರಲ್ಲಿ ಈ ಪ್ರಮಾಣ ರೂ. 5125 ಕೋಟಿಗೇರಿತು. 2018ರಲ್ಲಿ ರೂ. 14307 ಕೋಟಿಯಾದರೆ, 2019 ರ ಆರ್ಥಿಕ ವರ್ಷ ಮುಕ್ತಾಯ ವಾದಾಗ ರೂ. 18380 ಕೋಟಿಯಾಯಿತು. ಕೇವಲ ಆರು ವರ್ಷಗಳಲ್ಲಿ ದಾಖಲೆ ಪ್ರಮಾಣದ ಅಂದರೆ ಸುಮಾರು ರೂ. 13000 ಕೋಟಿ ಏರಿಕೆಯಾಯಿತು.

> ಹಕ್ಕು ಮಂಡಿಸದ ಠೇವಣಿಗಳ ಪ್ರಮಾಣ ವರ್ಷದಿಂದ ವರ್ಷಕ್ಕೆ ಏರಿಕೆಯಾಗುತ್ತಿರುವುದು ಬ್ಯಾಂಕ್‌ಗಳಿಗೆ ಸಮಸ್ಯೆಯಾಗಿ ಪರಿಣಮಿಸಿದೆ. ಆರ್‌ಬಿಐ ನೀಡಿರುವ ಮಾಹಿತಿಯಂತೆ 2008ರಲ್ಲಿ ಹಕ್ಕು ಮಂಡಿಸದೇ ನಿಷ್ಕ್ರಿಯವಾಗಿರುವ ವಿವಿಧ ಖಾತೆಗಳಲ್ಲಿ ಉಳಿದ ಠೇವಣಿ ಮೊತ್ತ ರೂ. 1188 ಕೋಟಿಯಾಗಿತ್ತು. ಮುಂದಿನ ಐದು ವರ್ಷಗಳಲ್ಲಿ ಅಂದರೆ 2013 ರಲ್ಲಿ ಈ ಪ್ರಮಾಣ ರೂ. 5125 ಕೋಟಿಗೇರಿತು. 2018ರಲ್ಲಿ ರೂ. 14307 ಕೋಟಿಯಾದರೆ, 2019 ರ ಆರ್ಥಿಕ ವರ್ಷ ಮುಕ್ತಾಯವಾದಾಗ ರೂ. 18380 ಕೋಟಿಯಾಯಿತು. ಕೇವಲ ಆರು ವರ್ಷಗಳಲ್ಲಿ ದಾಖಲೆ ಪ್ರಮಾಣದ ಅಂದರೆ ಸುಮಾರು ರೂ. 13000 ಕೋಟಿ ಏರಿಕೆಯಾಯಿತು.

ಕಳೆದ ವರ್ಷ ಡಿಸೆಂಬರ್ 14 ರಂದು ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ನಿಷ್ಕ್ರಿಯ ಖಾತೆಗಳ ಬಗ್ಗೆ ವಿವರವಾದ ಹೇಳಿಕೆ ನೀಡಿದರು. ಅವರು ನೀಡಿದ ಮಾಹಿತಿಯಂತೆ 31.12.2020ರ ಅಂತ್ಯಕ್ಕೆ ದೇಶದ ವಿವಿಧ ವಾಣಿಜ್ಯ ಬ್ಯಾಂಕ್‌ಗಳಲ್ಲಿ ಕಳೆದ ಹತ್ತು ವರ್ಷಗಳಿಂದ ವ್ಯವಹಾರವಿಲ್ಲದೇ ನಿಷ್ಕ್ರೀಯವಾಗಿರುವ ಒಟ್ಟು 8,13,34,849 ಖಾತೆಗಳಲ್ಲಿ ಉಳಿದಿರುವ ಹಣದ ಮೊತ್ತ ರೂ. 24,356 ಕೋಟಿ ಎಂದು ತಿಳಿಸಿದರು. ಅದೇ ರೀತಿ ಅರ್ಬನ್ ಕೋ–ಆಪರೇಟಿವ್ ಬ್ಯಾಂಕ್‌ಗಳಲ್ಲಿರುವ 77,03,819 ನಿಷ್ಕ್ರೀಯ ಖಾತೆಗಳಲ್ಲಿ ರೂ. 2,341 ಕೋಟಿ ಇರುವುದಾಗಿ ಹೇಳಿಕೆ ನೀಡಿದರು. ಜೀವ ವಿಮಾ ಹಾಗೂ ಇತರ ವಿಮಾ ಕಂಪನಿಗಳಲ್ಲಿ 2021 ಮಾರ್ಚ್ ಅಂತ್ಯಕ್ಕೆ ಹಕ್ಕು ಮಂಡಿಸದ ವಿಮಾ ಪಾಲಿಸಿಗಳಲ್ಲಿ ಒಟ್ಟು ರೂ. 23,285.07 ಕೋಟಿ ಇರುವುದಾಗಿ ತಿಳಿಸಿದರು. ದೇಶದ ಸ್ಟಾಕ್ ಎಕ್ಸ್‌ಚೇಂಜ್‌ನಿಂದ ಪಡೆದ ಮಾಹಿತಿಯಂತೆ 31.03.2021ರ ಅಂತ್ಯಕ್ಕೆ ವಿವಿಧ ಮ್ಯೂಚುವಲ್ ಫಂಡ್‌ಗಳಲ್ಲಿ ಹಕ್ಕು ಮಂಡಿಸದೇ ಉಳಿದಿರುವ ಮೊತ್ತ ರೂ. 1,590.67 ಕೋಟಿ. ಈ ರೀತಿ ದೇಶದ ವಿವಿಧ ವಾಣಿಜ್ಯ ಬ್ಯಾಂಕ್‌ಗಳು ಹಾಗೂ ವಿತ್ತೀಯ ವ್ಯವಹಾರ ನಡೆಸುತ್ತಿರುವ ಇತರ ಸಂಸ್ಥೆಗಳಲ್ಲಿ ಕಳೆದ ಹತ್ತು ವರ್ಷಗಳಿಂದ ಹಕ್ಕು ಮಂಡಿಸದೇ ಉಳಿದಿರುವ ಹಣಕಾಸು ಮೊತ್ತ ರೂ. 51,500 ಕೋಟಿ ಎಂದು ವಿತ್ತ ಸಚಿವರು ತಿಳಿಸಿದ್ದರು.

ಠೇವಣಾತಿ ಶಿಕ್ಷಣ ಮತ್ತು ಜಾಗೃತಿ ನಿಧಿ (ಡಿಇಎ ಫಂಡ್) ಸ್ಥಾಪನೆ

ಹಕ್ಕು ಮಂಡಿಸದ ನಿಷ್ಕ್ರೀಯ ಖಾತೆಗಳ ಸಮಸ್ಯೆ ಪರಿಹರಿಸಲು ಭಾರತ ಸರಕಾರವು 2014, ಮಾರ್ಚ್‌ನಲ್ಲಿ ಆರ್‌ಬಿಐಗೆ ಡಿಇಎ ನಿಧಿ ರಚಿಸುವ ಅಧಿಕಾರ ನೀಡಿತು. 2014, ಮೇ ತಿಂಗಳಲ್ಲಿ ಆರ್‌ಬಿಐ ತನ್ನ ಗೆಜೆಟ್‌ನಲ್ಲಿ ಡಿಇಎ ನಿಧಿ ಸ್ಥಾಪಿಸುವ ಅಧಿಸೂಚನೆ ಹೊರಡಿಸಿತು. ಈ ಕಾಯ್ದೆಯಂತೆ ಎಲ್ಲಾ ವಾಣಿಜ್ಯ ಬ್ಯಾಂಕ್‌ಗಳು ಹತ್ತು ವರ್ಷಗಳಿಂದ ನಿಷ್ಕ್ರಿಯವಾಗಿರುವ ಖಾತೆಗಳಲ್ಲಿರುವ ಮೊತ್ತವನ್ನು ಪ್ರತಿ ತಿಂಗಳು ಪಟ್ಟಿ ಮಾಡಿ ಅವುಗಳಿಗೆ ಬಡ್ಡಿ ಸೇರಿಸಿ ಮುಂದಿನ ಮೂರು ತಿಂಗಳೊಳಗೆ ಡಿಇಎ ನಿಧಿಗೆ ವರ್ಗಾಯಿಸಬೇಕು. 2018–19ರ ಆರ್ಥಿಕ ವರ್ಷದಲ್ಲಿ ಬ್ಯಾಂಕ್‌ಗಳು ಹಾಗೂ ವಿಮಾ ಕಂಪನಿಗಳಿಂದ ಡಿಇಎ ನಿಧಿಗೆ ರೂ. 25,747 ಕೋಟಿ ಜಮೆಯಾದರೆ, 2019–20ರಲ್ಲಿ ರೂ. 33,114 ಕೋಟಿಗೇರಿತು. ನಿಷ್ಕ್ರಿಯ ಖಾತೆಗಳ ಗ್ರಾಹಕರನ್ನು ಪತ್ತೆ ಹಚ್ಚಿ, ಗುರುತಿಸಿ, ಠೇವಣಿ ವಾಪಾಸು ನೀಡುವಲ್ಲಿ ಅನುಸರಿಸುತ್ತಿರುವ ನಿಧಾನ ನೀತಿಯೊಂದಿಗೆ ಸಿಬ್ಬಂದಿ ಕೊರತೆಯಿಂದಾಗಿಯೂ ಹಕ್ಕು ಮಂಡಿಸದೇ ಉಳಿದ ಠೇವಣಿ ಪ್ರಮಾಣದಲ್ಲಿ ಭಾರಿ ಏರಿಕೆಯಾಗಿದೆ.

ಡಿಇಎ ನಿಧಿಯ ವಿನಿಯೋಜನೆ

ಪ್ರತ್ಯೇಕ ಬ್ಯಾಂಕ್‌ಗಳಲ್ಲಿ ಡಿಇಎ ನಿಧಿಯಲ್ಲಿ ಜಮೆಯಾದ ಮೊತ್ತವನ್ನು ಆರ್‌ಬಿಐ ರೂಪಿಸಿದ ಸಮಿತಿ ನಿರ್ಧರಿಸಿದೆ. ಸರಕಾರಿ ಬಾಂಡ್‌ಗಳಲ್ಲಿ ಹೂಡಿಕೆ ಮಾಡುತ್ತದೆ. ಈ ಹೂಡಿಕೆಯಲ್ಲಿ ಬಂದ ಆದಾಯವನ್ನು ಖಾತೆದಾರರಿಗೆ ಬಡ್ಡಿ ನೀಡಲು, ಗ್ರಾಹಕರಿಗೆ ಠೇವಣಾತಿಗಳ ಕುರಿತು ಮಾಹಿತಿ, ಶಿಕ್ಷಣ ಹಾಗೂ ಜಾಗೃತಿಗೊಳಿಸಲು ಬಳಸಲಾಗುವುದು.

ನಿಷ್ಕ್ರೀಯ ಖಾತೆಗಳ ಊರ್ಜಿತ/ಮುಕ್ತಾಯಗೊಳಿಸುವ ವಿಧಾನ

ಆರ್‌ಬಿಐ ನಿಯಮದಂತೆ ಪ್ರತಿ ಬ್ಯಾಂಕ್ ನಿಷ್ಕ್ರೀಯ ಖಾತೆಗಳ ಮಾಹಿತಿಯನ್ನು ತಮ್ಮ ವೆಬ್‌ಸೈಟ್‌ನಲ್ಲಿ ಪ್ರಕಟಿಸಬೇಕು. ಗ್ರಾಹಕ ತನ್ನ ಖಾತೆಯ ಮಾಹಿತಿ ಪಡೆದು, ತನ್ನ ಖಾತೆಯನ್ನು ಊರ್ಜಿತ/ಮುಕ್ತಾಯಗೊಳಿಸಲು ನಿಗದಿತ ನಮೂನೆಯಲ್ಲಿ ಮಾಹಿತಿ ಭರ್ತಿಗೊಳಿಸಿ ಇದರೊಂದಿಗೆ ಬ್ಯಾಂಕ್ ಸೂಚಿಸಿದ ದಾಖಲೆಗಳು ಹಾಗೂ ಕೆವೈಸಿ ನೀಡಬೇಕು. ಅನಂತರ ಬ್ಯಾಂಕ್ ಖಾತೆದಾರನ ವಿಶ್ವಾಸಾರ್ಹತೆ, ಹಸ್ತಾಕ್ಷರ, ಗುರುತು ಪತ್ರ ಪರಿಶೀಲಿಸಿ ಖಾತ್ರಿಯಾದ ನಂತರವೇ ಗ್ರಾಹಕನಿಗೆ ಆತನ ಖಾತೆಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲು ಅವಕಾಶ ನೀಡಲಾಗುತ್ತದೆ. ಆದರೆ ಯಾವುದೇ ಕಾರಣಕ್ಕೂ ಗ್ರಾಹಕನನ್ನು ನಿರ್ಲಕ್ಷಿಸುವುದಕ್ಕೆ ಅವಕಾಶವಿಲ್ಲ.

ಗ್ರಾಹಕನು ಮೃತನಾಗಿದ್ದಲ್ಲಿ ಆತನ ನಾಮಿನಿ ಅಥವಾ ಕಾನೂನುಬದ್ಧ ವಾರಸುದಾರರು ಠೇವಣಿ ದಾಖಲೆ, ಮರಣ ಪ್ರಮಾಣ ಪತ್ರ ಹಾಗೂ ಅಗತ್ಯ ದಾಖಲೆಗಳನ್ನು ನೀಡಬೇಕು. ಬ್ಯಾಂಕ್ ದಾಖಲೆಗಳಲ್ಲಿನ ಮಾಹಿತಿ ಮತ್ತು ವಿಶ್ವಾಸಾರ್ಹತೆ ಪರಿಶೀಲಿಸಿ ಖಾತ್ರಿಯಾದ ನಂತರವೇ ಠೇವಣಿಯನ್ನು ಬಡ್ಡಿ ಸಹಿತ ನೀಡುತ್ತದೆ. ತದನಂತರ ಬ್ಯಾಂಕ್ ಈ ಠೇವಣಾತಿಯ ಪೂರ್ಣ ಮಾಹಿತಿಯನ್ನು ಆರ್‌ಬಿಐಗೆ ಸಲ್ಲಿಸಿ ಡಿಇಎ ನಿಧಿಯಿಂದ ಪಡೆಯುತ್ತದೆ. ಗ್ರಾಹಕರು ತಮ್ಮ ವಿಳಾಸ ಬದಲಾದಾಗಲೆಲ್ಲಾ ಬ್ಯಾಂಕ್‌ಗಳಿಗೆ ಮಾಹಿತಿ ನೀಡುವುದರಿಂದ ಮತ್ತು ತಮ್ಮ ಖಾತೆಗಳಿಗೆ ನೇಮಿಸಿದ ನಾಮಿನಿಯ ಸ್ಪಷ್ಟ ವಿಳಾಸ ನೀಡುವುದರಿಂದ ಸಂಭಾವ್ಯ ಸಮಸ್ಯೆಗಳನ್ನು ನಿವಾರಿಸಬಹುದು.

ರಾಜ್ಯದಲ್ಲಿ ಭಾನುವಾರ 306 ಮಂದಿಗೆ ಕೊರೊನಾ

ಬೆಂಗಳೂರು, ಸೆ.18– ರಾಜ್ಯದಲ್ಲಿ ಕೊರೊನಾ ಪಾಸಿಟಿವ್ ಪ್ರಕರಣಗಳ ಸಂಖ್ಯೆಯಲ್ಲಿ ಏರಿಳಿತ ಮುಂದುವರೆದಿದ್ದು, ಕಳೆದ 24 ಗಂಟೆಯಲ್ಲಿ306 ಮಂದಿಗೆ ಕೋವಿಡ್ ಪಾಸಿಟಿವ್ ದೃಢಪಟ್ಟಿದೆ. ಇದರೊಂದಿಗೆ ಸೋಂಕಿತರ ಸಂಖ್ಯೆ 40,61,463ಕ್ಕೆ ಏರಿಕೆಯಾಗಿದೆ.

ಇನ್ನೂ ರಾಜ್ಯದಲ್ಲಿ ಮಹಾಮಾರಿ ಕೊರೋನಾದಿಂದ ಇಂದು ಇಬ್ಬರು ಮೃತಪಟ್ಟಿದ್ದು, ಇದರೊಂದಿಗೆ ಸಾವಿನ ಸಂಖ್ಯೆ 40234ಕ್ಕೆ ಏರಿಕೆಯಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಪ್ರಕಟಣೆಯಲ್ಲಿ ತಿಳಿಸಿದೆ.

ಬೆಂಗಳೂರಿನಲ್ಲಿ ಇಂದು 145 ಮಂದಿಗೆ ಸೋಂಕು ದೃಢಪಟ್ಟಿದೆ. ಇದರೊಂದಿಗೆ ನಗರದಲ್ಲಿ ಸೋಂಕಿತರ ಸಂಖ್ಯೆ 1870114ಕ್ಕೆ ಏರಿಕೆಯಾಗಿದೆ. ಇಂದು ರಾಜಧಾನಿಯಲ್ಲಿ ಕೊರೊನಾದಿಂದ ಯಾವುದೇ ಸಾವು ವರದಿಯಾಗಿಲ್ಲ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಹೇಳಿದೆ. ರಾಜ್ಯದಲ್ಲಿ ಇಂದು 293 ಸೋಂಕಿತರು ಗುಣಮುಖರಾಗಿ ಆಸ್ಪತ್ರೆಯಿಂದ ಡಿಸ್ಚಾರ್ಜ್ ಆಗಿದ್ದಾರೆ. ಇದರೊಂದಿಗೆ ಸೋಂಕಿನಿಂದ ಚೇತರಿಸಿಕೊಂಡವರ ಸಂಖ್ಯೆ 4017441ಕ್ಕೆ ಏರಿಕೆಯಾಗಿದೆ. ಇನ್ನು 3746 ಸಕ್ರಿಯ ಪ್ರಕರಣಗಳಿವೆ.

ವಿನೂತನ ಸಂಸ್ಥೆಯಿಂದ ಪ್ರತಿಭಾನ್ವಿತರಿಗೆ ಪ್ರಶಸ್ತಿ ಪ್ರದಾನ

ಮೈಸೂರು, ಸೆ.18(ಜಿಎ)– ಮೈಸೂರಿನ ಕೃಷ್ಣಮೂರ್ತಿ ಪುರಂನಲ್ಲಿರುವ ಹೋಟೆಲ್ ಮಾಲೀಕರ ಸಂಘದ ಶ್ರೀ ಕುತ್ತೆತ್ತೂರು ಸೀತಾರಾಮರಾವ್ ಭವನದಲ್ಲಿ ವಿನೂತನ ಸಂಸ್ಥೆಯ ರಜತ ಮಹೋತ್ಸವ ಸಮಾರಂಭ ಅಂಗವಾಗಿ ಏರ್ಪಡಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿರುವ ವ್ಯಕ್ತಿ ಹಾಗೂ ಯುವ ಪ್ರತಿಭೆಗಳಿಗೆ ವಿವಿಧ ಪ್ರಶಸ್ತಿಗಳನ್ನು ನೀಡಿ ಅಭಿನಂದಿಸಲಾಯಿತು.

ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿದ ಶ್ರೀ ರಾಮಕೃಷ್ಣ ವಿದ್ಯಾ ಶಾಲೆಯ ಸಂಪರ್ಕಾಧಿಕಾರಿ ಸ್ವಾಮಿ ಯುಕ್ತೇಶಾನಂದಜಿ, ವಿದ್ಯಾರ್ಥಿಗಳು ಕಲೆ, ಕ್ರೀಡೆ, ಸಾಹಿತ್ಯ, ಸಂಗೀತ ಸೇರಿದಂತೆ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡುವುದರೊಟ್ಟಿಗೆ ಒಳ್ಳೆಗುಣ ನಡತೆಯನ್ನು ಬೆಳೆಸಿಕೊಳ್ಳಬೇಕು. ನಮ್ಮಲ್ಲಿ ಕ್ರೀಡೆ, ಕಲೆ, ಸಂಸ್ಕೃತಿ ಆಧ್ಯಾತ್ಮ ಸೇರಿದಂತೆ ಎಲ್ಲಾ ಪ್ರತಿಭೆಗಳು ನಮ್ಮೊಳಗೆ ಇರುತ್ತದೆ ಅದನ್ನು ನಾವೇ ಗುರುತಿಸಿ ಹೊರ ತರಬೇಕು. ಯಾವುದೇ ಪ್ರತಿಭೆ ಅನಾವರಣವಾಗಬೇಕು ಎಂದರೆ ಅದರ ಜೊತೆ ಶಿಸ್ತು, ತರಬೇತಿ ಎಂಬುದು ಬಹಳ ಮುಖ್ಯವಾಗಿದೆ ಎಂದು ತಿಳಿಸಿದರು.



ಈ ವೇಳೆ ಮೈಸೂರು ಆರ್ಯುವೇದ ಮಹಾವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕ ಡಾ. ವಿ. ರಾಜೇಂದ್ರ ಅವರಿಗೆ 'ಸರ್ವ ಶ್ರೇಷ್ಠ ಸಾರ್ಥಕ ಸೇವಾ' ಪ್ರಶಸ್ತಿ ಮತ್ತು ಅಂತರ ರಾಷ್ಟ್ರೀಯ ಹರ್ಡಲ್ಸ್ ಓಟಗಾರ ಆರ್ಯನ್ ಪ್ರಜ್ವಲ್ ಕಶ್ಯಪ್, ರಾಷ್ಟ್ರಮಟ್ಟದ ಕಿಕ್ ಬಾಕ್ಸಿಂಗ್ ಕ್ರೀಡಾಪಟು ದುರ್ಗಾ ಭವಾನಿಗೆ ವರ್ಷದ 'ಸರ್ವ ಶ್ರೇಷ್ಠ ಯುವಕ ಯುವತಿ ಎಂಬ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ನಂತರ ಕಳೆದ ಎಸ್‌ಎಸ್‌ಎಲ್‌ಸಿ ಯಲ್ಲಿ ಶೇ.100 ಅಂಕ ಗಳಿಸಿದ ಎಂ.ಜೆ. ಏಕ್ತಾ ಹಾಗೂ ಪಿಯುಸಿಯಲ್ಲಿ ಶೇ.99 ಅಂಕ ಗಳಿಸಿರುವ ಅನನ್ಯ 'ಶ್ರೀ ಶಾರದಾ ಸುತೆ' ಪ್ರಶಸ್ತಿ ಹಾಗೂ ಎಸ್.ಎಸ್ ಯಶಸ್ವಿ ತೇಜಸ್, ಎ.ತನ್ಮಯಿ, ಆರ್. ರಚನ, ಎಸ್.ರೋಹಿತ್, ಹೆಚ್.ಎನ್.ಲತಾಶ್ರೀ, ಪಿ.ಕಾಜೋಲ್ ಪ್ರಸಾದ್, ವಿ.ವಿದ್ಯಾ, ಆರ್.ಪ್ರಸನ್ನ ಬಾಲಾಜಿ, ಹೆಚ್.ವಿ ಅನನ್ಯ, ಎಸ್.ಜೆ.ಸ್ಫೂರ್ತಿ, ವಿ.ಅನ್ನಪೂರ್ಣ, ಕೆ.ಪದನ್, ಡಿ.ಹಂಸವೇಣಿ, ಬಿ. ಮಹಾಲಕ್ಷ್ಮಿ, ಸಿ.ಸಾಗರ್, ವಿ.ಚರಣ್, ಕೆ.ಪವನ್, ಕೆ.ಎಂ.ರಾಜುಗೆ ಪಿಯುಸಿ ವಿದ್ಯಾ ಭೂಷಣ ಪ್ರಶಸ್ತಿ ನೀಡಲಾಯಿತು.

ಪಿ.ವತ್ಸಲಾ, ಪ್ರಭು, ಎನ್.ಆರ್.ಶಶಾಂಕ್, ಎನ್.ರಾಹುಲ್, ಎನ್.ಅಭಿನವ್ ಶ್ರೀವಿಜಯ್, ಸಿ.ಸಿಂಚನ, ಎಸ್.ಸ್ತುತಿ, ಬಿ.ಎಂ.ಸ್ಪಂದನ, ತುಷಾರ ಎನ್. ಭಾರದ್ವಾಜ್, ಟಿ.ಎ. ಪ್ರಫುಲ್ ತೇಜಸ್ವಿ, ಎನ್.ಸ್ಕಂದ, ಎಂ.ವೈ ಅಪೇಕ್ಷ ಅನಘ ಬಿ.ಅಯ್ಯರ್, ಧನುಷ್, ಬಿ.ವಿ. ಭುವನ್, ಎಚ್.ದೀಕ್ಷ, ಎಂ.ಜಿ. ರವಿಕುಮಾರ್, ವೈ.ವಿ. ಕೀರ್ತನಗೆ ಎಸ್‌ಎಸ್‌ಎಲ್‌ಸಿ ವಿದ್ಯಾಭೂಷಣ ಪ್ರಶಸ್ತಿ ನೀಡಿ ಅಭಿನಂದಿಸಲಾಯಿತು.

ಯಂಗ್ ಅಚೀವರ್ ಆಫ್ ದಿ ಇಯರ್ ಪ್ರಶಸ್ತಿಯನ್ನು ಕಲ್ಪನಾ ಕುಟ್ಟಪ್ಪ, ಯು. ಸುಪ್ರಿಯಾ, ಫಲ್ಕಿಯಾ ಖಾನ್, ಹೆಚ್.ಎಸ್. ಸಾಕ್ಷಿ, ಹೆಚ್.ಎಸ್. ಶಶಾಂಕ್, ಎಸ್. ಸುಮುಖ್, ಬಿ.ಕೆ.ಅತ್ರಿ ಕೌಶಿಕ್, ಎಂ.ಕೆ. ಸಂಜೀವ್ ರಾಜ್, ಮಹಮದ್ ಹುಸೇನ್ ಖಾನ್‌ಗೆ ನೀಡಲಾಯಿತು. ಕಿ.ಎಂ.ನಾಗರಾಜ್, ಜಿ.ವಿ.ಗೀತ, ಪಿ.ಎಂ.ಮಂಜುಳ, ಬಿ.ವಿ. ಶ್ರೀನಾಥ್, ಅರ್ಷಿಯಾ ಸುಲ್ತಾನ್, ಎ.ಸಿ.ಉಷಾರಾಣಿ, ಎಸ್. ಮಂಜುನಾಥ ಶೆಟ್ಟಿ, ವೀಣಾ, ನರಸಿಂಹ ಜೆ. ಕುಲಕರ್ಣಿ ಅವರಿಗೆ 'ರಾಷ್ಟ್ರೀಯ ಸಾರ್ಥಕ ಸೇವಾ ಸನ್ಮಾನಾರ್ಥ' ಪ್ರಶಸ್ತಿಗೆ ಭಾಜನರಾದರು.

ಕಾರ್ಯಕ್ರಮದಲ್ಲಿ ವಿನೂತನ ಸಂಸ್ಥೆ ಅಧ್ಯಕ್ಷ ಸಿ. ನಾರಾಯಣಗೌಡ ಸೇರಿದಂತೆ ಪದಾಧಿಕಾರಿಗಳು ಉಪಸ್ಥಿತರಿದ್ದರು.



ಮೈಸೂರು ಸಿಟಿ ಕೋ–ಆಪರೇಟಿವ್ ಬ್ಯಾಂಕ್‌ನ 112ನೇ ವಾರ್ಷಿಕ ಮಹಾಸಭೆ ಭಾನುವಾರ ನಡೆಯಿತು. ಸಭೆಯನ್ನು ಬ್ಯಾಂಕ್ ಅಧ್ಯಕ್ಷ ಎಸ್.ಬಿ.ಶಿವು ಉದ್ಘಾಟಿಸಿದರು. ಉಪಾಧ್ಯಕ್ಷೆ ಹೇಮಾ ಹಾಗೂ ಎಲ್ಲಾ ನಿರ್ದೇಶಕರು ಉಪಸ್ಥಿತರಿದ್ದರು

ಟೀಮ್ ಇಂಡಿಯಾದ ಹೊಸ ಸಮವಸ್ತ್ರ ಅನಾವರಣ

ಮುಂಬೈ, ಸೆ.18– ಮುಂಬರುವ ಟ್ವೆಂಟಿ–20 ವಿಶ್ವಕಪ್‌ಗಾಗಿ ಟೀಮ್ ಇಂಡಿಯಾದ ಹೊಸ ಸಮವಸ್ತ್ರವನ್ನು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಭಾನುವಾರ ಅನಾವರಣಗೊಳಿಸಿದೆ.



ಇದರೊಂದಿಗೆ ಮುಂಬರುವ ಟಿ20 ವಿಶ್ವಕಪ್‌ನಲ್ಲಿ ಟೀಮ್ ಇಂಡಿಯಾ ಆಟಗಾರರು ಹೊಸ ಲುಕ್‌ನಲ್ಲಿ ಕಾಣಿಸಿ ಕೊಳ್ಳಲಿದ್ದಾರೆ. ಕಿಟ್ ಪ್ರಾಯೋಜಕತ್ವ ಹೊಂದಿರುವ ಎಂಪಿಎಲ್ ಸ್ಪೋರ್ಟ್ ಸಹಯೋಗದಲ್ಲಿ ಬಿಸಿಸಿಐ, ಭಾರತ ಪುರುಷ ಹಾಗೂ ಮಹಿಳಾ ಕ್ರಿಕೆಟ್ ತಂಡದ ಜೆರ್ಸಿ ಅನಾವರಣಗೊಳಿಸಿದೆ. ಐಸಿಸಿ ಟ್ವೆಂಟಿ–20 ವಿಶ್ವಕಪ್‌ಗೆ ಆಸ್ಟ್ರೇಲಿಯಾಗೆ ಆತಿಥ್ಯ ವಹಿಸುತ್ತಿದ್ದು, ಅಕ್ಟೋಬರ್ 16ರಿಂದ ನವೆಂಬರ್ 13ರ ವರೆಗೆ ಸಾಗಲಿದೆ. ಇದಕ್ಕೂ ಮೊದಲು ಭಾರತ ತಂಡವು ತವರಿನಲ್ಲಿ ಆಸ್ಟ್ರೇಲಿಯಾ ಮತ್ತು ದಕ್ಷಿಣ ಆಫ್ರಿಕಾ ವಿರುದ್ಧ ಟಿ20 ಸರಣಿಯಲ್ಲಿ ಶಕ್ತಿ ಪ್ರದರ್ಶನ ನಡೆಸಲಿದೆ.

ನೇಮಕ



ಮೈಸೂರು, ಸೆ.18– ಮೈಸೂರು ನಗರ ಕಾಂಗ್ರೆಸ್ ಅಲ್ಪಸಂಖ್ಯಾತರ ವಿಭಾಗದ ಸಂಘಟನಾ ಕಾರ್ಯದರ್ಶಿಯಾಗಿ ಮಂಡಿಮೊಹಲ್ಲಾದ ಇರ್ಫಾನ್ ಪಾಷ ಅವರನ್ನು ನೇಮಕ ಮಾಡಿ ಮೈಸೂರು ನಗರ ಅಲ್ಪಸಂಖ್ಯಾತರ ವಿಭಾಗದ ಅಧ್ಯಕ್ಷ ಎಸ್.ವಿ. ಶಾಬುದ್ದೀನ್ ಆದೇಶಿಸಿದ್ದಾರೆ.

ಡುರಾಂಡ್ ಕಪ್: ಮುಂಬೈ ಮಣಿಸಿದ ಬೆಂಗಳೂರು ಎಫ್‌ಸಿಗೆ ಚೊಚ್ಚಲ ಪ್ರಶಸ್ತಿ

ಕೋಲ್ಕತ್ತ, ಸೆ.18– ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಬೆಂಗಳೂರು ಫುಟ್‌ಬಾಲ್ ಕ್ಲಬ್ (ಬಿಎಫ್‌ಸಿ) ಚೊಚ್ಚಲ ಬಾರಿಗೆ ಚಾಂಪಿಯನ್ ಪಟ್ಟ ಅಲಂಕರಿಸಿದೆ.

ಕೋಲ್ಕತ್ತದ ಸಾಲ್ಟ್ ಲೇಕ್ ಸ್ಟೇಡಿಯಂನಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಬೆಂಗಳೂರು ಎಫ್‌ಸಿ ತಂಡವು ಮುಂಬೈ ಸಿಟಿ ಎಫ್‌ಸಿ ವಿರುದ್ಧ 2–1ರ ಅಂತರದ ಭರ್ಜರಿ ಗೆಲುವು ದಾಖಲಿಸಿತು.

ಸುನಿಲ್ ಚೆಟ್ರಿ ಮುಂದಾಳತ್ವದಲ್ಲಿ ಬೆಂಗಳೂರು ಎಫ್‌ಸಿ ತಂಡವು ಟೂರ್ನಿಯುದ್ದಕ್ಕೂ ಅದ್ಭುತ ಪ್ರದರ್ಶನವನ್ನು ನೀಡಿದೆ. ಅಲ್ಲದೆ 38 ವರ್ಷದ ಚೆಟ್ರಿ, ಡುರಾಂಡ್ ಕಪ್ ಕೊರತೆಯನ್ನು ನೀಗಿಸಿದ್ದಾರೆ.

10ನೇ ನಿಮಿಷದಲ್ಲಿ ಶಿವ ಶಕ್ತಿ ಹಾಗೂ 61ನೇ ನಿಮಿಷದಲ್ಲಿ ಬ್ರೆಜಿಲ್‌ನ ಅಲನ್ ಕೋಸ್ಟಾ ಗೋಲು ಬಾರಿಸುವ ಮೂಲಕ ಬೆಂಗಳೂರು ಗೆಲುವಿನಲ್ಲಿ ಮಹತ್ವದ ಪಾತ್ರ ವಹಿಸಿದರು. ಶಿವ ಶಕ್ತಿ ಟೂರ್ನಿಯಲ್ಲಿ ಒಟ್ಟು ಐದು ಗೋಲು ದಾಖಲಿಸುವ ಮೂಲಕ ಗಮನ ಸೆಳೆದರು.

1888ರಲ್ಲಿ ಡುರಾಂಡ್ ಕಪ್ ಪ್ರಪ್ರಥಮ ಬಾರಿಗೆ ಶಿಮ್ಲಾದಲ್ಲಿ ಆಯೋಜನೆಯಾಗಿತ್ತು. ಅಲ್ಲದೆ ಅಸ್ತಿತ್ವದಲ್ಲಿರುವ ಏಷ್ಯಾದ ಅತ್ಯಂತ ಹಳೆಯ ಕ್ಲಬ್ ಮತ್ತು ಜಗತ್ತಿನ ಮೂರನೇ ಅತಿ ಹಳೆಯ ಟೂರ್ನಿಯೆನಿಸಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಸಾಹಿತಿ ಹೆಚ್.ಎಸ್.ಸುಜಾತಾ ನಿಧನ



ಮೈಸೂರು, ಸೆ.18– ವಿಶ್ರಾಂತ ಪ್ರಾಧ್ಯಾಪಕಿ, ಸಾಹಿತಿ ಡಾ.ಹೆಚ್.ಎಸ್.ಸುಜಾತಾ(77) ಅವರು ಭಾನುವಾರ ಆಲನಹಳ್ಳಿಯ ವಾಸವಿ ಶಾಂತಿಧಾಮದಲ್ಲಿ ನಿಧನರಾದರು.

ಮೃತರು ಪತಿ ಡಾ.ಎಸ್.ರಮಾನಂದ ಶೆಟ್ಟಿ ಅವರನ್ನು ಅಗಲಿದ್ದಾರೆ. ಮೃತರು ನಿಶ್ಚಯಿಸಿದಂತೆ ಜೆಎಸ್‌ಎಸ್ ಆಸ್ಪತ್ರೆಗೆ ದೇಹದಾನ ಮಾಡಲಾಗಿದೆ ಎಂದು ಸಂಸ್ಥೆ ಮೂಲಗಳು ತಿಳಿಸಿವೆ.

ಮೈಸೂರು ವಿವಿಯಲ್ಲಿ ಹಾ.ಮಾ.ನಾಯಕರ ಮಾರ್ಗದರ್ಶನದಲ್ಲಿ ಸುಜಾತಾ ಅವರು ಸಂಶೋಧನೆ ನಡೆಸಿ ಸಾದರಪಡಿಸಿದ್ದ 'ಎಂ.ಎಸ್.ಪುಟ್ಟಣ್ಣ–ಒಂದು ಅಧ್ಯಯನ' ಗ್ರಂಥಕ್ಕೆ ಪಿಹೆಚ್.ಡಿ ಲಭಿಸಿತ್ತು. ಡಿ.ಬನುಮಯ್ಯ ವಾಣಿಜ್ಯ ಮತ್ತು ಕಲಾ ಕಾಲೇಜಿನಲ್ಲಿ ಕನ್ನಡ ಪ್ರಾಧ್ಯಾಪಕಿಯಾಗಿ ಸುದೀರ್ಘ ಸೇವೆ ಸಲ್ಲಿಸಿ ನಿವೃತ್ತರಾಗಿದ್ದ ಅವರು, ಶಿಕ್ಷಣ ಹಾಗೂ ಕಲಾ ಸಂಸ್ಥೆಗಳಿಗೆ ಉದಾರ ಧನ ಸಹಾಯ ಮಾಡಿದ್ದರು. 'ಹಕ್ಕಿಯ ಬುದ್ಧಿ ಮತ್ತು ಇತರ ಐದು ಕಥೆಗಳು', 'ಹಸು ಮತ್ತು ಹೆಗ್ಗಣ ಮತ್ತು ಇತರ ಏಳು ಕಥೆಗಳು', 'ಗುಮ್ಮ ನಾಯಕನ ಪಾಳಯದ ಪಾಳೆಯಗಾರರು', 'ಸೀತೆಯ ಭವಿಷ್ಯ' ಸೇರಿದಂತೆ ಸಂಶೋಧನೆ, ವಿಮರ್ಶೆ, ಅನುವಾದ, ಕಾವ್ಯ, ಮಕ್ಕಳ ಸಾಹಿತ್ಯ, ಗ್ರಂಥಸಂಪಾದನೆ, ಜೀವನಚರಿತ್ರೆ, ಅಂಕಣಬರಹ ಸೇರಿ 25ಕ್ಕೂ ಹೆಚ್ಚು ಪುಸ್ತಕ ಪ್ರಕಟಿಸಿದ್ದರು.

ಸುಜಾತ ಅವರು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಕೊಡಮಾಡುವ 'ಮಲ್ಲಿಕಾ ಪ್ರಶಸ್ತಿ', ಕರ್ನಾಟಕ ಸಾಹಿತ್ಯ ಅಕಾಡೆಮಿಯ 'ಅತ್ಯುತ್ತಮ ಸೃಜನಶೀಲ ಅನುವಾದ ಪುರಸ್ಕಾರ', ಗೊರೂರು ಪ್ರತಿಷ್ಠಾನದ 'ಅತ್ಯುತ್ತಮ ಅನುವಾದ ಪ್ರಶಸ್ತಿ', ಅತ್ತಿಮಬ್ಬೆ ಪ್ರತಿಷ್ಠಾನದ 'ಅತ್ತಿಮಬ್ಬೆ ಸಾಹಿತ್ಯ ಪ್ರಶಸ್ತಿ', ದೆಹಲಿ ಕನ್ನಡಿಗ ಮಾಸಪತ್ರಿಕೆ 'ಗೋಪಾಲಕೃಷ್ಣ ಅಡಿಗ ಸ್ಮಾರಕ ಸಾಹಿತ್ಯ ಪ್ರಶಸ್ತಿ'ಗೆ ಬಾಜನರಾಗಿದ್ದರು. ಮೈಸೂರು ವಿವಿ ಪದವಿ ಶಿಕ್ಷಣ ಕನ್ನಡ ಅಧ್ಯಯನ ಮಂಡಳಿ ಸದಸ್ಯರಾಗಿ, ಪದವಿ ಪಠ್ಯಪುಸ್ತಕ ರಚನಾ ಸಮಿತಿ ಸದಸ್ಯರಾಗಿ ಹೀಗೆ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದರು.

'ನೈಪುಣ್ಯ ದಸರಾ ಪ್ರಶಸ್ತಿ' ಚಿತ್ರಕಲಾ ಸ್ಪರ್ಧೆಯಲ್ಲಿ ಚಿಣ್ಣರ ಕೈಚಳಕ



ಮೈಸೂರು, ಸೆ.18– ಮೈಸೂರು ದಸರಾ ಮಹೋತ್ಸವದ ಅಂಗವಾಗಿ ಆರ್.ಟಿ.ನಗರದ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯಲ್ಲಿ 'ನೈಪುಣ್ಯ ದಸರಾ ಪ್ರಶಸ್ತಿ' ಅಂತರಶಾಲಾ ಚಿತ್ರಕಲಾ ಸ್ಪರ್ಧೆ ಆಯೋಜಿಸಲಾಗಿತ್ತು. ಭಾನುವಾರ ನಡೆದ ಚಿತ್ರಕಲಾ ಸ್ಪರ್ಧೆಯಲ್ಲಿ ಮೈಸೂರಿನ ವಿವಿಧ ಶಾಲೆಗಳ ಎಲ್‌ಕೆಜಿಯಿಂದ 10ನೇ ತಗರತಿವರೆಗಿನ 500ಕ್ಕೂ ಹೆಚ್ಚು ವಿದ್ಯಾರ್ಥಿಗಳು ಭಾಗವಹಿಸಿ 'ಮೈಸೂರು ಪರಂಪರೆ', 'ದಸರಾ ವೈಭವ' ಹಾಗೂ 'ಪಾರಂಪರಿಕ ಕಟ್ಟಡಗಳು' ವಿಷಯಾನುಸಾರ ಚಿತ್ರ ಬಿಡಿಸಿದರು. ತಮ್ಮ ಪ್ರತಿಭೆ ಅನಾವರಣಕ್ಕೆ ಲಭ್ಯವಾಗಿದ್ದ ವಿಶೇಷ ವೇದಿಕೆಯನ್ನು ಸದುಪಯೋಗಪಡಿಸಿಕೊಂಡು ವಿಭಿನ್ನ ಚಿತ್ರಗಳನ್ನು ಬಿಡಿಸಿ ರಂಗು ತುಂಬಿದರು.

ಇಂದು ಬೆಳಗ್ಗೆ 9 ರಿಂದ ಮಧ್ಯಾಹ್ನ 12ರವರೆಗೆ ಸ್ಪರ್ಧೆ ಆಯೋಜಿಸಲಾಗಿತ್ತು. ಪ್ರೌಢ, ಹಿರಿಯ ಹಾಗೂ ಕಿರಿಯ ವಿಭಾಗಗಳಲ್ಲಿ ಮಕ್ಕಳು ಭಾಗವಹಿಸಿದ್ದರು. ಮುಂದಿನ ನಿಗದಿತ ದಿನದಲ್ಲಿ ವಿಜೇತ ವಿದ್ಯಾರ್ಥಿಗಳ ಪಟ್ಟಿ ಪ್ರಕಟಿಸಲಾಗುತ್ತದೆ. ಪ್ರೌಢ ವಿಭಾಗದ ಪ್ರಥಮ ಬಹುಮಾನಕ್ಕೆ ಬಾಜನವಾಗುವ ವಿದ್ಯಾರ್ಥಿಗೆ 10 ಸಾವಿರ ರೂ. ನಗದು ಹಾಗೂ 'ನೈಪುಣ್ಯ ದಸರಾ ಪ್ರಶಸ್ತಿ' ಪ್ರದಾನ ಮಾಡಲಾಗುತ್ತದೆ. ಇನ್ನುಳಿದ 2 ವಿಭಾಗದ ವಿಜೇತರಿಗೂ ನಗದು ಬಹುಮಾನ ಹಾಗೂ ಪ್ರಶಸ್ತಿ ನೀಡಲಾಗುವುದು ಎಂದು ಶಾಲೆಯ ಪ್ರಕಟಣೆ ತಿಳಿಸಿದೆ.

ಡಾ.ಎನ್.ಸತೀಶ್‌ಗೌಡರಿಗೆ 'ಅತ್ಯುತ್ತಮ ಸಂಯೋಜನಾಧಿಕಾರಿ' ರಾಜ್ಯ ಪ್ರಶಸ್ತಿ



ಬೆಂಗಳೂರು, ಸೆ.18– ಯುವಜನ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ವತಿಯಿಂದ ನೀಡಲಾದ 2020–21ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನೆಯ 'ಅತ್ಯುತ್ತಮ ಸಂಯೋಜನಾಧಿಕಾರಿ' ರಾಜ್ಯ ಪ್ರಶಸ್ತಿಗೆ ಚಾಮರಾಜನಗರ ಮೂಲದ ಡಾ.ಎನ್.ಸತೀಶ್ ಗೌಡ ಬಾಜನರಾಗಿದ್ದಾರೆ.

ಇತ್ತೀಚೆಗೆ ಬೆಂಗಳೂರು ರಾಜಭವನದ ಗಾಜಿನ ಮನೆಯಲ್ಲಿ ನಡೆದ ಸಮಾರಂಭದಲ್ಲಿ ರಾಜ್ಯಪಾಲ ತಾವರ್ ಚೆಂದ್ ಗೆಹ್ಲೋಟ್ ಅವರು ಡಾ.ಎನ್.ಸತೀಶ್ ಗೌಡರಿಗೆ ಪ್ರಶಸ್ತಿ ಪ್ರದಾನ ಮಾಡಿ, ಅಭಿನಂದಿಸಿದರು. ಬೆಂಗಳೂರು ವಿಶ್ವವಿದ್ಯಾಲಯ ಕಾನೂನು ಕಾಲೇಜಿನ ಸಹಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸುತ್ತಿರುವ ಇವರು, ಚಾಮರಾಜನಗರ ಜಿಲ್ಲೆ, ಯಳಂದೂರು ತಾಲೂಕಿನ ಟಿ.ಹೊಸೂರು ಗ್ರಾಮದ ಹಿರಿಯ ವಕೀಲರೂ ಆದ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಸಂಚಾಲಕ ಎನ್.ನಂಜೇಗೌಡ ಹಾಗೂ ಶ್ರೀಮತಿ ಕಮಲಾಕ್ಷಿ ದಂಪತಿ ಪುತ್ರ. ಪ್ರಶಸ್ತಿ ಪ್ರದಾನ ವೇಳೆ ಕ್ರೀಡಾ ಸಚಿವ ಸಿ.ನಾರಾಯಣಗೌಡ, ರಾಜ್ಯ ಎನ್‌ಎಸ್‌ಎಸ್ ಅಧಿಕಾರಿ ಪ್ರತಾಪ್ ಲಿಂಗಯ್ಯ, ಆಯುಕ್ತ ಗೋಪಾಲ ಕೃಷ್ಣೆಗೌಡ, ಬೆಂಗಳೂರು ವಿವಿ ಕುಲಪತಿ ಪ್ರೊ.ಎಸ್.ಎನ್.ಜಯಕರ, ಬೆಂಗಳೂರು ನಗರ ವಿವಿ ಕುಲಪತಿ ಪ್ರೊ.ಲಿಂಗರಾಜ ಗಾಂಧಿ ಮತ್ತಿತರರು ಉಪಸ್ಥಿತರಿದ್ದರು.

ಕರ್ನಾಟಕ ಲೇಖಕಿಯರ ಸಂಘಕ್ಕೆ ಕವಯತ್ರಿ ಪುಷ್ಪಾ ಅಧ್ಯಕ್ಷೆ

ಬೆಂಗಳೂರು, ಸೆ.18– ಕರ್ನಾಟಕ ಲೇಖಕಿಯರ ಸಂಘದ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಕವಯತ್ರಿ ಎಚ್.ಎಲ್. ಪುಷ್ಪಾ ಜಯಶೀಲರಾಗಿದ್ದಾರೆ.

ಬೆಂಗಳೂರಿನ ಎನ್.ಆರ್. ಕಾಲೊನಿಯಲ್ಲಿರುವ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ಭಾನುವಾರ ಬೆಳಿಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಮತದಾನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಹಾಲಿ ಅಧ್ಯಕ್ಷೆ ವನಮಾಲಾ ಸಂಪನ್ನಕುಮಾರ್ ಹಾಗೂ ಪುಷ್ಪಾ ಅವರ ನಡುವೆ ನೇರ ಸ್ಪರ್ಧೆ ಏರ್ಪಟ್ಟಿತ್ತು. ಅಂತಿಮವಾಗಿ 62 ಮತಗಳ ಅಂತರದಿಂದ ಪುಷ್ಪಾ ವಿಜೇತರಾಗಿ ಹೊರಹೊಮ್ಮಿದರು. ಎಚ್.ಎಲ್. ಪುಷ್ಪಾ 342, ವನಮಾಲಾ ಸಂಪನ್ನಕುಮಾರ್ 280 ಹಾಗೂ ಶೈಲಜಾ ಸುರೇಶ್ 33 ಮತಗಳನ್ನು ಪಡೆದಿದ್ದಾರೆ. ಸಂಘದ 1,330 ಸದಸ್ಯರಲ್ಲಿ 1,295 ಮಂದಿ ಮತದಾನದ ಅರ್ಹತೆ ಹೊಂದಿದ್ದರು. ಜಿಲ್ಲೆಗಳಲ್ಲಿ ಸದಸ್ಯರು ಅಂಚೆಗಳ ಮೂಲಕ ಮತ ಚಲಾಯಿಸಿದ್ದರು. ಬೆಂಗಳೂರಿನಲ್ಲಿ 650 ಮಂದಿ ಮತದಾನದ ಅರ್ಹತೆ ಹೊಂದಿದ್ದರು. ರಾಜ್ಯದ ಎಲ್ಲೆಡೆಯಿಂದ 699 ಮತಗಳು ಚಲಾವಣೆಯಾಗಿದ್ದವು. 44 ಮತಗಳು ತಿರಸ್ಕರಿಸಲ್ಪಟ್ಟಿವೆ.

'ಯುವ ಸಂಭ್ರಮ'ದಲ್ಲಿ ಕನ್ನಡ ನೆಲ-ಜಲ, ನಾಡು-ನುಡಿ, ಪ್ರಾಣಿ-ಪಕ್ಷಿಗಳ ಸಂರಕ್ಷಣೆಯ ಜೊತೆಗೆ ರಾಷ್ಟ್ರೀಯ ಭಾವೈಕ್ಯತೆಯ ಅನಾವರಣ...

ಪುನೀತ್ ರಾಜ್‌ಕುಮಾರ್ ಸೇರಿದಂತೆ ಚಿತ್ರರಂಗದ ಗಣ್ಯರ ಸ್ಮರಣೆ



ರಂಗರಾವ್ ಸ್ಮಾರಕ ವಿಕಲಚೇತನ ಶಾಲಾ ಮಕ್ಕಳ 'ನವಿಲು ಸಂರಕ್ಷಣೆ' ನೃತ್ಯ



ಟೆರಿಷಿಯನ್ ಪದವಿಪೂರ್ವ ಕಾಲೇಜು ವಿದ್ಯಾರ್ಥಿನಿಯರಿಂದ ನೃತ್ಯ ಪ್ರದರ್ಶನ



ಹೆಲನ್ ಕೆಲ್ಲರ್ ಅಂಧ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರದ ತಂಡದ ನೃತ್ಯ



ಮಳವಳ್ಳಿ ಶಾಂತಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು ತಂಡದ ನೃತ್ಯ ರೂಪಕ

ಮೈಸೂರು, ಸೆ.18(ಎಂಕೆ)- ಮೈಸೂರು ದಸರಾ ಎಷ್ಟೊಂದು ಸುಂದರ... ಅಂಬಾರಿ ಊರಿನಲ್ಲಿ ನವರಾತ್ರಿ ವೈಭವ... ಕನ್ನಡ ನೆಲ-ಜಲ, ನಾಡು-ನುಡಿ, ಪ್ರಾಣಿ-ಪಕ್ಷಿಗಳ ಸಂರಕ್ಷಣೆಯ ಜೊತೆಗೆ ರಾಷ್ಟ್ರೀಯ ಭಾವೈಕ್ಯತೆಯ ಅನಾವರಣ...!

ಮಾನಸಗಂಗೋತ್ರಿ ಬಯಲು ರಂಗ ಮಂದಿರದಲ್ಲಿ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ 'ಯುವ ಸಂಭ್ರಮ'ದಲ್ಲಿ ಸಡಗರ, ಕುಣಿತ, ಶಿಳ್ಳೆ-ಚಪ್ಪಾಳೆಗಳ ಝೇಂಕಾರ ಹಚ್ಚ ಹರಿಸಿನ ನಡುವೆ ಆಗಸದೆತ್ತರಕ್ಕೆ ಚಿಮ್ಮಿತು. ಮೈಸೂರು ಸಂಸ್ಥಾನದ ಅರಸರ ಕೊಡುಗೆ, ಕನ್ನಡ ಸಾಹಿತ್ಯ ಕೊಡುಗೆ ನೀಡಿದ ಕುವೆಂಪು ಸೇರಿದಂತೆ ಇನ್ನಿತರ ಸಾಹಿತಿಗಳು, ಚಿತ್ರರಂಗದ ದಿಗ್ಗಜರುಗಳ ಸ್ಮರಣೆಯ ಜೊತೆಗೆ ಪುನೀತ್ ರಾಜ್‌ಕುಮಾರ್ ನೆನಪು ಎಲ್ಲರನ್ನು ಮಂತ್ರಮುಗ್ಧರನ್ನಾಗಿಸಿತು.

3ನೇ ದಿನದ 'ಸಂಭ್ರಮ'ದಲ್ಲಿ ಮೊದಲ ನೃತ್ಯ ಪ್ರದರ್ಶನ ನೀಡಿದ ಬಿಳಿಕೆರೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು ವಿವಿಧತೆಯಲ್ಲಿ ಏಕತೆ ಸಾರಿದರೆ, ಬನ್ನೂರಿನ ಬಾಲಕಿಯರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಯರು ಜಾನಪದ ನೃತ್ಯ ಪ್ರದರ್ಶನ ನೀಡಿದರು. ಜಯಲಕ್ಷ್ಮಿಪುರಂನ ವಿಶ್ವಕವಿ ಕುವೆಂಪು ಪ್ರಥಮ ದರ್ಜೆ ಕಾಲೇಜು ವಿದ್ಯಾರ್ಥಿಗಳು, ಜೀವ ಕನ್ನಡ, ಕಾವೇರಿ ನಮ್ಮವಳು, ನೆಲ-ಜಲ ಹಾಗೂ ಭಾಷೆ ಉಳಿಸುವುದು ನಮ್ಮೆಲ್ಲರ ಕರ್ತವ್ಯ ಎಂದರಲ್ಲದೆ ಖ್ಯಾತ ನಟ ಪುನೀತ್ ರಾಜ್‌ಕುಮಾರ್ ಅವರ ನೆನಪನ್ನು ಎಲ್ಲೆಡೆ ಪಸರಿಸಿದರು.

ಅದ್ಭೂತ ನೃತ್ಯಾಭಿನಯದ ಮೂಲಕ ರುದ್ರಕಾಳಿಯನ್ನೇ ಪ್ರತ್ಯಕ್ಷ ದರ್ಶನ ಮಾಡಿಸಿದ ಮದ್ದೂರಿನ ಭಾರತೀನಗರದ ಭಾರತಿ ಕಾಲೇಜು ಆಫ್ ಫಾರ್ಮಸಿ ವಿದ್ಯಾರ್ಥಿಗಳು, ಕಲಾಸಕ್ತರಿಗೆ ದೇವಿಯ ಅನುಗ್ರಹ ದಯಪಾಲಿಸಿದರು. ಸೋಮವಾರಪೇಟೆ ಬಿ.ಟಿ.ಚನ್ನಯ್ಯ ಗೌರಮ್ಮ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು 'ಶಿವ ತಾಂಡವ ನೃತ್ಯ'ದ ಮೂಲಕ ಪರಶಿವನ ಅವತಾರಗಳನ್ನು ಪ್ರಸ್ತುತಪಡಿಸಿದರು.

ಕೊಳ್ಳೇಗಾಲದ ಜೆಎಸ್‌ಎಸ್ ಬಾಲಕಿಯರ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿನಿಯರು ಅತ್ಯಾಕರ್ಷಕ ಹಾಡು-ನೃತ್ಯದ ಮೂಲಕ ಸ್ವಾತಂತ್ರ್ಯ ಅಮೃತಮಹೋತ್ಸವದ ಮಹತ್ವ ತಿಳಿಸಿಕೊಟ್ಟರೆ, ನಂದಿಪುರ ಶ್ರೀ ಸದಾಶಿವಸ್ವಾಮೀಜಿ ಸಂಯುಕ್ತಪದವಿ ಪೂರ್ವ ಕಾಲೇಜಿನ ವಿದ್ಯಾರ್ಥಿಗಳು ಪರಿಸರ ರಕ್ಷಣೆ ನಮ್ಮೆಲ್ಲರ ಹೊಣೆ. ಮನೆಗೊಂದು ಮರಬೆಳೆಸಿ ಎಂದು ಮನವಿ ಮಾಡಿದರು.

ನವಿಲುಗಳನ್ನು ಸಂರಕ್ಷಿಸಿ: ರಾಷ್ಟ್ರೀಯ ಪಕ್ಷಿ ನವಿಲುಗಳ ಸಂತತಿ ಕ್ಷೀಣಿಸುತ್ತಿದ್ದು, ಅವುಗಳ ಸಂರಕ್ಷಣೆ ಮಾಡುವಂತೆ ಮೈಸೂರಿನ ಮೇಟಗಳ್ಳಿಯ ರಂಗರಾವ್ ಸ್ಮಾರಕ ವಿಕಲಚೇತನ ಶಾಲೆಯ ಮಕ್ಕಳು ಮನಮೋಹಕ ನೃತ್ಯದ ಮೂಲಕ ಮನವಿ ಮಾಡಿದರಲ್ಲದೆ ನವಿಲುಗಳಂತೆ ಹೆಜ್ಜೆಹಾಕಿ ಎಲ್ಲರ ಮನಗೆದ್ದರು. ಟೆರೇಷಿಯನ್ ಪದವಿ ಪೂರ್ವ ಕಾಲೇಜು ವಿದ್ಯಾರ್ಥಿಗಳು ರಾಷ್ಟ್ರೀಯ ಭಾವೈಕ್ಯತೆಯ ನೃತ್ಯ ಪ್ರದರ್ಶನ ನೀಡಿದರೆ, ಹೆಲನ್ ಕೆಲ್ಲರ್ ಅಂಧ ಮಕ್ಕಳ ಶಿಕ್ಷಕರ ತರಬೇತಿ ಕೇಂದ್ರದ ತಂಡ ಮಹಿಳೆಯರಿಗೆ ಸಮಾಜದಲ್ಲಿ ಸಮಾನತೆ ನೀಡುವುದರ ಜೊತೆಗೆ ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯಗಳ ಬೆಳಕು ಚೆಲ್ಲಿಸಿದರು.

ಮಳವಳ್ಳಿಯ ಶಾಂತಿ ಕಲಾ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜಿನ ವಿದ್ಯಾರ್ಥಿಗಳು ಸೈನಿಕರ ಸಾಹಸ ಪ್ರದರ್ಶನ ನೀಡಿದರೆ, ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜು. ಮೈಸೂರಿನ ಜೆಎಸ್‌ಎಸ್ ಕಾನೂನು ಕಾಲೇಜು. ಗುಂಡ್ಲುಪೇಟೆ ಹಂಗಳದ ಸರ್ಕಾರಿ ಪದವಿಪೂರ್ವ ಕಾಲೇಜು. ದೊಡ್ಡಮಾರೇಗೌಡನಹಳ್ಳಿಯ ಜವಾಹರ್ ನವೋದಯ ವಿದ್ಯಾಲಯ. ಶಾರದಾ ವಿಲಾಸ ಮಹಾ ವಿದ್ಯಾಲಯ ಹಾಗೂ ಪೀಪಲ್ಸ್‌ಪಾರ್ಕ್ ಬಾಲಕಿಯರ ಪದವಿಪೂರ್ವ ಕಾಲೇಜು ವಿದ್ಯಾರ್ಥಿಗಳು ಸೈನಿಕರ ಸಾಹಸ, ಸ್ವಾತಂತ್ರ್ಯ ಚಳವಳಿ, ಹುಲಿ ಕುಣಿತದ ಮೂಲಕ ವೇದಿಕೆಯಲ್ಲಿ ಗರ್ಜಿಸಿ ಅಪಾರ ಜನಸ್ತೋಮದ ಮೆಚ್ಚುಗೆಗೆ ಪಾತ್ರರಾದರು.

ನಮ್ಮ ಭಾಷೆ ಸಂಸ್ಕೃತಿಯನ್ನು ಉಳಿಸುವ ನಿಟ್ಟಿನಲ್ಲಿ ಧ್ವನಿಯಾಗಬೇಕು ಎಂದು ಹೇಳಿದ ಚಲನಚಿತ್ರ ನಟ ರಿಷಬ್ ಶೆಟ್ಟಿ, ತಮ್ಮ ಮುಂದಿನ ಕಾಂತಾರ ಸಿನಿಮಾವನ್ನು ಡಾ.ಪುನೀತ್ ರಾಜ್‌ಕುಮಾರ್ ಅವರಿಗೆ ಅರ್ಪಣೆ ಮಾಡುವುದಾಗಿ ತಿಳಿಸಿದರು.



'ಯುವ ಸಂಭ್ರಮ'ಕ್ಕೆ ಭಾನುವಾರ ಆಗಮಿಸುವ ಮೂಲಕ ತಾರಾ ಮೆರುಗು ನೀಡಿದ ಅವರು, ಕಾಂತಾರ ಸಿನಿಮಾ ಕುರಿತು ಮಾತನಾಡಿದರಲ್ಲದೆ ಈ ಸಿನಿಮಾ ಕಥೆಯನ್ನು ಮೊದಲು ಹೇಳಿದ್ದು, ಅಪ್ಪು ಅವರಿಗೆ. ಅವರು ನೀಡಿದ ಪ್ರೋತ್ಸಾಹದಿಂದಲೇ ಈ ಸಿನಿಮಾ ಬಿಡುಗಡೆಯ ಹಂತಕ್ಕೆ ಬಂದಿದೆ. ಕಳೆದುಕೊಂಡಿರುವ ದೇವರನ್ನು ಅಭಿಮಾನಿಗಳ ರೂಪದಲ್ಲಿ ಕಾಣುತ್ತಿದ್ದೇವೆ ಎಂದರು. ಯಾವತ್ತೂ ನಾವು ನಮಗೆ ಮಿತಿ ನಿಗದಿಪಡಿಸಿಕೊಳ್ಳಬಾರದು. ಅಸಾಧ್ಯವಾದುದ್ದನ್ನು ಸಾಧಿಸುವತ್ತಾ ಯೋಚನೆ ಮಾಡಬೇಕು. ಅದೇ ರೀತಿಯಾಗಿ ಕನ್ನಡ ಚಿತ್ರರಂಗ ಸಾಗುತ್ತಿದ್ದು, ಕೆಜಿಎಫ್-2 ನಂತಹ ಸಿನಿಮಾ ಬರಲು ಸಾಧ್ಯವಾಯಿತು. ಕಾಂತಾರ ಪ್ರಪಂಚದಾದ್ಯಂತ ಕನ್ನಡದಲ್ಲೇ ಈ ಸಿನಿಮಾ ಬಿಡುಗಡೆಯಾಗಲಿದೆ ಎಂದರು. ಇದಕ್ಕೂ ಮುನ್ನ ಕಾಂತಾರ ಚಿತ್ರದ ಟ್ರೈಲರ್ ಪ್ರದರ್ಶನ ಮಾಡಲಾಯಿತು.

ಪಿಂಚಣಿಗೆ ಆಗ್ರಹಿಸಿ ಅನುದಾನಿತ ಶಾಲಾ-ಕಾಲೇಜು ನೌಕರರಿಂದ

ನಾಳೆ ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಉಪವಾಸ ಸತ್ಯಾಗ್ರಹ

ಮೈಸೂರು,ಸೆ.18(ಪಿಎಂ)- ರಾಜ್ಯ ಅನುದಾನಿತ ಶಾಲಾ-ಕಾಲೇಜುಗಳ ಪಿಂಚಣಿ ವಂಚಿತ ನೌಕರರ ಸಂಘದ ವತಿಯಿಂದ ಪಿಂಚಣಿ ಸೌಲಭ್ಯಕ್ಕೆ ಆಗ್ರಹಿಸಿ ಸೆ.20ರಂದು ಬೆಂಗಳೂರು ಫ್ರೀಡಂ ಪಾರ್ಕ್‌ನಲ್ಲಿ ಉಪವಾಸ ಸತ್ಯಾಗ್ರಹ ಹಮ್ಮಿಕೊಳ್ಳಲಾಗಿದೆ ಎಂದು ಸಂಘದ ಜಿಲ್ಲಾಧ್ಯಕ್ಷ ಶಿಂಡೇನಹಳ್ಳಿ ಡಾ.ಶರತ್‌ಕುಮಾರ್ ತಿಳಿಸಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯದಲ್ಲಿ ಶಿಕ್ಷರು ಸೇರಿದಂತೆ ಅನುದಾನಿತ ಶಾಲಾ-ಕಾಲೇಜುಗಳ ಪಿಂಚಣಿ ವಂಚಿತ ನೌಕರರು ಸುಮಾರು 60 ಸಾವಿರ ಇದ್ದೇವೆ. ಈ ಪೈಕಿ ಶಿಕ್ಷಕರ ಸಂಖ್ಯೆ ಬಹುಪಾಲು ಇದೆ. 2006ರ ಮಾ.31ರ ಹಿಂದೆ ರಾಜ್ಯ ಸರ್ಕಾರಿ ನೌಕರರು ಹಾಗೂ ಅನುದಾನಿತ ಶಾಲಾ-ಕಾಲೇಜು ನೌಕರರಿಗೆ ನಿವೃತ್ತಿ ನಂತರ ಹಳೇ ಪಿಂಚಣಿ ಯೋಜನೆಯಡಿ ಸೌಲಭ್ಯ ದೊರೆಯುತ್ತಿತ್ತು 2006ರ ಏ.1ರ ಬಳಿಕ ರಾಜ್ಯ ಸರ್ಕಾರಿ ನೌಕರರಿಗೆ ಮಾತ್ರ ರಾಷ್ಟ್ರೀಯ ಪಿಂಚಣಿ ಯೋಜನೆ (ಹೊಸ ಪಿಂಚಣಿ ಯೋಜನೆ) ಜಾರಿಗೊಳಿಸಿ, ಅನುದಾನಿತ ನೌಕರರನ್ನು ಪಿಂಚಣಿ ಸೌಲಭ್ಯದಿಂದ ಕೈಬಿಡಲಾಯಿತು ಎಂದು ಬೇಸರ ವ್ಯಕ್ತಪಡಿಸಿದರು.

ಪಿಂಚಣಿ ಸೌಲಭ್ಯಕ್ಕೆ ಆಗ್ರಹಿಸಿ ಹತ್ತಾರು ವರ್ಷಗಳಿಂದ ಹೋರಾಟ ಮಾಡುತ್ತಿದ್ದೇವೆ. ಈಗಾಗಲೇ ರಾಜ್ಯದಲ್ಲಿ ಸಾವಿರಾರು ಅನುದಾನಿತ ಶಾಲಾ-ಕಾಲೇಜು ನೌಕರರು ನಿವೃತ್ತಿಯಾಗಿ ಯಾವುದೇ ಸೌಲಭ್ಯ ದೊರೆಯದ ಹಿನ್ನೆಲೆಯಲ್ಲಿ ಸಂಕಷ್ಟಕ್ಕೆ ತುತ್ತಾಗಿದ್ದಾರೆ. ಅಲ್ಲದೆ, ಜೀವನ ನಿರ್ವಹಣೆಗಾಗಿ ಕೈಗಾರಿಕೆ, ಮಾಲ್, ಬ್ಯಾಂಕ್ ಮೊದಲಾದವುಗಳಲ್ಲಿ ಭದ್ರತಾ ಸಿಬ್ಬಂದಿಯಾಗಿ ಸಂಕಷ್ಟದ ಬದುಕು ನಡೆಸುವ ಪರಿಸ್ಥಿತಿಯಲ್ಲಿದ್ದಾರೆ ಎಂದರು.

ಈಗಾಗಲೇ ಪರಿಷತ್ತಿನ ಮಾಜಿ ಸಭಾಪತಿಗಳಾದ ಬಸವರಾಜ ಹೊರಟ್ಟಿ ಮತ್ತು ಅವರ ಸಮಿತಿ ಅನುದಾನಿತ ನೌಕರರ ಹಿತಕ್ಕೆ ಪೂರಕವಾಗಿ ಕಾಲ್ಪನಿಕ ವರದಿ ಸಲ್ಲಿಸಿದೆ. ಇದನ್ನು ಜಾರಿಗೊಳಿಸುವಲ್ಲಿ ಸರ್ಕಾರ ನಿರ್ಲಕ್ಷ್ಯ ಧೋರಣೆ ಅನುಸರಿಸುತ್ತಿದೆ. ಹಲವು ಬಾರಿ ಸುಪ್ರಿಂಕೋರ್ಟ್ ಮತ್ತು ರಾಜ್ಯ ಹೈಕೋರ್ಟ್ ಸಹ ಅನುದಾನಿತ ನೌಕರರಿಗೆ ಪಿಂಚಣಿ ಜಾರಿಗೊಳಿಸಲು ನಿರ್ದೇಶನ ನೀಡಿವೆ ಆದರೂ ಸರ್ಕಾರಗಳು ಇದನ್ನು ಗಂಭೀರವಾಗಿ ಪರಿಗಣಿಸಿಲ್ಲ. ಹೀಗಾಗಿ ಸೆ.20ರಂದು ಹೋರಾಟ ನಡೆಸುತ್ತಿದ್ದು, ವಿವಿಧ ಜಿಲ್ಲೆಗಳಿಂದ 30 ಸಾವಿರಕ್ಕೂ ಅಧಿಕ ನೌಕರರು ಪಾಲ್ಗೊಳ್ಳಲಿದ್ದಾರೆ. ಮೈಸೂರು ಜಿಲ್ಲೆಯಿಂದ 3 ಸಾವಿರಕ್ಕೂ ಅಧಿಕ ಮಂದಿ ಭಾಗವಹಿಸಲಿದ್ದೇವೆ ಎಂದು ವಿವರಿಸಿದರು. ಸಂಘದ ಜಿಲ್ಲಾ ಪದಾಧಿಕಾರಿಗಳಾದ ಬಿ.ಆರ್.ಶಿವಕುಮಾರ್, ಎಸ್.ಎಲ್.ಚಂದ್ರಶೇಖರ್, ಬಿ.ಸಿದ್ದರಾಜು ಗೋಷ್ಠಿಯಲ್ಲಿದ್ದರು.

ತಮಿಳು ಯುವ ನಟಿ ದೀಪಾ ಆತ್ಮಹತ್ಯೆ

ಚೆನ್ನೈ, ಸೆ.18- ತಮಿಳು ಚಿತ್ರರಂಗದ ಯುವ ನಟಿ ದೀಪಾ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಚಿತ್ರರಂಗದಲ್ಲಿ ಮತ್ತೊಂದು ದುರಂತ ನಡೆದಿದೆ. ಕಾಲಿವುಡ್ ಯುವ ನಟಿ ದೀಪಾ ಅಲಿಯಾಸ್ ಪಾಲಿನ್ ಆತ್ಮಹತ್ಯೆಗೆ ಶರಣಾಗಿದ್ದಾರೆ. ಚೆನ್ನೈನ ವಿರುಗಂಬಾಕ್ಕಂನಲ್ಲಿರುವ ಖಾಸಗಿ ಫ್ಲ್ಯಾಟ್‌ನಲ್ಲಿ ವಾಸಿಸುತ್ತಿದ್ದ ದೀಪಾ ಶನಿವಾರದಂದು ತಮ್ಮ ನಿವಾಸದಲ್ಲಿ ನೇಣಿಗೆ ಶರಣಾಗಿದ್ದಾರೆ.



ಕಳೆದ ಕೆಲ ವರ್ಷಗಳಿಂದ ಒಂಟಿಯಾಗಿ ಜೀವನ ನಡೆಸುತ್ತಿದ್ದ ದೀಪಾ ಮಾನಸಿಕ ಒತ್ತಡದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಸ್ನೇಹಿತರು ತಿಳಿಸಿದ್ದಾರೆ. ಶನಿವಾರ ನಟಿ ದೀಪಾ ಕುಟುಂಬಸ್ಥರ ಫೋನ್ ರಿಸೀವ್ ಮಾಡಿರಲಿಲ್ಲ. ಬಳಿಕ ಕುಟುಂಬಸ್ಥರು ದೀಪಾ ಅವರ ಸ್ನೇಹಿತ ಪ್ರಭಾಕರನ್ ಅವರಿಗೆ ಕರೆ ಮಾಡಿದ್ದಾರೆ. ಪ್ರಭಾಕರನ್ ದೀಪಾ ಅವರ ಮನೆಗೆ ಬಂದು ನೋಡಿದಾಗ ಫ್ಯಾನ್‌ಗೆ ನೇಣು ಬಿಗಿದುಕೊಂಡಿರುವ ವಿಚಾರ ಬೆಳಕಿಗೆ ಬಂದಿದೆ.

ಮಾಹಿತಿ ಪಡೆದ ಪೊಲೀಸರು ಸ್ಥಳಕ್ಕೆ ಧಾವಿಸಿ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಸ್ಥಳೀಯ ಸರ್ಕಾರಿ ಆಸ್ಪತ್ರೆಗೆ ರವಾನಿಸಿದ್ದಾರೆ. ದೀಪಾ ಆತ್ಮಹತ್ಯೆಗೆ ಪ್ರೇಮ ಪ್ರಕರಣವೇ ಕಾರಣ ಎಂದು ಪೊಲೀಸರು ಶಂಕಿಸಿದ್ದಾರೆ. ಆಕೆ ಆತ್ಮಹತ್ಯೆ ಮಾಡಿಕೊಂಡ ಸ್ಥಳದಲ್ಲಿ ಡೆತ್ ನೋಟ್ ಸಹ ಪತ್ತೆಯಾಗಿದೆ. ಅದರಲ್ಲಿ ತನ್ನ ಸಾವಿಗೆ ಯಾರೂ ಕಾರಣರಲ್ಲ, ಜೀವನ ಪರ್ಯಂತ ಅವರನ್ನು ಪ್ರೀತಿಸುತ್ತಲೇ ಇರುತ್ತೇನೆ ಎಂದು ಬರೆದಿದ್ದಾರೆ.

ಕಾರೇಕುರದಲ್ಲಿ ಜಿಲ್ಲಾಧಿಕಾರಿಗಳ ನಡೆ, ಹಳ್ಳಿ ಕಡೆ ಕಾರ್ಯಕ್ರಮ

● ಗ್ರಾಮಸ್ಥರಿಂದ ಅಹವಾಲು ಸಲ್ಲಿಕೆ ● ರಸ್ತೆ, ಚರಂಡಿ ಅಭಿವೃದ್ಧಿಗೆ ಒತ್ತಾಯ

ಶ್ರೀರಂಗಪಟ್ಟಣ, ಸೆ.18-ತಾಲೂಕಿನ ಬೆಳಗೊಳ ಹೊಬಳಿಯ ಕಾರೇಕುರ ಗ್ರಾಮದಲ್ಲಿ ನಡೆದ 'ಜಿಲ್ಲಾಧಿಕಾರಿಗಳ ನಡೆ, ಹಳ್ಳಿ ಕಡೆ' ಕಾರ್ಯಕ್ರಮದಲ್ಲಿ ಗ್ರಾಮದ ಅನೇಕ ಸಮಸ್ಯೆಗಳು ಅನಾವರಣಗೊಂಡವು.



ಗ್ರೇಡ್-2 ತಹಸೀಲ್ದಾರ್ ರೇಖಾ ಅವರ ಅಧ್ಯಕ್ಷತೆಯಲ್ಲಿ ನಡೆದ ಕಾರ್ಯಕ್ರಮವನ್ನು ಹೊಸಹಳ್ಳಿ ಗ್ರಾಪಂ ಅಧ್ಯಕ್ಷೆ ಜಯಶೀಲಾ ಉದ್ಘಾಟಿಸಿದರು. ಈ ವೇಳೆ ಗ್ರಾಮದ ಯಜಮಾನ ನಾಗಣ್ಣ ಮಾತನಾಡಿ, ಕಾರೇಕುರ ಗ್ರಾಮ ತುಂಬಾ ಸಣ್ಣ ಗ್ರಾಮವಾದರೂ ಕೂಡ ಅನೇಕ ಸಮಸ್ಯೆಗಳಿದ್ದು, ಗ್ರಾಮದಲ್ಲಿ ರಸ್ತೆ ಹಾಗೂ ಚರಂಡಿ ಸಮಸ್ಯೆಗಳಿವೆ. ಕೂಡಲೇ ರಸ್ತೆ ಹಾಗೂ ಚರಂಡಿ ನಿರ್ಮಾಣ ಕಾಮಗಾರಿ ಆರಂಭಿಸಬೇಕು. ಗ್ರಾಮದ ಸ್ಮಶಾಣ ಸಮಸ್ಯೆಗೆ ಅಧಿಕಾರಿಗಳು ಶಾಶ್ವತ ಪರಿಹಾರ ನೀಡಬೇಕು ಎಂದರು.

ನಂತರ ಮಾತನಾಡಿದ ಗ್ರಾಮದ ಸುರೇಶ್ ಕಾರೇಕುರ, ದೇಶಕ್ಕೆ ಸ್ವಾತಂತ್ರ್ಯ ಬಂದು ಇಷ್ಟು ವರ್ಷಗಳೇ ಕಳೆದರೂ, ಇನ್ನೂ ಸಾರಿಗೆ ವ್ಯವಸಾಯ ಕಲ್ಪಿಸದಿರುವುದು ಒಂದು ದುರಂತವೇಸರಿ. ಗ್ರಾಮದಿಂದ ನೂರಾರು ಮಕ್ಕಳು ಶಾಲೆ ಹಾಗೂ ಕಾಲೇಜಿಗೆ ತೆರಳುತ್ತಾರೆ. ಬಸ್ ವ್ಯವಸ್ಥೆ ಇಲ್ಲದೇ ಮಕ್ಕಳು ನಿತ್ಯ ಕಷ್ಟ ಪಡುತ್ತಿದ್ದಾರೆ. ಆದ್ದರಿಂದ ತಕ್ಷಣ ಗ್ರಾಮಕ್ಕೆ ಬಸ್ ಸೌಲಭ್ಯ ಕಲ್ಪಿಸಬೇಕು ಎಂದು ಆಗ್ರಹಿಸಿದರು.

ಇದೇ ವೇಳೆ ಕಾರೇಕುರ ಗ್ರಾಮದ ಪ್ರತಿಯೊಂದು ಬೀದಿಗಳಿಗೂ ಅಧಿಕಾರಿಗಳು ಭೇಟಿ ನೀಡಿ, ಸಾರ್ವಜನಿಕರ ಸಮಸ್ಯೆಗಳನ್ನು ಆಲಿಸಿದರು. ಈ ವೇಳೆ ಗ್ರಾಮಸ್ಥರು ತಮ್ಮ ಅಹವಾಲನ್ನು ಅಧಿಕಾರಿಗಳಿಗೆ ಸಲ್ಲಿಸಿದರು. ಇದೇ ವೇಳೆ ವಿವಿಧ ಇಲಾಖೆಯ ಅಧಿಕಾರಿಗಳು ತಮ್ಮ ಇಲಾಖೆಯಲ್ಲಿ ಸಾರ್ವಜನಿಕರು ಹಾಗೂ ರೈತರಿಗೆ ಸಿಗುವ ಸೌಲಭ್ಯಗಳ ಕುರಿತು ಮಾಹಿತಿ ನೀಡಿದರು. ಈ ವೇಳೆ ತಾಲೂಕು ವೈದ್ಯಾಧಿಕಾರಿ ಡಾ.ಎನ್.ಕೆ.ವೆಂಕಟೇಶ್, ಸಹಾಯಕ ಕೃಷಿ ನಿರ್ದೇಶಕ ನಿಶಾಂತ್ ಕೀಲಾರ, ಆರ್‌ಐ ಉಮೇಶ್, ಪಶುಸಂಗೋಪನೆ ಸಹಾಯಕ ನಿರ್ದೇಶಕ ಡಾ.ಶಿವಲಿಂಗಯ್ಯ, ಎಡಿಎಲ್‌ಆರ್.ಮೇಘನಾ, ಸಿಡಿಪಿಓ ಅಶೋಕ್, ಪಿಡಿಓ ಚೇಂದಿಲ್, ಉಪ ತಹಸೀಲ್ದಾರ್ ಸಾಕಮ್ಮ, ಗ್ರಾಮ ಸಹಾಯಕ ಮಹೇಂದ್ರ ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಇದ್ದರು.

ವಿಶ್ವಕರ್ಮರ ಕೊಡುಗೆ ಅವಿಸ್ಮರಣೀಯ

ಮಂಡ್ಯ, ಸೆ.18- ವಿಶ್ವಕರ್ಮ ಸಮುದಾಯದ ಕಾರ್ಯ, ಕುಶಲತೆ, ನೈಪುಣ್ಯತೆ ಹಾಗೂ ಕೌಶಲ್ಯದ ಚಾಣಕ್ಯತೆಗೆ ಮನ ಸೋಲದ ದೇವತೆಗಳಿಲ್ಲ. ಸಮುದಾಯ ಜಗತ್ತಿಗೆ ನೀಡಿರುವ ಕೊಡುಗೆ ಅವಿಸ್ಮರಣೀಯ ಎಂದು ಅಪರ ಜಿಲ್ಲಾಧಿಕಾರಿ ಡಾ. ಹೆಚ್.ಎಲ್.ನಾಗರಾಜು ತಿಳಿಸಿದರು.



ನಗರದ ನಾಲ್ವಡಿ ಕೃಷ್ಣರಾಜ ಒಡೆಯರ್ ಕಲಾಮಂದಿರದಲ್ಲಿ ನಡೆದ ವಿಶ್ವಕರ್ಮ ಜಯಂತಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ವಿಶ್ವಕರ್ಮದ ಕಸುಬನ್ನು ಮುಂದುವರೆಸಿರುವ ಕಮ್ಮಾರ, ಬಡಿಗ, ಪಂಚಕಾರ, ಶಿಲ್ಪಕಾರ ಮತ್ತು ಅಕ್ಕಸಾಲಿಗ ಜಗತ್ತಿಗೆ ಅವಿಸ್ಮರಣೀಯ ಕೊಡುಗೆ ನೀಡಿದ್ದಾರೆ. ಹಿಂದುಗಳ ಸಂಪ್ರದಾಯದ ಪ್ರಕಾರ ಕಲಿಯುಗ, ದ್ವಾಪರಯುಗ, ಶ್ವೇತಯುಗ, ಪ್ರೇತಯುಗ ಈ ನಾಲ್ಕು ಯುಗಗಳಲ್ಲಿ ವಿಶ್ವಕರ್ಮರು ಅನೇಕ ನಗರಗಳನ್ನು ಸ್ವರ್ಗ ಇಂದ್ರ ಪ್ರಸ್ಥ, ದ್ವಾರಕವನ್ನು ನಿರ್ಮಾಣ ಮಾಡಿದ್ದಾರೆ ಎಂದು ಹೇಳಿದರು.

ನಗರಸಭೆ ಅಧ್ಯಕ್ಷ ಹೆಚ್.ಎಸ್.ಮಂಜು ಮಾತನಾಡಿ, ಬ್ರಹ್ಮಾಂಡ ಶ್ರೇಷ್ಠ ಇಂಜಿನಿಯರ್ ಎಂದು ಜನರಾಧನೆಗೆ ಪಾತ್ರರಾದವರು ಭಗವಾನ್ ವಿಶ್ವಕರ್ಮರು. ಶಾಸ್ತ್ರ ಪುರಾಣಗಳಲ್ಲಿ ಅಗ್ರಣ್ಯ ಸ್ಥಾನವಿದೆ. ಶಾಸ್ತ್ರಗಳ ಪ್ರಕಾರ ಬ್ರಹ್ಮ ಸಂಪೂರ್ಣ ಸೃಷ್ಟಿಕರ್ತನಾದರೆ ಬ್ರಹ್ಮಾಂಡವನ್ನು ಅಲಂಕರಿಸಿದ ವಿಶ್ವಕರ್ಮ ಎನ್ನುತ್ತಾರೆ ಎಂದರು.

ಮಂಡ್ಯ ವಿಶ್ವ ವಿದ್ಯಾನಿಲಯದ ಸಮಾಜ ಶಾಸ್ತ್ರ ಸಹಾಯಕ ಪ್ರಾಧ್ಯಾಪಕ ಡಾ.ಕೆ.ಯೋಗಾನರಸಿಂಹಚಾರ್ ಮಾತನಾಡಿ, ವಿಶ್ವಕರ್ಮ ಸಮುದಾಯ ಕೌಶಲ್ಯಕ್ಕೆ ಒಂದು ವಿಶೇಷ ಕೊಡುಗೆಯನ್ನು ಕೊಟ್ಟಿರುವ ಸಮುದಾಯ. ಆಧುನಿಕ ಯುಗದಲ್ಲಿ ಯಂತ್ರಗಳ ಮೂಲಕ ಕೌಶಲ್ಯವನ್ನು ತರುತ್ತಿದ್ದೇವೆ ಎಂದರು.

ಮಾನವ ಸಮುದಾಯದ ಎಲ್ಲಾ ಅಗತ್ಯತೆಗಳಿಗೆ ಬೇಕಾದಂಥ ಭೌತಿಕ ರೂಪವನ್ನು ನಿರ್ಮಾಣ ಮಾಡಿಕೊಡುವಂಥ ದೇವರು ವಿಶ್ವಕರ್ಮ ಸಮುದಾಯ. ದ್ವಾರಕೆ, ನಳಂದ, ದೆಹಲಿಯ ಕುತುಬ್ ಮಿನಾರ್ ಕರ್ನಾಟಕದ ಐಹೊಳೆ ಹಂಪಿ ಬಾದಾಮಿ ಪಟ್ಟದಕಲ್ಲು ಇರುವ ಪ್ರವಾಸಿ ತಾಣಗಳಲ್ಲಿ ವಿಶ್ವಕರ್ಮದ ನೈಪುಣ್ಯತೆ ಅವಿಸ್ಮರಣೀಯ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಶಾಸಕ ಎಂ.ಶ್ರೀನಿವಾಸ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಎನ್.ಉದಯ್‌ಕುಮಾರ್, ವಿಶ್ವಕರ್ಮ ಸಮಾಜದ ಅಧ್ಯಕ್ಷ ತಿರುಮಲಾಚಾರ್, ನಗರಸಭೆ ಸದಸ್ಯರಾದ ಕುಮಾರ್, ಶ್ರೀನಿವಾಸ್, ಆನಂದ್, ಚಂದ್ರಕುಮಾರ್, ದೊರೆಸ್ವಾಮಿ, ಅರುಣ್‌ಕುಮಾರ್, ಮುಖಂಡರಾದ ದೇವರಾಜ್ ಆಚಾರ್ಯ, ಶಾಮಣ್ಣ ಚಾರ್ಯ, ಎಂ.ಎನ್.ಕುಮಾರಸ್ವಾಮಿ, ಶ್ರೀನಿವಾಸ್‌ಮೂರ್ತಿ, ದೇವರಾಜ್, ಸತೀಶ್, ಮಹೇಶ್ ಇದ್ದರು.

ಸೆ.21, ಬೃಹತ್ ಉದ್ಯೋಗ ಮೇಳ

ಮಂಡ್ಯ, ಸೆ.18- ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ, ಬೆಂಗಳೂರು ಸಮರ್ಥನಂ ಅಂಗವಿಕಲರ ಸಂಸ್ಥೆ ಮತ್ತು ಎಸ್.ಬಿ.ಎಜ್ಯುಕೇಷನ್ ಟ್ರಸ್ಟ್ ಮಂಡ್ಯ ತಾವರಗೆರೆ ಕೈಗಾರಿಕಾ ತರಬೇತಿ ಕೇಂದ್ರ, ಮದ್ದೂರು ಮಾಂಡವ್ಯ ಕೈಗಾರಿಕಾ ತರಬೇತಿ ಕೇಂದ್ರದ ಸಹಯೋಗದೊಂದಿಗೆ ಸೆ.21ರಂದು ಬೆಳಗ್ಗೆ 9 ಗಂಟೆಗೆ ಮಂಡ್ಯ ನೆಹರು ನಗರದ ಎಸ್.ಬಿ.ಸಮುದಾಯ ಭವನದಲ್ಲಿ ಬೃಹತ್ ಉದ್ಯೋಗ ಮೇಳವನ್ನು ಹಮ್ಮಿಕೊಳ್ಳಲಾಗಿದೆ.

ಬೃಹತ್ ಉದ್ಯೋಗ ಮೇಳದಲ್ಲಿ 30ಕ್ಕೂ ಹೆಚ್ಚು ಕಂಪನಿಗಳು ಭಾಗವಹಿಸಲಿದ್ದು, ಆಸಕ್ತಿಯುಳ್ಳ ಎಸ್‌ಎಸ್‌ಎಲ್‌ಸಿ, ಪಿಯುಸಿ, ಐಟಿಐ ಯಾವುದೇ ಪದವಿ, ಡಿಪ್ಲೋಮಾ ಬಿಇ, ವಿದ್ಯಾರ್ಹತೆ ಹೊಂದಿರುವ ಕನಿಷ್ಠ 18 ವರ್ಷಗಳಿಂದ 35 ವರ್ಷದ ಅಭ್ಯರ್ಥಿಗಳು ಸ್ವ-ವಿವರದೊಂದಿಗೆ ಹಾಗೂ ಎಲ್ಲಾ ಮೂಲ ದಾಖಲಾತಿ ಪ್ರತಿಗಳೊಂದಿಗೆ ಉದ್ಯೋಗ ಮೇಳದಲ್ಲಿ ಭಾಗವಹಿಸಬಹುದಾಗಿದೆ. ಮಾಹಿತಿಗಾಗಿ ಉದ್ಯೋಗಾಧಿಕಾರಿಗಳ ದೂ.08232-295124 ಅಥವಾ ಮೊ. 9480812121 ಸಂಪರ್ಕಿಸಬಹುದು ಎಂದು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿಯ ಉದ್ಯೋಗಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಾಣಿಜ್ಯ ಮಳಿಗೆ ನಿರ್ಮಾಣಕ್ಕೆ ಭೂಮಿಪೂಜೆ



ಪಾಂಡವಪುರ, ಸೆ.18- ಪಟ್ಟಣದ ಟಿಎಪಿಸಿಎಂಎಸ್ ಸಂಸ್ಥೆಯಿಂದ 55 ಲಕ್ಷ ರೂ. ವೆಚ್ಚದಡಿ ನಿರ್ಮಿಸುತ್ತಿರುವ ವಾಣಿಜ್ಯ ಮಳಿಗೆ ನಿರ್ಮಾಣ ಕಾಮಗಾರಿಗೆ ಶಾಸಕ ಸಿ.ಎಸ್.ಪುಟ್ಟರಾಜು ಭೂಮಿ ಪೂಜೆ ನೆರವೇರಿಸಿದರು. ಬಳಿಕ ಮಾತನಾಡಿದ ಅವರು, ಪಟ್ಟಣದ ಟಿಎಪಿಸಿಎಂಎಸ್ ಸಂಸ್ಥೆ ಆಡಳಿತ ಮಂಡಳಿಯೂ ಉತ್ತಮವಾಗಿ ಕಾರ್ಯ ನಿರ್ವಹಿಸುತ್ತಿದೆ. ಈಗಿನ ಅಧ್ಯಕ್ಷ ಡಿ.ಶ್ರೀನಿವಾಸ್ ಅವರು ಉತ್ತಮ ಆಡಳಿತದಿಂದಾಗಿ ಟಿಎಪಿಸಿಎಂಎಸ್ ಸಂಸ್ಥೆಯ ಕಲ್ಯಾಣ ಮಂಟಪ, ರೈಸ್‌ಮಿಲ್ ಆವರಣದಲ್ಲಿ ಇರುವ ಸಂಸ್ಥೆಯ ಖಾಲಿ ನಿವೇಶನದಲ್ಲಿ 55ಲಕ್ಷ ವೆಚ್ಚದಲ್ಲಿ 16 ವಾಣಿಜ್ಯ ಮಳಿಗೆಗಳನ್ನು ನಿರ್ಮಾಣ ಮಾಡಲಾಗುತ್ತಿದ್ದು, ಇದಕ್ಕೆ ಭೂಮಿ ಪೂಜೆ ಸಲ್ಲಿಸಲಾಗಿದೆ. ಇದೇ ರೀತಿ ಮುಂದಿನ ದಿನಗಳಲ್ಲಿ ಉತ್ತಮವಾಗಿ ಆಡಳಿತ ನಡೆಸಿ ಸಂಘ ಅಭಿವೃದ್ಧಿಪಡಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಅಧ್ಯಕ್ಷ ಡಿ.ಶ್ರೀನಿವಾಸ್, ಉಪಾಧ್ಯಕ್ಷೆ ತಿಬ್ಬಮ್ಮ, ನಿರ್ದೇಶಕರಾದ ಗುರುಸ್ವಾಮಿ, ರಾಮಕೃಷ್ಣೇಗೌಡ, ಕೆ.ಎಸ್.ದಯಾನಂದ್, ಕಣಿವೆ ಯೋಗೇಶ್, ಶ್ರೀಕಾಂತ್, ಬೆಟ್ಟಸ್ವಾಮೀಗೌಡ, ಮಧು, ಕಾರ್ಯದರ್ಶಿ ನವೀನ್‌ಕುಮಾರ್, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಶ್ಯಾದನಹಳ್ಳಿ ಚಲುವರಾಜು ಹಾಜರಿದ್ದರು.

ಸೆ.21ರಂದು ಸರ್ವಸದಸ್ಯರ ವಾರ್ಷಿಕ ಸಭೆ

ಮಂಡ್ಯ, ಸೆ.18- ಮದ್ದೂರು ತಾಲೂಕು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕ್ ವತಿಯಿಂದ 2021-2022ನೇ ಸಾಲಿನ ಸರ್ವಸದಸ್ಯರ ವಾರ್ಷಿಕ ಸಭೆಯನ್ನು ಸೆ.21ರಂದು ಬೆಳಗ್ಗೆ 11 ಗಂಟೆಗೆ ಮದ್ದೂರು ಟೌನ್ ಪ್ರೊ.ಎಂ.ಡಿ.ನಂಜುಂಡಸ್ವಾಮಿ ರೈತ ಕೇಂದ್ರದ ಹತ್ತಿರ ಟಿಎಪಿಸಿಎಂಎಸ್ ತೂಕದ ಮನೆ ಆವರಣದಲ್ಲಿ ಬ್ಯಾಂಕಿನ ಅಧ್ಯಕ್ಷ ಮುತ್ತುರಾಜು ಅಧ್ಯಕ್ಷತೆಯಲ್ಲಿ ನಡೆಯಲಿದೆ ಎಂದು ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ನಿಯಮಿತ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶದ ಕೀರ್ತಿ ಎತ್ತಿ ಹಿಡಿದ ಸರ್‌ಎಂವಿ

ಮಂಡ್ಯ, ಸೆ.18- ನಗರದ ಗಾಯಿತ್ರಿ ಸಮುದಾಯ ಭವನದಲ್ಲಿ ಜಿಲ್ಲಾ ಬ್ರಾಹ್ಮಣ ಸಭಾದಿಂದ ಪ್ರತಿಭಾ ಪುರಸ್ಕಾರ, ಡಾ.ಸರ್.ಎಂ.ವಿಶ್ವೇಶ್ವರಯ್ಯ ಅವರ ಜನ್ಮದಿನ ಆಚರಿಸಲಾಯಿತು.



ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ವಾಗ್ಮಿ ಹಿರೇಮಗಳೂರು ಕಣ್ಣನ್ ಮಾತನಾಡಿ, ವಿಶ್ವೇಶ್ವರಯ್ಯ ಅವರು ಒಮ್ಮೆ ವಿದೇಶ ಪ್ರವಾಸ ಕೈಗೊಂಡಿದ್ದ ಸಂದರ್ಭದಲ್ಲಿ ನ್ಯೂಜರ್ಸಿಯಲ್ಲಿ ಸ್ಥಾಪಿತವಾಗಿದ್ದ ವಿದ್ಯುತ್ ಉಪಕರಣಗಳ ಘಟಕದಲ್ಲಿನ ಪರಿಹಾರವಾಗದ ಸಮಸ್ಯೆಯನ್ನು ಪರಿಹರಿಸುವುದರೊಂದಿಗೆ ಅವರ ಕೀರ್ತಿ ಜಗತ್ತಿನಾದ್ಯಂತ ಬೆಳಗುವಂತೆ ಮಾಡಿದ್ದರು. ಅದರೊಂದಿಗೆ ಭಾರತದ ಕೀರ್ತಿಯನ್ನೂ ಎತ್ತಿ ಹಿಡಿದರು ಎಂದು ವಿವರಿಸಿದರು.

ಮೈಸೂರು ಅರಸ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರ್ ಆಡಳಿತಾವಧಿಯಲ್ಲಿ ದಿವಾನರಾಗಿದ್ದ ವಿಶ್ವೇಶ್ವರಯ್ಯ ಅವರು ಹತ್ತು ಹಲವು ನೀರಾವರಿ ಯೋಜನೆ ಸ್ಥಾಪಿಸಿ ರೈತಾಪಿ ವರ್ಗಕ್ಕೆ ನೆರವಾದರು. ಅದೇ ರೀತಿ ಕಾರ್ಖಾನೆಗಳನ್ನು ಸ್ಥಾಪಿಸುವ ಮೂಲಕ ರೈತ ಮಕ್ಕಳಿಗೆ ಉದ್ಯೋಗದಾತರಾದರು. ಮಹಾರಾಜರ ಆದೇಶಾನುಸಾರ ಶೈಕ್ಷಣಿಕ ಸಂಸ್ಥೆಗಳನ್ನೂ ಸ್ಥಾಪಿಸಿ ಶಿಕ್ಷಣಕ್ಕೂ ಒತ್ತು ನೀಡಿದರು ಎಂದು ಬಣ್ಣಿಸಿದರು.

ಇಂಥ ಮಹನೀಯರನ್ನು ಎಂದೆಂದಿಗೂ ಪ್ರಾತಃಸ್ಮರಣೀಯರು. ನಾಡು ಅವರನ್ನು ಸ್ಮರಿಸುವ ಕಾರ್ಯವನ್ನು ಮಾಡಬೇಕು. ಕೃಷಿ ಜಿಲ್ಲೆಯಾಗಿರುವ ಮಂಡ್ಯದಲ್ಲಿ ಅವರ ಹೆಸರು ಚಿರಸ್ಥಾಯಿಯಾಗಿ ಉಳಿದಿದೆ ಎಂದರು.

ಕಾರ್ಯಕ್ರಮದಲ್ಲಿ ಬ್ರಾಹ್ಮಣ ಸಭಾದ ಜಿಲ್ಲಾಧ್ಯಕ್ಷ ಸದಾಶಿವಭಟ್, ಉಪಾಧ್ಯಕ್ಷ ಗೋಪಾಲ್, ಕಾರ್ಯದರ್ಶಿ ಶಂಕರ ನಾರಾಯಣಶಾಸ್ತ್ರಿ, ಸಹ ಕಾರ್ಯದರ್ಶಿ ಬಿ.ಜಿ.ಉಮಾ, ವಿಜಯಲಕ್ಷ್ಮೀ, ಎಂ.ಆರ್.ಯೋಗಾನಂದ ಸೇರಿದಂತೆ ಮತ್ತಿತರರಿದ್ದರು.

ಕೆ.ಆರ್.ಪೇಟೆಯಲ್ಲಿ ಡಾ.ವಿಷ್ಣುವರ್ಧನ್ ಜನ್ಮ ದಿನಾಚರಣೆ

ಕೆ.ಆರ್.ಪೇಟೆ, ಸೆ.18- ತಾಲೂಕು ಸಾಹಸ ಸಿಂಹ ವಿಷ್ಣುವರ್ಧನ್ ಅಭಿಮಾನಿಗಳ ಸಂಘದ ವತಿಯಿಂದ ಕನ್ನಡ ಚಿತ್ರರಂಗದ ನಟ, ಡಾ. ವಿಷ್ಣುವರ್ಧನ್ ಅವರ 72ನೇ ವರ್ಷದ ಹುಟ್ಟುಹಬ್ಬವನ್ನು ಪಟ್ಟಣದ ಟಿ.ಬಿ.ವೃತ್ತದಲ್ಲಿ ಸರಳವಾಗಿ ಆಚರಿಸಲಾಯಿತು. ಪುರಸಭೆಯ ಮಾಜಿ ಸದಸ್ಯ ಕೆ.ಎನ್.ಕಿರಣ್ ಅವರು ವಿಷ್ಣುವರ್ಧನ್ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.



ತಾಲೂಕು ಕರವೇ ಅಧ್ಯಕ್ಷ ಡಿ.ಎಸ್.ವೇಣು ಮಾತನಾಡಿದರು. ತಾಲೂಕು ಕರ್ನಾಟಕ ರಕ್ಷಣಾ ವೇದಿಕೆ ಅಧ್ಯಕ್ಷ ಡಿ.ಎಸ್.ವೇಣು, ತಾಲೂಕು ವಿಷ್ಣುವರ್ಧನ್ ಅಭಿಮಾನಿಗಳ ಯುವ ಸೇನೆಯ ಸಂಚಾಲಕ ಚೇತನ್, ಲೋಕಿ, ವಿಜಯ್, ಸಚಿನ್, ಲೋಕೇಶ್, ಜಬೀಉಲ್ಲಾ, ಗಜ, ಕಿರಣ್, ಗಿರಿ, ತಾಲ್ಲೂಕು ವಿಷ್ಣು ಸೇನಾ ಸಮಿತಿ ಅಧ್ಯಕ್ಷ ರಾಜು, ಕೇಶವಮೂರ್ತಿ, ಶ್ರೀನಿಧಿ ಶ್ರೀನಿವಾಸ್, ಬಟ್ಟೆ ಅಂಗಡಿ ಮಂಜು, ಬೇಕರಿ ಮಾರುತಿ ಇತರರು ಇದ್ದರು.

ಜಮೀನಿಗೆ ಹೋದ ಮಹಿಳೆ ನಾಪತ್ತೆ

ಮಂಡ್ಯ, ಸೆ.18- ಮಾರಗೌಡನಹಳ್ಳಿಯ ಚೌಡಮ್ಮ (85) ಸೆ 5ರಂದು ಬೆಳಗ್ಗೆ 6 ಗಂಟೆ ಸಮಯದಲ್ಲಿ ಜಮೀನಿಗೆ ಹೋದವರು ಕಾಣೆಯಾಗಿದ್ದಾರೆ ಎಂದು ಹಲಗೂರು ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಕಾಣೆಯಾದ ಹೆಂಗಸು 5.5ಅಡಿ ಎತ್ತರ, ಕೋಲು ಮುಖ, ಎಣ್ಣೆಗೆಂಪು ಮೈ ಬಣ್ಣ, ಸಾಧಾರಣ ಶರೀರ, ಕಪ್ಪು ಬಿಳಿ ತಲೆ ಕೂದಲು, ಕೈಯಲ್ಲಿ ಹಿತ್ತಾಳೆ ಬಳೆಗಳು, ಕಿವಿಯಲ್ಲಿ ಬಿಳಿ ಕಲ್ಲು ವಾಲೆ ಹಾಕಿರುತ್ತಾರೆ. ಕಾಣೆಯಾದ ದಿನದಂದು ಹಳದಿ ಬಣ್ಣದ ಸೀರೆ, ಗಿಳಿ ಹಸಿರು ಬಣ್ಣದ ರವಿಕೆ ಧರಿಸಿರುತ್ತಾರೆ. ಸುಳಿವು ಸಿಕ್ಕಲ್ಲಿ ಹಲಗೂರು ಪೊಲೀಸ್ ಠಾಣೆಯ ದೂ.ಸಂ. 08231-295322 ಅಥವಾ 9480804866 ಸಂಪರ್ಕಿಸಬಹುದು ಎಂದು ಹಲಗೂರು ಪೊಲೀಸ್ ಠಾಣೆಯ ಸಬ್ ಇನ್‌ಸ್ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅರ್ಜಿ ಆಹ್ವಾನ

ಮಂಡ್ಯ, ಸೆ.18- ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಿಂದ 2022-23ನೇ ಸಾಲಿನಲ್ಲಿ ಶಿಷ್ಯವೇತನ ಪಡೆಯಲು ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಷಯಗಳಲ್ಲಿ ಕರ್ನಾಟಕದಲ್ಲಿರುವ ಮಾನ್ಯತೆ ಪಡೆದ ವಿಶ್ವವಿದ್ಯಾಲಯ/ ಸಂಸ್ಥೆ, ಕಾಲೇಜುಗಳಲ್ಲಿ ಈಗಾಗಲೇ ಪಿಹೆಚ್‌ಡಿ ಪದವಿಗೆ ನೋಂದಾಯಿತರಾಗಿರುವ ಅರ್ಹ ಸಂಶೋಧನಾ ವಿದ್ಯಾರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಅಭ್ಯರ್ಥಿಗಳು http://ksteps.karnataka.gov.in ವೆಬ್‌ಸೈಟ್ ಮೂಲಕ ಅ.12ರೊಳಗಾಗಿ ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ದೂ080-26711166 ಸಂಪರ್ಕಿಸಿ.

ಧರ್ಮ ಪಾಲನೆಯ ಕೊಡಗನ್ನು ಕಟ್ಟೋಣ

'ಕೊಡಗು ಬಚಾವೋ ವೇದಿಕೆ'ಯ ಜನಜಾಗೃತಿ ಸಮಾವೇಶದಲ್ಲಿ ಧರ್ಮಗುರುಗಳ ಕರೆ



ಮಡಿಕೇರಿ,ಸೆ.18– ಸಮಾಜದ ಸ್ವಾಸ್ಥ್ಯ ಕೆಡಿಸುವ ಮತಾಂಧ ಶಕ್ತಿಗಳನ್ನು ದೂರವಿರಿಸಿ, ಸೌಹಾರ್ದಯುತವಾಗಿ ಬಾಳುವ ಮಾನವ ಧರ್ಮ ಪಾಲನೆಯ ಶಾಂತಿಯುತವಾದ ಕೊಡಗನ್ನು ಕಟ್ಟಿ ಬೆಳೆಸೋಣ ಎಂದು ವಿವಿಧ ಧರ್ಮಗುರುಗಳು ಕರೆ ನೀಡಿದ್ದಾರೆ.

'ಕೊಡಗು ಬಚಾವೋ ವೇದಿಕೆ' ವತಿಯಿಂದ ನಗರದ ಕಾವೇರಿ ಹಾಲ್‌ನಲ್ಲಿ ಆಯೋಜಿತ 'ಜನಜಾಗೃತಿ ಸಮಾವೇಶ'ವನ್ನು ಗಿಡಕ್ಕೆ ನೀರೆರೆಯುವ ಮೂಲಕ ವಿವಿಧ ಧರ್ಮಗಳ ಪ್ರಮುಖರು ಮತ್ತು ಅತಿಥಿಗಳು ಉದ್ಘಾಟಿಸಿದರು.

ಬಳಿಕ ಮಾತನಾಡಿದ ಮಡಿಕೇರಿ ಶಾಂತಿ ಚರ್ಚ್‌ನ ಧರ್ಮಗುರು ಅಮೃತರಾಜ್, ನಮ್ಮ ಸುತ್ತ ಮುತ್ತಲಿನ ಸುಂದರ ಪರಿಸರ ಯಾವುದೇ ರಾಜಕೀಯ ಪಕ್ಷಗಳಿಗೆ ಸೀಮಿತವಲ್ಲ ಇದು ಎಲ್ಲರಿಗೂ ಸಂಬಂಧಿಸಿದ್ದಾಗಿದ್ದು, ಇದರ ಸಂರಕ್ಷಣೆಯಲ್ಲಿ ಪ್ರತಿಯೊಬ್ಬರ ಹೊಣೆಗಾರಿಕೆ ಇದೆ ಪ್ರಸ್ತುತ ನಾವು ಮಾನವ ಸೃಷ್ಟಿಯ ವಿವಿಧ ಧರ್ಮಗಳಿಗೆ ಸೀಮಿತವಾಗಿ ನಡೆದುಕೊಳ್ಳುತ್ತಿರುವುದು ಸಮಸ್ಯೆಗೆ ಮೂಲ ಕಾರಣವಾಗಿದೆ. ನಾವೆಲ್ಲರೂ ಪರಸ್ಪರರನ್ನು ಗೌರವಿಸುವ, ವಿಶ್ವಾಸದಿಂದ ಕಾಣುವ ಮಾನವ ಧರ್ಮವನ್ನು ರಕ್ಷಿಸುವ ಕೆಲಸ ಮಾಡಬೇಕಿದೆ ಎಂದು ಹೇಳಿದರು.

ಇದು ನಮ್ಮ ಜಿಲ್ಲೆ, ನನ್ನ ನಾಡು ಎನ್ನುವ ಭಾವನೆ ಪ್ರತಿಯೊಬ್ಬರಲ್ಲಿ ಮೂಡಬೇಕೆಂದು ಕರೆ ನೀಡಿದ ಅವರು, ಜೀವನದಿ ಕಾವೇರಿ ತಾನು ಹುಟ್ಟಿ ಸಮುದ್ರ ಸೇರುವ ಮಾರ್ಗದ ಉದ್ದಕ್ಕೂ ಇಕ್ಕೆಲಗಳನ್ನು ಸಮೃದ್ಧಗೊಳಿಸುತ್ತದೆ. ಅದೇ ರೀತಿ ನಮ್ಮ ಚಿಂತನೆಗಳ ಹಾದಿಯಲ್ಲಿ ಎದುರಾಗುವ ಎಲ್ಲವನ್ನೂ ಸಮೃದ್ಧಗೊಳಿಸಬೇಕು. ಸೌಹಾರ್ದಯುತ ಸಮಾಜವನ್ನು ಕಟ್ಟಿ ಬೆಳೆಸಲು ಪ್ರತಿಯೊಬ್ಬರು ಮುಂದಾಗಬೇಕೆಂದರು. ಪೊನ್ನಂಪೇಟೆ ಶ್ರೀ ರಾಮಕೃಷ್ಣ ಶಾರದಾಶ್ರಮದ ಸ್ವಾಮಿ ಧರ್ಮಾತನಂದ ಜೀ ಮಹಾರಾಜ್ ಮಾತನಾಡಿ, ಸ್ವಾಮಿ ವಿವೇಕಾನಂದರು 1893ರಲ್ಲಿ ಚಿಕಾಗೋದಲ್ಲಿ ನಡೆದ ಸರ್ವ ಧರ್ಮ ಸಮ್ಮೇಳನದಲ್ಲಿ ನನ್ನ ಧರ್ಮವೇ ಮೇಲು ಎನ್ನುವ ಚಿಂತನೆಯ ಮತಾಂಧತೆ ಕೊನೆಗೊಳ್ಳಬೇಕೆನ್ನುವ ಸಂದೇಶವನ್ನು ಸಾರಿದ್ದರು. ಆದರೆ ಇಂದಿಗೂ ಅದು ಬದಲಾಗದೆ, ನಾವು ಸಾಕಷ್ಟು ಹಿಂದುಳಿದಿದ್ದೇವೆ. ಸ್ವಾರ್ಥಪರ ಚಿಂತನೆಗಳಿಂದ, ನನ್ನ ಧರ್ಮವೇ ಸರಿ ಎನ್ನುವ ಮನೋಭಾವವೇ ಪ್ರಸ್ತುತ ಇಡೀ ಜಗತ್ತಿನಲ್ಲಿ ಕಂಡು ಬರುತ್ತಿರುವ ಕಲಹ ಮತ್ತು ಅಶಾಂತಿಗೆ ಮೂಲ ಕಾರಣವಾಗಿದೆ. ನಮ್ಮ ಧರ್ಮವನ್ನು ಅರಿತು ತಾರ್ಕಿಕ ಚಿಂತನೆಯ ಮೂಲಕ ಮುನ್ನಡೆಯುವ ಅಗತ್ಯತೆ ಇದೆ ಎಂದು ಕಿವಿ ಮಾತು ಹೇಳಿದರು.

ಎಂದಿಗೂ ರಾಜಕೀಯದೊಂದಿಗೆ ಧರ್ಮವನ್ನು ಸೇರಿಸಬಾರದು. ಆದರೆ ರಾಜಕಾರಣಿಗಳು ತಮ್ಮ ಸ್ವಾರ್ಥ ಸಾಧನೆಗಾಗಿ ಧರ್ಮವನ್ನು ಮುನ್ನೆಲೆಗೆ ತಂದು ಅಶಾಂತಿಯನ್ನು ಹುಟ್ಟು ಹಾಕುತ್ತಿದ್ದಾರೆಂದು ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು. ಧರ್ಮದ ತಳಹದಿಯಲ್ಲಷ್ಟೆ ಸಂಸ್ಕೃತಿ ಉಳಿಯಲು ಸಾಧ್ಯವೆಂದು ಸ್ವಾಮಿ ಧರ್ಮಾತನಂದ ಜೀ ಮಹಾರಾಜ್ ಪ್ರತಿಪಾದಿಸಿದರು. ಜಿಲ್ಲಾ ಎಸ್‌ಎಸ್‌ಎಫ್ ಅಧ್ಯಕ್ಷ ಸಾಫಿ ಸಹೀದ್ ಮಾತನಾಡಿ, ಭಾರತ ಜಾತ್ಯತೀತವಾಗಿ ಬೆಳೆಯುತ್ತಿರುವ ದೇಶವಾಗಿದೆ. ಧರ್ಮ, ಜಾತಿ, ಭಾಷೆ, ಪಂಕ್ತಿ, ಪಂತಗಳ ಹೆಸರಿನಲ್ಲಿ ಸಂವಿಧಾನದ ಆಶಯವಾಗಿರುವ ಜಾತ್ಯತೀತತೆ ಹಾಳಾಗಬಾರದು. ಈ ದೇಶವನ್ನು 26 ವಿದೇಶಿ ಶಕ್ತಿಗಳು ಆಳ್ವಿಕೆ ಮಾಡಿದ್ದರೂ ಕೂಡ ಭಾರತದ ಜಾತ್ಯತೀತತೆಯನ್ನು ಅವರಿಂದ ಮುಟ್ಟಲು ಸಾಧ್ಯವಾಗಿಲ್ಲ. ಹೀಗಾಗಿ ಭಾರತ ಇಂದಿಗೂ ಅಮರವಾಗಿದೆ. ಯಾವುದೇ ಕಾರಣಕ್ಕೂ ರಾಜಕೀಯದಲ್ಲಿ ಧರ್ಮವನ್ನು ಬೆರೆಸದೆ ಅಭಿವೃದ್ಧಿಗಾಗಿ ರಾಜಕೀಯ ಮಾಡುವಂತೆ ವಿವಿಧ ರಾಜಕೀಯ ಪಕ್ಷಗಳಲ್ಲಿ ಮನವಿ ಮಾಡಿದರು. ವೇದಿಕೆಯಲ್ಲಿ ನಗರದ ಸಂತ ಮೈಕೆಲರ ಚರ್ಚ್‌ನ ಧರ್ಮಗುರು ಫಾ. ಜಾರ್ಜ್ ದೀಪಕ್, ಕೊಡ್ಲಿಪೇಟೆಯ ಎಸ್‌ಕೆಎಸ್‌ಎಸ್‌ಎಫ್‌ನ ಕ್ಯಾಂಪಸ್ ವಿಂಗ್ ಅಧ್ಯಕ್ಷ ಇಬ್ರಾಹಿಂ ಬಾತಿಷಾ ಶಂಸಿ, ನಿವೃತ್ತ ಪ್ರಾಂಶುಪಾಲ ಡಾ.ಜೆ. ಸೋಮಣ್ಣ, ಎಫ್‌ಎಂಕೆಎಂಸಿ ಕಾಲೇಜಿನ ಹಿಂದಿ ವಿಭಾಗದ ಪ್ರಮುಖರಾದ ಪ್ರೊ. ಶ್ರೀಧರ ಹೆಗ್ಗಡೆ, ಪತ್ರಕರ್ತ ರಮೇಶ್ ಕುಟ್ಟಪ್ಪ ಹಾಜರಿದ್ದರು.

ಸಂಕಷ್ಟದಲ್ಲಿರುವವರ ಕಣ್ಣೀರು ಒರೆಸದ ಜನಪ್ರತಿನಿಧಿಗಳು: ಸಂಕೇತ್ ಪೂವಯ್ಯ

ಕೊಡಗು ಬಚಾವೋ ವೇದಿಕೆಯ ಅಧ್ಯಕ್ಷ ಮೇರಿಯಂಡ ಸಂಕೇತ್ ಪೂವಯ್ಯ ಮಾತನಾಡಿ, ಕಳೆದ ಕೆಲ ವರ್ಷಗಳಿಂದ ಎಲ್ಲಾ ರಾಜಕೀಯ ಪಕ್ಷಗಳು ಜನರ ಭಾವನೆಗಳನ್ನು ಕೆರಳಿಸಿ, ಜಾತಿ ಧರ್ಮಗಳಲ್ಲಿ ಕಂದಕ ಸೃಷ್ಟಿಸಿ ಮತಬೇಟೆಯ ತಮ್ಮ ಕಾರ್ಯ ಸಾಧನೆ ಮಾಡುತ್ತಿದ್ದಾರೆ. ರಾಜಕೀಯ ಪಕ್ಷಗಳು ಮತ್ತು ಜನಪ್ರತಿನಿಧಿಗಳು ಸ್ಥಳೀಯ ಜನರ ಸಂಕಷ್ಟದ ಕಣ್ಣೀರನ್ನು ಒರೆಸುವ ಪ್ರಯತ್ನ ನಡೆಸಿಲ್ಲ. ಇದರಿಂದ ಒಟ್ಟು ಆಡಳಿತ ವ್ಯವಸ್ಥೆಯ ಬಗ್ಗೆ ಜನರು ಭ್ರಮನಿರಸನಗೊಂಡಿದ್ದಾರೆ ಎಂದು ಹೇಳಿದರು.

ಸ್ಥಳೀಯ ಕಾಫಿ ಬೆಳೆಗಾರರ ಸಮಸ್ಯೆ, ಕೃಷಿಕರ ಸಂಕಷ್ಟವನ್ನು ಕೇಂದ್ರ ರಾಜ್ಯಕ್ಕೆ ಸಮರ್ಥವಾಗಿ ಮುಟ್ಟಿಸುವ ಕಾರ್ಯವೂ ನಡೆದಿಲ್ಲವೆಂದು ಬೇಸರ ವ್ಯಕ್ತಪಡಿಸಿದ ಸಂಕೇತ್ ಪೂವಯ್ಯ, ಕೊಡಗು ಕೇವಲ ಎರಡು ವಿಧಾನ ಸಭಾ ಕ್ಷೇತ್ರಗಳನ್ನು ಹೊಂದಿದ್ದು, ಇದು ಯಾವುದೇ ಸರ್ಕಾರ ರಚಿಸುವುದಕ್ಕೂ, ಬೀಳಿಸುವುದಕ್ಕೂ ಕಾರಣವಾಗುವುದಿಲ್ಲ. ಈ ಕಾರಣದಿಂದಲೇ ಕೊಡಗನ್ನು ಸಂಪೂರ್ಣ ಕಡೆಗಣಿಸಲಾಗಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಸ್ಥಳೀಯವಾಗಿ ಹತ್ತಾರು ಸಮಸ್ಯೆಗಳು ಇರುವ ಹಂತದಲ್ಲಿ ಯಾರಿಗೂ ಬೇಡವಾದ 'ಮೊಟ್ಟೆಯ' ವಿಚಾರ ಸದನದಲ್ಲಿ ಚರ್ಚಿತವಾಗುತ್ತಿದೆ ಎಂದು ವಿಷಾದಿಸಿದ ಸಂಕೇತ್ ಪೂವಯ್ಯ, ಕೊಡಗನ್ನು ಸೌಹಾರ್ದಯುತವಾಗಿ ಕಟ್ಟುವುದು ನಮ್ಮ ಕೈಯಲ್ಲಿದೆ. ಸಮಾಜ ಘಾತುಕ ಶಕ್ತಿಗಳನ್ನು ನಾವು ಹೊರಗಿಡುವ ಅನಿವಾರ್ಯವಿದೆ ಎಂದು ಹೇಳಿದರು.

ಸಿದ್ದಾಪುರದಲ್ಲಿ ಅದ್ಧೂರಿ ಗೌರಿ-ಗಣೇಶ ವಿಸರ್ಜನೋತ್ಸವ




ಸಿದ್ದಾಪುರ, ಸೆ.18–ಶ್ರೀರಾಮ ಮಂದಿರದಲ್ಲಿ ಪ್ರತಿಷ್ಠಾಪಿಸಲಾಗಿದ್ದ ಶ್ರೀ ಗೌರಿ-ಗಣೇಶ ವಿಸರ್ಜನೋತ್ಸವ ಸಿದ್ದಾಪುರದಲ್ಲಿ ಅದ್ಧೂರಿಯಾಗಿ ನಡೆಯಿತು. 84ನೇ ಗೌರಿ-ಗಣೇಶ ವಿಸರ್ಜನೋತ್ಸವದ ಅಂಗವಾಗಿ ಅಲಂಕೃತ ಬೆಳ್ಳಿ ರಥದಲ್ಲಿ ಶ್ರದ್ಧಾ ಭಕ್ತಿಯಿಂದ ಗೌರಿ-ಗಣೇಶ ಮೂರ್ತಿಗಳನ್ನು ಕುಳ್ಳಿರಿಸಿ ದಕ್ಷಿಣ ಕನ್ನಡ ಜಿಲ್ಲೆಯ ಗೊಂಬೆ ಕುಣಿತ, ಕೀಲು ಕುದುರೆ ಸೇರಿದಂತೆ ವಾದ್ಯ ಮೇಳಗಳೊಂದಿಗೆ ಪ್ರಮುಖ ಬೀದಿಗಳಲ್ಲಿ ಮೆರವಣಿಗೆಯಲ್ಲಿ ಸಾಗಿ ಕಾವೇರಿ ಹೊಳೆಯಲ್ಲಿ ವಿಸರ್ಜನೆ ಮಾಡಲಾಯಿತು. ಜಿಲ್ಲೆಯ ನಾನಾ ಭಾಗಗಳಿಂದ ಆಗಮಿಸಿ ಮೆರವಣಿಗೆ ಉದ್ದಕ್ಕೂ ಭಕ್ತರು ಕುಣಿದು ಕುಪ್ಪಳಿಸಿ ಸಂಭ್ರಮಿಸಿದರು.

ವಿಸರ್ಜನೋತ್ಸವ ಕಾರ್ಯಕ್ರಮದಲ್ಲಿ ಎಲ್ಲ ಬಾಂಧವರು ಭಾಗವಹಿಸುವ ಮೂಲಕ ಸೌಹಾರ್ದತೆಯೊಂದಿಗೆ ಅನ್ನಸಂತರ್ಪಣೆ ಕಾರ್ಯ ಹಮ್ಮಿಕೊಳ್ಳಲಾಗಿತ್ತು.

ಸಾಲ ಕಟ್ಟಲಾಗದೆ ರೈತ ನೇಣಿಗೆ ಶರಣು

ವಿರಾಜಪೇಟೆ, ಸೆ.18– ಸಾಲದ ಹಣ ಕಟ್ಟಲಾಗದೆ ರೈತನೊಬ್ಬ ನೇಣು ಬಿಗಿದುಕೊಂಡು ಆತ್ಮಹತ್ಯೆಗೆ ಶರಣಾಗಿರುವ ಘಟನೆ ತಾಲೂಕಿನ ಮಗ್ಗುಲ ಗ್ರಾಮದಲ್ಲಿ ಭಾನುವಾರ ಬೆಳಗ್ಗೆ ಸಂಭವಿಸಿದೆ.



ಗ್ರಾಮದ ನಿವಾಸಿ ಕುಪ್ಪಚ್ಚೀರ ಎ. ಭೀಮಯ್ಯ (51) ಎಂಬವರೇ ಆತ್ಮಹತ್ಯೆ ಮಾಡಿಕೊಂಡವರಾಗಿದ್ದಾರೆ. ಭೀಮಯ್ಯ ಅವರು ಮಗ್ಗುಲ ಗ್ರಾಮದ ಸ್ವ ಸಹಾಯ ಸಂಘದಿಂದ 75,000 ರೂ.ಗಳನ್ನು ಸಾಲ ಪಡೆದಿದ್ದು, ಸಾಲದ ಹಣವನ್ನು ಕಳೆದ ವಾರವೇ ಕಟ್ಟಬೇಕಿತ್ತು. ಆದರೆ ಸಾಲದ ಹಣ ಕಟ್ಟಲು ಸಾಧ್ಯವಾಗದಿದ್ದರಿಂದ ಮನನೊಂದು ಚಾಮುಂಡಿ ಬಾಣೆಯ ಹತ್ತಿರವಿರುವ ಅತ್ತಿ ಮರಕ್ಕೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಠಾಣಾಧಿಕಾರಿ ಶ್ರೀಧರ್ ತಿಳಿಸಿದ್ದಾರೆ.

ಈ ಸಂಬಂಧ ಅವರ ಪತ್ನಿ ಬಿ. ಕವಿತಾ ಅವರ ದೂರಿನ ಮೇರೆಗೆ ವಿರಾಜಪೇಟೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುತ್ತಿದ್ದಾರೆ.

ವಿರಾಜಪೇಟೆಯಲ್ಲಿ ವೈಭವದಿಂದ ಓಣಂ ಆಚರಣೆ

ಕೇರಳ ಸಮಾಜದ ಸಮುದಾಯ ಭವನಕ್ಕೆ ಮುಂದಿನ ದಿನಗಳಲ್ಲಿ ಅನುದಾನ: ಶಾಸಕ ಕೆ.ಜಿ.ಬೋಪಯ್ಯ



ವಿರಾಜಪೇಟೆ, ಸೆ.18–ವೈಭವದ ಮೆರವಣಿಗೆ, ಹೂವಿನ ರಂಗೋಲಿ ಛದ್ಮವೇಷ ತೊಟ್ಟ ಮಕ್ಕಳು, ಸಾಂಪ್ರದಾಯಿಕ ಉಡುಗೆ ತೊಟ್ಟ ಅದ್ಧೂರಿಯಾಗಿ ಓಣಂ ಹಬ್ಬವನ್ನು ಆಚರಿಸಿದರು.

ನಂತರ ನಡೆದ ಸಭಾಕಾರ್ಯಕ್ರಮದಲ್ಲಿ ಮಾತನಾಡಿದ ವಿರಾಜಪೇಟೆ ಶಾಸಕ ಕೆ.ಜಿ. ಬೋಪಯ್ಯ ಶಿಕ್ಷಣದಿಂದ ಕುಟುಂಬ ಸಮಾಜ ಮತ್ತು ದೇಶ ಅಭಿವೃದ್ಧಿ ಹೊಂದಲು ಸಾಧ್ಯ. ಸಮಾಜದ ಬಾಂದವರು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಂಡು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡುವ ಮೂಲಕ ಮುಖ್ಯವಾಹಿನಿಗೆ ಬರುವಂತಾಗಬೇಕು ಎಂದು ಕರೆ ನೀಡಿದರು. ನಗರದ ಮೀನುಪೇಟೆಯಲ್ಲಿರುವ ಶ್ರೀ ಮುತ್ತಪ್ಪನ್ ಓಣಂ ಆಚರಣಾ ಸಮಿತಿ ವತಿಯಿಂದ ದೇವಾಲಯದ ಸಭಾಂಗಣದಲ್ಲಿ ನಡೆದ 14ನೇ ವರ್ಷದ ಓಣಂ ಆಚರಣೆಯ ವೇದಿಕೆ ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿ ಮಾತನಾಡಿದರು.

ಮಲಿಯಾಳಿ ಬಾಂಧವರು ಒಗ್ಗಟ್ಟಿನಿಂದ ಕೇರಳ ಮಾದರಿಯಲ್ಲಿಯೇ ಕಳೆದ 14 ವರ್ಷಗಳಿಂದ ಓಣಂ ಹಬ್ಬವನ್ನು ವಿಜೃಂಭಣೆಯಿಂದ ಆಚರಿಸುವ ಮೂಲಕ ಜನಾಂಗದವರಿಗೆ ಸಹಕಾರ ನೀಡುತ್ತಿರುವುದು ಶ್ಲಾಘನಿಯ. ಜನಾಂಗದ ಕಾರ್ಯಕ್ರಮಗಳಿಗೆ ಸಮುದಾಯ ಭವನ ಕಟ್ಟಡಕ್ಕೆ ಸಮಿತಿಯಿಂದ ಅನುದಾನ ಕೋರಿದ್ದೀರಿ. ಮುಂದಿನ ದಿನದಲ್ಲಿ ಅನುದಾನ ನೀಡುವುದಾಗಿ ಭರವಸೆ ನೀಡಿದರು.

ಅತಿಥಿಯಾಗಿ ಭಾಗವಹಿಸಿದ್ದ ವಿಧಾನಪರಿಷತ್ ಸದಸ್ಯ ಸುಜಾ ಕುಶಾಲಪ್ಪ ಅವರು ಸಭೆಯನ್ನುದ್ದೇಶಿಸಿ ಮಾತನಾಡಿ, ಪ್ರತಿಯೊಬ್ಬರಿಗೂ ತಮ್ಮದೆ ಆದ ಆಚಾರ-ವಿಚಾರ ಸಂಸ್ಕೃತಿಗಳಿದ್ದು, ಮಲಿಯಾಳಿ ಭಾಷೆಯ ಬಾಂಧವರು ಕಳೆದ ಅನೇಕ ವರ್ಷಗಳಿಂದ ಸಂಘಟನೆ ಮೂಲಕ ಕಡು ಬಡ ಕುಟುಂಬಗಳಿಗೆ ಸಹಾಯಧನ ನೀಡುತ್ತಿರುವುದು ಉತ್ತಮ ಕಾರ್ಯ. ಓಣಂ ಸಮಿತಿಯಿಂದ ಸ್ಪರ್ಧಾ ಕಾರ್ಯಕ್ರಮ ಆಯೋಜಿಸುವ ಮೂಲಕ ಎಲ್ಲರಿಗೂ ಪ್ರೋತ್ಸಾಹ ನೀಡಲಾಗುತ್ತಿದೆ. ಸಮಾಜದ ಬಾಂಧವರು ಸರ್ಕಾರದ ಸೌಲಭ್ಯಗಳನ್ನು ಪಡೆದುಕೊಳ್ಳಲು ಮುಂದೆ ಬರಬೇಕು ಎಂದರು.

ಓಣಂ ಆಚರಣಾ ಸಮಿತಿ ಅಧ್ಯಕ್ಷ ಟಿ.ಕೆ. ಪದ್ಮನಾಭ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿ, ಓಣಂ ಆಚರಣೆಯನ್ನು ಹಿಂದೆ ಇ.ಸಿ. ಜೀವನ್ ಇದ್ದ ಸಂದರ್ಭ ಪ್ರಾರಂಭಿಸಿದ್ದೇವು. ಆದರೆ ಪ್ರಕೃತಿ ವಿಕೋಪ ನಂತರ ಕೊರೊನಾ ಕಾರಣದಿಂದ ಮೂರು ವರ್ಷ ಓಣಂ ಆಚರಣೆ ಸಾಧ್ಯವಾಗಲಿಲ್ಲ. ಆದರೂ ಬಡ ಕುಟುಂಬದವರಿಗೆ ಸಹಾಯಧನ ನೀಡಿರುವುದಾಗಿ ತಿಳಿಸಿದರು.

ವೇದಿಕೆಯಲ್ಲಿ ಉಪಸ್ಥಿತರಿದ್ದ ಪುರಸಭೆ ಸದಸ್ಯ ಸಿ.ಕೆ.ಪೃಥ್ವಿನಾಥ್ ಹಾಗೂ ಜೆಡಿಎಸ್‌ನ ತಾಲೂಕು ಅಧ್ಯಕ್ಷ ಪಿ.ಎ. ಮಂಜುನಾಥ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಚೈತನ್ಯ ಮಠಪುರ ಶ್ರೀ ಮುತ್ತಪ್ಪ ದೇವಸ್ಥಾನ ಅಧ್ಯಕ್ಷ ಟಿ.ಕೆ. ರಾಜನ್, ಲತಾ ಜೀವನ್, ಹಿರಿಯರಾದ ಕೆ.ಆರ್.ವಾಸು, ಮಹಾಬಲಿಯ ವೇಷದಾರಿ ಕೆ.ಆರ್.ಬಾಬು ಉಪಸ್ಥಿತರಿದ್ದರು. ಕಾರ್ಯದರ್ಶಿ ಸಿ.ಆರ್.ಬಾಬು ವಾರ್ಷಿಕ ವರದಿ ಮಂಡಿಸಿದರೆ. ಎಂ.ಎಂ. ಶಶಿಧರನ್ ಸ್ವಾಗತಿಸಿ ವಂದಿಸಿದರು

ಇದಕ್ಕೂ ಮೊದಲು ಬೆಳಗ್ಗೆ 9 ಗಂಟೆಗೆ ಹೂವಿನ ರಂಗೋಲಿ (ಪೊಕಳಂ) ಸ್ಪರ್ಧೆ ನಡೆಯಿತು. ದೇವಾಲಯದ ಕಲಾ ಮಂಟಪದಿಂದ ವಾದ್ಯಮೇಳದೊಂದಿಗೆ ಮಹಾಬಲಿಯ (ಮಾವೇಲಿ) ಮೆರವಣಿಗೆ ಹೊರಟು ನಗರದ ಖಾಸಗಿ ಬಸ್ ನಿಲ್ದಾಣದ, ಗೋಣಿಕೊಪ್ಪ ರಸ್ತೆ ಮೂಲಕ ದೊಡ್ಡಟ್ಟಿ ಚೌಕಿ, ಗಡಿಯಾರ ಕಂಬದ ಮಾರ್ಗವಾಗಿ ಮುಖ್ಯ ಬೀದಿಯಲ್ಲಿ ಸಾಗಿತು, ಮಕ್ಕಳು ಛದ್ಮವೇಷ ಧರಿಸಿದ್ದು, ಪುರುಷರು ಬಿಳಿ ಪಂಚೆ ಹಾಗೂ ಮಹಿಳೆಯರು ಸೆಟ್ಟು ಸ್ಯಾರಿಯನ್ನುಟ್ಟು ಮೆರವಣಿಗೆಯಲ್ಲಿ ಭಾಗವಹಿಸಿದ್ದರು. ದೇವಸ್ಥಾನದಲ್ಲಿ ಸಾರ್ವಜನಿಕರಿಗೆ ಓಣಂ ಸದ್ಯ ಏರ್ಪಡಿಸಲಾಗಿತ್ತು.

ನಿಟ್ರೆ ಶ್ರೀ ಪಾರ್ವತಾಂಬ ಅದ್ಧೂರಿ ಜಾತ್ರೆಗೆ ಸಕಲ ಸಿದ್ಧತೆ

ಬೇಗೂರು, ಸೆ.18–ಗುಂಡ್ಲುಪೇಟೆ ತಾಲೂಕಿನ ನಿಟ್ರೆ ಗ್ರಾಮದಲ್ಲಿ ಶ್ರೀ ಪಾರ್ವತಾಂಬ ಜಾತ್ರಾ ಮಹೋತ್ಸವ ಸೆ.20 ಮತ್ತು ಸೆ.21ರಂದು ವಿಜೃಂಭಣೆಯಿಂದ ನಡೆಯಲಿದ್ದು, ಬಹುತೇಕ ಸಿದ್ಧತೆ ಪೂರ್ಣಗೊಂಡಿದ್ದು, ಗ್ರಾಮದೆಲ್ಲೆಡೆ ಹಬ್ಬದ ವಾತಾವರಣ ನಿರ್ಮಾಣವಾಗಿದೆ.



ಕೊರೊನಾ ಹಿನ್ನೆಲೆ ಕಳೆದ 2 ವರ್ಷಗಳಿಂದ ನಿಟ್ರೆ ಗ್ರಾಮದಲ್ಲಿ ಪಾರ್ವತಾಂಬ ಜಾತ್ರೆ ಮಹೋತ್ಸವ ಅದ್ಧೂರಿಯಾಗಿ ನಡೆದಿರಲಿಲ್ಲ. ಈ ಬಾರಿ ಜಾತ್ರಾ ಸಮಿತಿ ಮತ್ತು ಗ್ರಾಪಂನಿಂದ ಅದ್ಧೂರಿ ಜಾತ್ರಾ ಮಹೋತ್ಸವಕ್ಕೆ ಸಿದ್ಧತೆ ಕೈಗೊಳ್ಳಲಾಗಿದೆ.

ಸಿಂಗಾರಗೊಂಡ ಗ್ರಾಮ: ಗ್ರಾಮದ ದೇವಾಲಯಗಳಿಗೆ ಸುಣ್ಣ-ಬಣ್ಣ ಬಳಿದು, ತಳಿರು-ತೋರಣ ಹಾಗೂ ವಿದ್ಯುದ್ದೀಪಗಳಿಂದ ಸಿಂಗರಿಸಲಾಗಿದೆ. ಬೇಗೂರು ಪೊಲೀಸರು ಬಿಗಿ ಬಂದೋಬಸ್ತ್ ಒದಗಿಸಿದ್ದು, ವಾಹನಗಳ ನಿಲುಗಡೆಗೆ ಸರ್ಕಾರಿ ಶಾಲಾ ಆವರಣದಲ್ಲಿ ಸ್ಥಳ ನಿಗದಿಪಡಿಸಲಾಗಿದೆ.

ಗ್ರಾಮದ ಲಕ್ಷ್ಮೀದೇವಿ ದೇವಾಲಯದ ಆವರಣ ಮತ್ತು ರಸ್ತೆಗಳಲ್ಲಿ ತಿಂಡಿ-ತಿನಿಸುಗಳು ಹಾಗೂ ಮಕ್ಕಳ ಆಟಿಕೆ ವಸ್ತುಗಳ ತಾತ್ಕಾಲಿಕ ಮಳಿಗೆಗಳು ತೆರೆದಿದ್ದು, ಮಾರಾಟ ಜೋರಾಗಿದೆ. ಜಾತ್ರಾ ಮಹೋತ್ಸವಕ್ಕೆ ಬೆಂಗಳೂರು ಮೈಸೂರು, ಮಂಡ್ಯ ಸೇರಿದಂತೆ ದೂರದ ಪ್ರದೇಶಗಳ ಭಕ್ತರು ಮತ್ತು ನೆಂಟರಿಷ್ಟರು ಈಗಾಗಲೇ ಗ್ರಾಮಕ್ಕೆ ಆಗಮಿಸಿದ್ದು, ಸಾವಿರಾರು ಭಕ್ತರು ಜಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

ಜಾತ್ರಾ ವಿಶೇಷ: ಜಾತ್ರೆ ನಡೆಯುವ ಹಿಂದಿನ ದಿನ ಗ್ರಾಮದ ಪ್ರಮುಖರು ಮತ್ತು ಹರಕೆ ಹೊತ್ತವರು ಕಾಲ್ನಡಿಗೆಯಲ್ಲಿ ತೆರಳಿ ದೇಶಿಪುರ-ಬರಗಿ ಅರಣ್ಯ ಪ್ರದೇಶದಲ್ಲಿರುವ ಮೂಲ ಪಾರ್ವತಾಂಬೆ ದೇವಿ ವಿಗ್ರಹಕ್ಕೆ ಪೂಜೆ ಸಲ್ಲಿಸಿ ಅಲ್ಲೇ ತಂಗುವರು. ಮಂಗಳವಾರ ಬೆಳಗ್ಗೆ ಗ್ರಾಮಕ್ಕೆ ತೀರ್ಥ ಪ್ರಸಾದ ತಂದ ನಂತರವಷ್ಟೇ ಜಾತ್ರೆಗೆ ಚಾಲನೆ ದೊರೆಯಲಿದೆ. ಗ್ರಾಮ ಪಾರ್ವತಾಂಬ ದೇವಾಲಯದಿಂದ ಉತ್ಸವಮೂರ್ತಿಯನ್ನು ಬಿದಿರಿನ ಕುಕ್ಕೆಯಲ್ಲಿ ತಂದು ಸಮೀಪದ ಬಸರಿಮರ-ಅರಳಿಮರ ಆವರಣದಲ್ಲಿನ ಅಂಲಕೃತ ರಥದಲ್ಲಿರಿಸಿ, ಗ್ರಾಮದ ರಸ್ತೆಗಳಲ್ಲಿ ಎಳೆಯಲಾಗುತ್ತದೆ. ಬೆಳಗಿನ ಜಾವ 3 ಗಂಟೆಗೆ ಗ್ರಾಮದ ಲಕ್ಷ್ಮಿದೇವಿ ದೇವಾಲಯದ ಆವರಣದ ಅಮಟೆ ಮರದ ಬಳಿ ರಥ ತಂದು ನಿಲ್ಲಿಸಿ, ಜಾಗರಣೆ ಮತ್ತು ಹರಿಕಥೆ ನೆರವೇರಿಸಲಾಗುವುದು. ಬುಧವಾರ ಬೆಳಗ್ಗೆ 9.30ರ ನಂತರ ರಥ ತೆರಳಿದ ರಸ್ತೆಯಲ್ಲೇ ಹಿಂತಿರುಗಲಿದೆ. ಅಲ್ಲದೆ ರಥದ ಬಳಿ ಪಂಜಿನ ಸೇವೆ ಹಿನ್ನೆಲೆಯಲ್ಲಿ ಸಾವಿರಾರು ಜಾನುವಾರುಗಳು ಒಂದೆಡೆ ಸೇರುವುದು ಜಾತ್ರೆಯ ವಿಶೇಷ.

ಪ್ರಧಾನಿ ಮೋದಿ ಹುಟ್ಟುಹಬ್ಬ

ಚಾ.ನಗರ ಜಿಲ್ಲೆಯ ವಿವಿಧೆಡೆ ಆರೋಗ್ಯ ತಪಾಸಣೆ





ಪ್ರಧಾನಿ ನರೇಂದ್ರ ಮೋದಿ ಅವರ 72ನೇ ವರ್ಷದ ಹುಟ್ಟುಹಬ್ಬದ ಹಿನ್ನೆಲೆ ಚಾಮರಾಜನಗರ, ಹನೂರಲ್ಲಿ ಆರೋಗ್ಯ ತಪಾಸಣಾ ಶಿಬಿರ ಹಾಗೂ ಕೊಳ್ಳೇಗಾಲದಲ್ಲಿ ರಕ್ತದಾನ ಶಿಬಿರ ಜರುಗಿತು.

ಚಾಮರಾಜನಗರ,ಸೆ.18–ಪ್ರಧಾನಿ ನರೇಂದ್ರಮೋದಿ ಅವರ 72ನೇ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಸೆ.17ರಿಂದ ಅ.2ರವರೆಗೆ ಹಮ್ಮಿಕೊಂಡಿರುವ ಸೇವಾ ಪಾಕ್ಷಿಕ ಕಾರ್ಯಕ್ರಮದಡಿ ಚಾಮರಾನಗರ, ಹನೂರಲ್ಲಿ ಆರೋಗ್ಯ ತಪಾಸಣಾ ಶಿಬಿರ ಹಾಗೂ ಕೊಳ್ಳೇಗಾಲದಲ್ಲಿ ರಕ್ತದಾನ ಶಿಬಿರ ಜರುಗಿತು. ಸಹಸ್ರಾರು ಜನರು ಶಿಬಿರದ ಸದುಪಯೋಗ ಪಡೆದುಕೊಂಡರು.

ಚಾಮರಾಜನಗರ: ನಗರದ ಸೇವಾ ಭಾರತಿ ಆಂಗ್ಲ ಮಾಧ್ಯಮ ನರ್ಸರಿ ಶಾಲೆಯಲ್ಲಿ ಬಿಜೆಪಿ ವ್ಯದ್ಯಕೀಯ ಪ್ರಕೋಷ್ಠ ಮತ್ತು ಮಾಧ್ಯಮ ಪ್ರಕೋಷ್ಠದಿಂದ ನಡೆದ ಆರೋಗ್ಯ ತಪಾಸಣಾ ಶಿಬಿರಕ್ಕೆ ಸೇವಾ ಪಾಕ್ಷಿಕ ಜಿಲ್ಲಾ ಸಂಚಾಲಕರೂ ಆದ ಕೇಂದ್ರ ಪರಿಹಾರ ಸಮಿತಿ ಮಾಜಿ ಎಂ. ರಾಮಚಂದ್ರ ಹಾಗೂ ಅಖಿಲ ಭಾರತ ವಾಕ್ ಮತ್ತು ಶ್ರವಣ ಸಂಸ್ಥೆ ನಾಮನಿರ್ದೇಶನ ಸದಸ್ಯ ಡಾ.ಎ.ಆರ್.ಬಾಬು ಚಾಲನೆ ನೀಡಿದರು.

ಕೇಂದ್ರ ಪರಿಹಾರ ಸಮಿತಿ ಮಾಜಿ ಎಂ. ರಾಮಚಂದ್ರ ಮಾತನಾಡಿದರು. ಪತ್ರಕರ್ತರು ಹಾಗೂ ಅವರ ಕುಟುಂಬದ ಸದಸ್ಯರು, ಪಾರ್ವತಿ ಬಾಲ ಆಶ್ರಮದ ಮಕ್ಕಳು, ಸಾರ್ವಜನಿಕರು ಆರೋಗ್ಯ ತಪಾಸಣೆ ಮಾಡಿಸಿಕೊಂಡರು. ಈ ವೇಳೆ ಬಿಜೆಪಿ ಜಿಲ್ಲಾಧ್ಯಕ್ಷ ಆರ್.ಸುಂದರ್, ಸೇವಾ ಪಾಕ್ಷಿಕ ಸಹ ಸಂಚಾಲಕರಾದ ಅಯ್ಯನಪುರ ಶಿವಕುಮಾರ್, ಕಿಲಗೆರೆ ಬಸವರಾಜು, ಜಿಲ್ಲಾ ಮಾಧ್ಯಮ ಪ್ರಮುಖ್ ಎನ್.ಮಂಜುನಾಥ್, ಸಹ ಸಂಚಾಲಕ ಚಂದ್ರಶೇಖರ್, ಜಿಲ್ಲಾ ಉಪಾಧ್ಯಕ್ಷ ಪಿ.ವೃಷಬೇಂದ್ರ, ಪ್ರಧಾನ ಕಾರ್ಯದರ್ಶಿಗಳಾದ ನಾಗಶ್ರೀ ಪ್ರತಾಪ್, ಮಂಗಲ ಶಿವಕುಮಾರ್, ಜಿಲ್ಲಾ ಕಾರ್ಯದರ್ಶಿಗಳಾದ ಚಂದ್ರಶೇಖರ್, ಪದ್ಮ ಸರಸ್ವತಿ, ಜಿಲ್ಲಾ ಸಹ ವಕ್ತಾರ ಬಸವರಾಜಪ್ಪ ಕೂಡ್ಲೂರು ಹನುಮಂತಶೆಟ್ಟಿ, ಎಪಿಎಂಸಿ ಅಧ್ಯಕ್ಷ ಮನೋಜ್ ಪಟೇಲ್, ನಗರಸಭಾ ಸದಸ್ಯರಾದ ಗಾಯತ್ರಿ ಚಂದ್ರಶೇಖರ್, ಮಮತಾ ಬಾಲಸುಬ್ರಹ್ಮಣ್ಯ, ಎಸ್ಸಿ ಮೋರ್ಚಾ ರಾಜ್ಯ ಕಾರ್ಯಕಾರಿಣಿ ಸದಸ್ಯ ಸುರೇಶ್ ನಾಯಕ ಸೇರಿದಂತೆ ಇತರರಿದ್ದರು.

ಹನೂರು: ಪಟ್ಟಣದ ಆರ್.ಎಸ್. ದೊಡ್ಡಿಯ ಗೌರಿ ಶಂಕರ ಕಲ್ಯಾಣ ಮಂಟಪ ಸಮೀಪದಲ್ಲಿ ಓಬಿಸಿ ಮೋರ್ಚಾ ಜಿಲ್ಲಾ ಸಂಯೋಜಕ ಜನಧ್ವನಿ ಬಿ.ವೆಂಕಟೇಶ್ ಆಯೋಜಿಸಿದ್ದ ಬೃಹತ್ ಆರೋಗ್ಯ ತಪಾಸಣಾ ಶಿಬಿರವನ್ನು ಬಿಜೆಪಿ ಓಬಿಸಿ ಮೋರ್ಚಾ ರಾಷ್ಟ್ರೀಯ ಅಧ್ಯಕ್ಷ ಲಕ್ಷ್ಮಣ್ ಜೀ ಉದ್ಘಾಟಿಸಿ, ಮಾತನಾಡಿದರು.

ವಾಟಾಳು ಮಠದ ಶ್ರೀ ಸಿದ್ದಲಿಂಗ ಶಿವಾಚಾರ್ಯ ಸ್ವಾಮೀಜಿ ಆಶೀರ್ವಚನ ನೀಡಿದರು. ಬಿಜೆಪಿ ಜಿಲ್ಲಾ ಸಂಯೋಜಕ ಜನಧ್ವನಿ ಬಿ. ವೆಂಕಟೇಶ್ ಮಾತನಾಡಿದರು. ಆರೋಗ್ಯ ತಪಾಸಣಾ ಶಿಬಿರದಲ್ಲಿ ಸುಮಾರು 6 ಸಾವಿರಕ್ಕೂ ಹೆಚ್ಚು ಜನರು ಆಗಮಿಸಿದ್ದರು. ಕಾರ್ಯಕ್ರಮದಲ್ಲಿ ಬಿಜೆಪಿ ಓಬಿಸಿ ಮೋರ್ಚಾ ರಾಷ್ಟ್ರೀಯ ಉಪಾಧ್ಯಕ್ಷೆ ಅರುಣ, ರಾಜ್ಯಾಧ್ಯಕ್ಷ ನೆ.ಲ.ನರೇಂದ್ರಬಾಬು, ಸಫಾಯಿ ಕರ್ಮಚಾರಿ ಆಯೋಗದ ಅಧ್ಯಕ್ಷ ಕೋಟೆ ಎಂ.ಶಿವಣ್ಣ, ಉಪ್ಪಾರ ಅಭಿವೃದ್ಧಿ ನಿಗಮದ ಅಧ್ಯಕ್ಷ ಗಿರೀಶ್ ಉಪ್ಪಾರ್, ಮುಡಿಗುಂಡ ಮಠದ ಶ್ರೀಕಂಠ ಸ್ವಾಮೀಜಿ, ಹೊಂಡರಬಾಳು ಪಟ್ಟದ ಮಠದ ಪ್ರಸನ್ನಾನಂದ ಸ್ವಾಮೀಜಿ, ಶಾಸಕ ಎನ್.ಮಹೇಶ್, ಮಾಜಿ ಶಾಸಕಿ ಪರಿಮಳಾ ನಾಗಪ್ಪ, ಬಿಜೆಪಿ ಜಿಲ್ಲಾಧ್ಯಕ್ಷ ಸುಂದರ್, ಉಪಾಧ್ಯಕ್ಷ ಡಾ.ಎಸ್. ದತ್ತೇಶ್‌ಕುಮಾರ್ ಹಾಗೂ ಇನ್ನಿತರರಿದ್ದರು.

ಕೊಳ್ಳೇಗಾಲ: ಪ್ರಧಾನಮಂತ್ರಿ ನರೇಂದ್ರ ಮೋದಿ 72ನೇ ವರ್ಷದ ಹುಟ್ಟುಹಬ್ಬವನ್ನು ನೂರಾರು ಬಿಜೆಪಿ ಕಾರ್ಯಕರ್ತರು, ಶಾಸಕ ಎನ್.ಮಹೇಶ್ ಹಾಗೂ ಪಕ್ಷದ ಮುಖಂಡರ ಸಮ್ಮುಖದಲ್ಲಿ ರಕ್ತದಾನ ಶಿಬಿರ, ಸರ್ಕಾರಿ ಉಪವಿಭಾಗ ಆಸ್ಪತ್ರೆಯ ಒಳರೋಗಿಗಳಿಗೆ ಹಣ್ಣು ವಿತರಿಸುವ ಮೂಲಕ ಆಚರಿಸಲಾಯಿತು. ಈ ವೇಳೆ ಮಾತನಾಡಿದ ಶಾಸಕ ಎನ್.ಮಹೇಶ್ ಮಾತನಾಡಿದರು. ಈ ಸಂದರ್ಭದಲ್ಲಿ ಇದೇ ವೇಳೆ ಶಾಸಕರ ಆಪ್ತ ಅಂಗರಕ್ಷಕ ಶಿವಣ್ಣ, ನಗರಸಭೆ ನಾಮನಿರ್ದೇಶನ ಸದಸ್ಯ ಮಧುಚಂದ್ರ, ಓಬಿಸಿ ತಾಲೂಕು ಅಧ್ಯಕ್ಷ ನಾಗಣ್ಣ, ಕಿರಣ್, ಯುವ ಮುಖಂಡ ಜಕಾವುಲ್ಲಾ, ಆಸಿಫ್, ಶಂಕನಪುರ ಜಗದೀಶ್ ಸೇರಿದಂತೆ ಹಲವರು ಸ್ವಯಂಪ್ರೇರಿತರಾಗಿ ರಕ್ತದಾನ ಮಾಡಿದರು. ಈ ವೇಳೆ ಮುಖ್ಯ ವೈದ್ಯಾಧಿಕಾರಿ ಡಾ.ರಾಜಶೇಖರ್, ಜಿಲ್ಲಾ ಬಿಜೆಪಿ ವಕ್ತಾರ ಬಸವರಾಜಪ್ಪ, ನಗರ ಮಂಡಲ ಅಧ್ಯಕ್ಷ ಲಕ್ಷ್ಮೀಪತಿ, ಕಾರ್ಯದರ್ಶಿ ರವಿಕುಮಾರ್, ಯುವ ಮೋರ್ಚಾ ಅಧ್ಯಕ್ಷ ಕಿರಣ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಲೋಕೇಶ ನಂಜುಂಡಸ್ವಾಮಿ, ನಗರಸಭೆ ಸದಸ್ಯ ಕವಿತಾ, ನಾಮನಿರ್ದೇಶನ ಸದಸ್ಯರಾದ ನಟರಾಜು, ಮಧು, ಸೋಮಣ್ಣ, ಆರೋಗ್ಯ ರಕ್ಷಾ ಸಮಿತಿ ಸದಸ್ಯ ಸುರೇಶ್, ರಮೇಶ್, ಜಾಕಿ ಸುರೇಶ್, ಸಿದ್ದಪ್ಪಾಜಿ ಇನ್ನಿತರರಿದ್ದರು.

ಹನೂರು ತಾಲೂಕಿನ ಕೆರೆಗಳನ್ನು ತುಂಬಿಸಲು ಆಗ್ರಹ



ಚಾಮರಾಜನಗರ, ಸೆ.18–ಹನೂರು ತಾಲೂಕಿನ 10 ಕರೆಗಳಿಗೆ ಏತ ನೀರಾವರಿಯಿಂದ ನೀರು ತುಂಬಿಸಲು ಸಿದ್ಧವಾಗಿರುವ 185 ಕೋಟಿ ರೂ.ನ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡುವಂತೆ ಹನೂರು ತಾಲೂಕು ಕೆರೆಗಳಿಗೆ ನೀರು ತುಂಬಿಸುವ ಹೋರಾಟ ಸಮಿತಿ ಅಧ್ಯಕ್ಷ ಶಿವಕುಮಾರ್ ಆಗ್ರಹಿಸಿದ್ದಾರೆ.

ನಗರದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ತಾಲೂಕಿನ ಸರಗೂರು ಕೆರೆ, ಪಾಳ್ಯ ಚಿಕ್ಕಕೆರೆ, ಪಾಳ್ಯ ದೊಡ್ಡಕೆರೆ, ಲಿಂಗಮ್ಮನಕೆರೆ, ಕೂತನೂರು ಕೆರೆ, ಮಣಗಳ್ಳಿ ಕೆರೆ, ಬಂಡಳ್ಳಿ ಕೆರೆ, ಹಲಗಾಪುರ ಕೆರೆ, ಮಾರ್ಟಳ್ಳಿ ಕೆರೆ, ಕಿರಾಪತಿ ಕೆರೆಗಳು 15 ವರ್ಷಗಳಿಂದ ಮಳೆಯ ಅಭಾವದಿಂದಾಗಿ ತುಂಬಿಲ್ಲ. ಇದರಿಂದ ಅಂತರ್ಜಲ ಮಟ್ಟ ಕುಸಿದು, ಕುಡಿಯುವ ನೀರಿಗಾಗಿ 800 ಅಡಿ ಆಳದವರೆಗೆ ಬಾವಿ ಕೊರೆಯ ಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ ಇದೆ ಎಂದು ಬೇಸರ ವ್ಯಕ್ತಪಡಿಸಿದರು. ಕುಡಿಯುವ ನೀರಿನ ಸಮಸ್ಯೆ, ರೈತರ ಸಂಕಷ್ಟ ನೀಗಿಸಲು ಹಾಗೂ ಅಂತರ್ಜಲ ವೃದ್ಧಿಸಲು ಜನಪ್ರತಿನಿಧಿಗಳ ಸಹಕಾರದಿಂದ ಈ ಕೆರೆ ಗಳನ್ನು ತುಂಬಿಸಲು 185 ಕೋಟಿ ರೂ. ಡಿಪಿಆರ್ ಸಿದ್ಧಪಡಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಕೂಡಲೇ ಸರ್ಕಾರ ಆಡಳಿತಾತ್ಮಕ ಅನುಮೋದನೆ ನೀಡ ಬೇಕು ಎಂದು ಒತ್ತಾಯಿಸಿದರು.

ಹನೂರು ತಾಲೂಕಿನ 10 ಕೆರೆಗಳು, 6 ಕಟ್ಟೆಗಳು, 16 ಪಿಕ್‌ಅಪ್‌ಗಳು ಹಾಗೂ ಹೊಸದಾಗಿ 3 ಪಿಕ್ ಅಪ್‌ಗಳನ್ನು ನಿರ್ಮಿಸಿ ಅವುಗಳಿಗೆ ನೀರು ತುಂಬಿಸಲು ಈ ಯೋಜನೆ ಮೂಲಕ 406 ಟಿಎಂಸಿ ನೀರಿನ ಅಗತ್ಯವಿದೆ. ಸರಗೂರು ಬಳಿ ಹರಿಯುವ ಕಾವೇರಿ ನದಿಯ ಬಲದಂಡೆಯಲ್ಲಿ ಜಾಕ್ವೆಲ್ ಕಂ ಪಂಪ್ ಹೌಸ್ ನಿರ್ಮಿಸಿ ವರ್ಟಿಕಲ್ ಟರ್ಬನ್ ಪಂಪ್‌ಗಳನ್ನು ಬಳಸಿ 90 ದಿನಗಳ ಕಾಲ 406 ಎಂಸಿಎಫ್‌ಟಿ ನೀರನ್ನು ಎತ್ತಿ 24.93 ಕಿಮೀ ಉದ್ದದ ಏರು ಕೊಳವೆ ಮೂಲಕ ಕೆರೆಗಳಿಗೆ ನೀರು ತುಂಬಿಸಬಹುದಾಗಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಗೌರವಾಧ್ಯಕ್ಷ ಸಮನ್ಸ್ ನಾಥನ್, ಉಪಾಧ್ಯಕ್ಷರಾದ ಪೆದ್ದನಪಾಳ್ಯ ಮಣಿ, ಬಂಡಳ್ಳಿ ನಯೀಂ ಪಾಷಾ, ಮಾರ್ಟಹಳ್ಳಿ ಜಪಮಾಲೆ, ಕಾರ್ಯದರ್ಶಿ ರಾಬರ್ಟ್ ಪಿಂಟೊ, ಸದಸ್ಯರಾದ ಸ್ವಾಮಿ, ಗುರುಪ್ರಸಾದ್, ರಂಗಸ್ವಾಮಿ ಇದ್ದರು.

ನಲ್ಲೂರು ಅಮಾನಿ ಜಲಾಶಯಕ್ಕೆ ನೀರು ಹರಿಸಲು ನಿರ್ಧಾರ



ಗುಂಡ್ಲುಪೇಟೆ, ಸೆ.18– ಈ ಬಾರಿ ತಾಲೂಕಿನ ನಲ್ಲೂರು ಅಮಾನಿ ಜಲಾಶಯಕ್ಕೆ ನೀರು ಹರಿಸಲು ನಿರ್ಧರಿಸಲಾಗಿದೆ ಎಂದು ಶಾಸಕ ಸಿ.ಎಸ್.ನಿರಂಜನಕುಮಾರ್ ಹೇಳಿದರು.

ತಾಲೂಕಿನ ಕಮರಹಳ್ಳಿ ಕೆರೆಗೆ ಬಾಗಿನ ಸಲ್ಲಿಸಿದ ನಂತರ ಗ್ರಾಮಸ್ಥರೊಂದಿಗೆ ಅವರು ಮಾತನಾಡಿದರು. ಈ ಬಾರಿ ಉತ್ತಮ ಮಳೆ ಬಿದ್ದ ಕಾರಣದಿಂದ ಕಳೆದ 25 ವರ್ಷಗಳಿಂದಲೂ ಕೋಡಿ ಬೀಳದ ಹಲವಾರು ಕೆರೆಗಳು ತುಂಬಿ ಹರಿಯುತ್ತಿವೆ. ಆದರೂ ಹಲವಾರು ಕೆರೆಗಳಿಗೆ ನೀರು ತುಂಬದೆ ಆ ಭಾಗದ ಜನತೆ ನಿರಾಶರಾಗಿದ್ದಾರೆ. ಆದ್ದರಿಂದ ತಾಲೂಕಿನ ಹುತ್ತೂರು ಪಂಪ್ ಹೌಸ್‌ನಿಂದ ವಡ್ಡಗೆರೆ ಮಾರ್ಗವಾಗಿ ನೀರು ಅನೇಕ ಕೆರೆಗಳಿಗೆ ನೀರು ಹರಿಸಲಾಗುತ್ತಿದೆ. ಬೇಗೂರು ಹೋಬಳಿಯ ಕೆರೆಗಳಿಗೆ ನೀರು ತುಂಬಿಸಲು ಗಾಂಧೀ ಗ್ರಾಮ ಪಂಪ್‌ಹೌಸ್‌ನಿಂದ ಮೂರು ಮೋಟಾರುಗಳಿಂದ ನೀರು ಹರಿಸಲು ಕ್ರಮ ಕೈಗೊಳ್ಳಲಾಗಿದೆ. ಈ ಎರಡೂ ಮಾರ್ಗದಲೂ ನಲ್ಲೂರು ಅಮಾನಿ ಜಲಾಶಯಕ್ಕೆ ನೀರು ಹರಿದು ಬರುವಂತೆ ಮಾಡಲಾಗುವುದು. ರೈತರು ನಿರಾಶರಾಗುವ ಅಗತ್ಯವಿಲ್ಲ ಎಂದು ಭರವಸೆ ನೀಡಿದರು.

ಈ ಸಂದರ್ಭದಲ್ಲಿ ಜಿಪಂ ಮಾಜಿ ಸದಸ್ಯೆ ರತ್ನಮ್ಮ ಶ್ರೀಕಂಠಪ್ಪ, ಬಗರ್ ಹುಕುಂ ಸಮಿತಿಯ ಉಪಾಧ್ಯಕ್ಷ ನಿಟ್ರೆ ನಾಗರಾಜಪ್ಪ, ಹೊರೆಯಾಲ ಕೃಷ್ಣ ಸೇರಿದಂತೆ ಹಲವರಿದ್ದರು.

ಚಾ.ನಗರದ ಪಚ್ಚಪ್ಪ ವೃತ್ತದಲ್ಲಿ ಮಕ್ಕಳೊಂದಿಗೆ ರಸ್ತೆಹೊಂಡ ಮುಚ್ಚಿದ ಪರಿಸರ ಪ್ರೇಮಿ

ಚಾಮರಾಜನಗರ,ಸೆ.18–ನಗರದ ಪ್ರಮುಖ ವೃತ್ತವಾದ ಭುವನೇಶ್ವರಿ ವೃತ್ತ(ಪಚ್ಚಪ್ಪ ವೃತ್ತ)ದಲ್ಲಿದ್ದ ರಸ್ತೆ ಹೊಂಡವನ್ನು ಪರಿಸರ ಪ್ರೇಮಿ ವೆಂಕಟೇಶ್ ಹಾಗೂ ಅವರ ಮಕ್ಕಳು ಮುಚ್ಚಿದರು.



ಪಚ್ಚಪ್ಪ ವೃತ್ತದಲ್ಲಿ(ಟ್ರಾಫಿಕ್ ಚೌಕಿ ಬಳಿ) ದೊಡ್ಡದೊಂದು ಹಳ್ಳ ನಿರ್ಮಾಣವಾಗಿತ್ತು. ಈ ಹಳ್ಳದಿಂದ ವಾಹನ ಸವಾರರು, ಪಾದಚಾರಿಗಳಿಗೆ ತೀವ್ರ ತೊಂದರೆ ಉಂಟಾಗಿತ್ತು. ಇದು ನಗರದ ಪ್ರಮುಖ ವೃತ್ತವಾದ್ದರಿಂದ ಈ ರಸ್ತೆಯಲ್ಲಿ ಶಾಸಕರು, ನಗರಸಭೆ ಅಧ್ಯಕ್ಷರು, ಆಯುಕ್ತರು ಸೇರಿದಂತೆ ಎಲ್ಲಾ ಜನಪ್ರತಿನಿಧಿಗಳು ಸಂಚರಿಸುತ್ತಾರೆ. ನಿತ್ಯ ಸಾವಿರಾರು ವಾಹನಗಳು ಸಂಚರಿಸುತ್ತವೆ. ಆದರೆ ಯಾರೊಬ್ಬರೂ ಸಹ ಈ ದೊಡ್ಡ ಹಳ್ಳ ಮುಚ್ಚಿಸುವ ಕೆಲಸ ಮಾಡಿರಲಿಲ್ಲ.

ಪಚ್ಚಪ್ಪ ವೃತ್ತದಲ್ಲಿರುವ ಪತ್ರಿಕೆ ಮಾರಾಟದ ಅಂಗಡಿಗೆ ಭಾನುವಾರ ವೆಂಕಟೇಶ್ ತನ್ನ ಇಬ್ಬರು ಮಕ್ಕಳೊಂದಿಗೆ ಭೇಟಿ ನೀಡಿದ್ದರು. ಈ ವೇಳೆ ಅಲ್ಲಿದ್ದ ದೊಡ್ಡಹಳ್ಳ, ಸಾರ್ವಜನಿಕರು ಪರಿತಪಿಸುತ್ತಿದ್ದ ರೀತಿ ಗಮನಿಸಿದರು. ತಕ್ಷಣವೇ ತನ್ನ ಇಬ್ಬರು ಮಕ್ಕಳ ಸಹಾಯದಿಂದ ಹಳ್ಳಕ್ಕೆ ಹತ್ತಿರದಲ್ಲಿದ್ದ ಚಪ್ಪಡಿ ಕಲ್ಲು ಹಾಕಿ, ಸುತ್ತಲೂ ಮಣ್ಣು ಸೇರಿಸಿ ಸಮತಟ್ಟು ಮಾಡಿಯೇ ಬಿಟ್ಟರು. ನಗರದಲ್ಲಿ ಎಲ್ಲಾ ರಸ್ತೆಗಳಲ್ಲೂ ಗಿಡಗಳನ್ನು ನೆಟ್ಟು ಪೋಷಿಸುತ್ತಾ ಬರುತ್ತಿರುವ ಪರಿಸರ ಪ್ರೇಮಿ ವೆಂಕಟೇಶ್ ಅವರ ಈ ಕಾರ್ಯಕ್ಕೆ ಅಲ್ಲಿದ್ದ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದರು.

ಚಂಡೀಗಢ ವಿವಿ ಹಾಸ್ಟೆಲ್ ವಿದ್ಯಾರ್ಥಿನಿಯರ ಆಕ್ಷೇಪಾರ್ಹ ವಿಡಿಯೋ ವೈರಲ್, ಆರೋಪ

ವಿದ್ಯಾರ್ಥಿಗಳಿಂದ ಭಾರೀ ಪ್ರತಿಭಟನೆ



ಚಂಡೀಗಢ, ಸೆ.18–ಮೊಹಾಲಿಯ ಚಂಡೀಗಢ ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿ ಸುಮಾರು 60 ವಿದ್ಯಾರ್ಥಿನಿಯರು ಸ್ನಾನ ಮಾಡುತ್ತಿರುವ ವೀಡಿಯೋವನ್ನು ಸಹ ವಿದ್ಯಾರ್ಥಿನಿಯೊಬ್ಬಳು ಸೆರೆಹಿಡಿದು, ಅದನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಟ್ಟಿರುವುದಾಗಿ ಆರೋಪಿಸಲಾಗಿದೆ. ಈ ವೀಡಿಯೋವನ್ನು ಹರಿಬಿಟ್ಟ ವಿದ್ಯಾರ್ಥಿನಿಯನ್ನು ಪೊಲೀಸರು ಬಂಧಿಸಿದ್ದಾರೆ. ವೀಡಿಯೋ ಸೋರಿಕೆಯಾದ ಬೆನ್ನಲ್ಲೇ ಭಾರೀ ಪ್ರತಿಭಟನೆ ಬುಗಿಲೆದ್ದಿದ್ದು, ಪಂಜಾಬ್ ಮುಖ್ಯಮಂತ್ರಿ ಭಗವಂತ್ ಮಾನ್ ಉನ್ನತ ಮಟ್ಟದ ತನಿಖೆಗೆ ಆದೇಶಿಸಿದ್ದಾರೆ. ಘಟನೆ ಬಳಿಕ ಹಲವು ವಿದ್ಯಾರ್ಥಿನಿಯರು ಆತ್ಮಹತ್ಯೆಗೆ ಯತ್ನಿಸಿದ್ದಾರೆ ಎಂಬ ಆರೋಪವನ್ನು ಚಂಡೀಗಢ ವಿಶ್ವವಿದ್ಯಾನಿಲಯವು ತಳ್ಳಿಹಾಕಿದೆ. ಒಬ್ಬ ಹುಡುಗಿಗೆ ಮಾತ್ರ ಪ್ರಜ್ಞೆ ತಪ್ಪಿತ್ತು. ಆಕೆಯನ್ನು ಆಸ್ಪತ್ರೆಗೆ ದಾಖಲಿಸಿದ ಬಳಿ ಆರೋಗ್ಯ ಸ್ಥಿರವಾಗಿದೆ ಎಂದು ಖಾಸಗಿ ವಿವಿ ಅಧಿಕಾರಿಗಳು ಹೇಳಿದ್ದಾರೆ.

ಚಂಡೀಗಢ ವಿವಿ ಉಪಕುಲಪತಿ ಡಾ.ಆರ್.ಎಸ್ ಬಾವಾ ಮಾತನಾಡಿ, ವಿದ್ಯಾರ್ಥಿನಿಯರ 60 ಆಕ್ಷೇಪಾರ್ಹ ಎಂಎಂಎಸ್‌ಗಳು ಕಂಡುಬಂದಿದೆ ಎಂಬುದು ಸಂಪೂರ್ಣ ಸುಳ್ಳು ಹಾಗೂ ಆಧಾರರಹಿತವಾದುದು. ವಿವಿಯಲ್ಲಿ ವಿದ್ಯಾರ್ಥಿನಿ ಚಿತ್ರೀಕರಿಸಿದ ವೈಯಕ್ತಿಕ ವೀಡಿಯೋವನ್ನು ಹೊರತುಪಡಿಸಿ, ಉಳಿದ ಯಾವುದೇ ಆಕ್ಷೇಪಾರ್ಹ ವೀಡಿಯೋಗಳು ಕಂಡುಬಂದಿಲ್ಲ. ಅಲ್ಲದೇ ವಿದ್ಯಾರ್ಥಿನಿ ತನ್ನ ವೈಯಕ್ತಿಕ ವೀಡಿಯೋವನ್ನು ಸ್ವತಃ ತನ್ನ ಬಾಯ್‌ಫ್ರೆಂಡ್‌ಗೆ ಹಂಚಿಕೊಂಡಿದ್ದಾಳೆ ಎಂದು ತಿಳಿಸಿದ್ದಾರೆ.

ಒಂದನೇ ಪುಟದಿಂದ

ಬೊಮ್ಮಾಯಿ ತಿರಸ್ಕಾರ

ಎಂದು ತಿಳಿಸಲಾಯಿತು. ಸುರಂಗ ರೈಲ್ವೆ ಮಾರ್ಗ ನಿರ್ಮಿಸುವ ಕುರಿತೂ ಕೂಡ ಕೇರಳ ಸರ್ಕಾರ ಪ್ರಸ್ತಾಪಿಸಿದೆ. ಆದರೆ ಈ ರೈಲ್ವೆ ಸುರಂಗ ಮಾರ್ಗ ನಿರ್ಮಾಣ ಚಟುವಟಿಕೆ ಸಂದರ್ಭದಲ್ಲಿ ಪರಿಸರ ಹಾನಿಯಾಗುತ್ತದೆ. ಆದ್ದರಿಂದ ಅದನ್ನು ಸಮ್ಮತಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಪಡಿಸಲಾಯಿತು. ಬಂಡೀಪುರ ರಾಷ್ಟ್ರೀಯ ಉದ್ಯಾನದ ಮೂಲಕ ರಾತ್ರಿ ವೇಳೆ ಕೇರಳಾಗೆ ಎರಡು ಬಸ್‌ಗಳು ಸಂಚರಿಸುತ್ತಿವೆ. ಅದನ್ನು ನಾಲ್ಕಕ್ಕೆ ಏರಿಸುವಂತೆ ಕೇರಳಾ ಮುಖ್ಯಮಂತ್ರಿಗಳು ಕೋರಿದರು. ಅದಕ್ಕೂ ಕೂಡ ರಾಜ್ಯ ಸರ್ಕಾರ ಒಪ್ಪಿಗೆ ಸೂಚಿಸಿಲ್ಲ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಪರಿಶೀಲಿಸಿದ ಸಚಿವ ಎಸ್‌ಟಿಎಸ್

ಸ್ಥಳವನ್ನು ಪರಿಶೀಲಿಸಿದರು. ಬಳಿಕ ಪತ್ರಕರ್ತರರೊಂದಿಗೆ ಸಚಿವ ಎಸ್.ಟಿ.ಸೋಮಶೇಖರ್ ಮಾತನಾಡಿ, ದಸರಾ ಮಹೋತ್ಸವಕ್ಕೆ ಸಿದ್ಧತೆ ತ್ವರಿತಗತಿಯಲ್ಲಿ ಸಾಗುತ್ತಿದೆ. ದಸರಾ ಉದ್ಘಾಟನೆಗೆ ರಾಷ್ಟ್ರಪತಿಗಳನ್ನು ಆಹ್ವಾನಿಸಲಾಗಿದ್ದು, ರಾಷ್ಟ್ರಪತಿಗಳೊಂದಿಗೆ ಎಷ್ಟು ಜನ ಬರುತ್ತಾರೆ ಎಂದು ರಾಷ್ಟ್ರಪತಿ ಕಚೇರಿಯಿಂದ ಮಾಹಿತಿ ಬಂದಿಲ್ಲ. ನಾಳೆಯೊಳಗೆ ರಾಷ್ಟ್ರಪತಿಗಳ ಕಚೇರಿಯಿಂದ ಸೂಚನೆ ಬರಲಿದ್ದು, ಅದರ ಆ ನಂತರ ಸ್ಪಷ್ಟ ಚಿತ್ರಣ ದೊರೆಯಲಿದೆ. ಅಂತಿಮ ಸಿದ್ಧತೆ ಮಾಡಿಕೊಳ್ಳಲಾಗುತ್ತದೆ ಎಂದರು.

ರಾಷ್ಟ್ರಪತಿಗಳಿಗೆ ನೀಡುವ ಪ್ರೋಟೋಕಾಲ್‌ನಂತೆ ಸೂಕ್ತ ರೀತಿಯಲ್ಲಿ ಭದ್ರತೆ ಒದಗಿಸಲಾಗುತ್ತದೆ. ಗಣ್ಯರಿಗೆ ಭದ್ರತೆ ನೀಡುವಲ್ಲಿ ಕರ್ನಾಟಕ ದಶಕ್ಕೆ ಮಾದರಿಯಾಗಿದೆ. ಮೈಸೂರು ಪೊಲೀಸರು ಅಗತ್ಯ ಭದ್ರತೆ ಒದಗಿಸುತ್ತಾರೆ ಎಂದರು.

ಸ್ಥಳದ ಲಭ್ಯತೆಗೆ ಅನುಗುಣವಾಗಿ ಸಾರ್ವಜನಿಕರಿಗೆ ಆಸನದ ವ್ಯವಸ್ಥೆ ಮಾಡಲಾಗುತ್ತಿದೆ. ಕಾರ್ಯಕ್ರಮದಲ್ಲಿ 1,500 ಜನರಿಗೆ ಆಸನದ ಅವಕಾಶ ಮಾಡಲಾಗುತ್ತದೆ. ಪ್ರಾಂಗಣದಲ್ಲಿ 500 ಮಂದಿ ನಿಂತುಕೊಂಡು ಕಾರ್ಯಕ್ರಮ ವೀಕ್ಷಿಸಬಹುದಾಗಿದೆ. ರಾಷ್ಟ್ರಪತಿ ಆಗಮನದ ಹಿನ್ನೆಲೆಯಲ್ಲಿ ಅಂದು ದೇವಾಲಯಕ್ಕೆ ಭಕ್ತರ ಪ್ರವೇಶ ನಿರ್ಬಂಧಿಸುವುದಿಲ್ಲ. ದೇವಾಲಯಕ್ಕೆ ಬರುವ ಭಕ್ತರೆಲ್ಲರಿಗೂ ಕಾರ್ಯಕ್ರಮ ವೀಕ್ಷಿಸಲು ಅವಕಾಶವಿದೆ ಎಂದು ಹೇಳಿದರು. ಬಳಿಕ ದೇವಸ್ಥಾನದ ಪಾರ್ಕಿಂಗ್ ಆವರಣದಲ್ಲಿ ನೂತನವಾಗಿ ನಿರ್ಮಿಸಿರುವ ಅಂಗಡಿ ಮಳಿಗೆಗಳು, ಫುಡ್ ಕೋರ್ಟ್ ಗೆ ಭೇಟಿ ಕೊಟ್ಟರು. ಈ ಸಂದರ್ಭದಲ್ಲಿ ಸಂಸದ ಪ್ರತಾಪ್ ಸಿಂಹ, ಶಾಸಕರಾದ ಜಿ.ಟಿ.ದೇವೇಗೌಡ, ಮೇಯರ್ ಶಿವಕುಮಾರ್, ಜಿಲ್ಲಾಧಿಕಾರಿ ಡಾ.ಬಗಾದಿ ಗೌತಮ್, ಪೊಲೀಸ್ ಕಮಿಷನರ್ ಚಂದ್ರಗುಪ್ತ, ಎಡಿಸಿ ಡಾ.ಮಂಜುನಾಥಸ್ವಾಮಿ ಸೇರಿದಂತೆ ಹಲವಾರು ಅಧಿಕಾರಿಗಳು, ನಿಗಮ ಮಂಡಳಿಗಳ ಅಧ್ಯಕ್ಷರು ಮತ್ತು ಮುಖಂಡರು ಉಪಸ್ಥಿತರಿದ್ದರು.

ಸದ್ಯಕ್ಕಿಲ್ಲ ಚೀತಾ ಯೋಜನೆ

ಪಡೆಯಲು ಸಾಧ್ಯವಾಗುತ್ತದೆ ಎಂದು ನಾವು ಆಶಿಸುತ್ತಿದ್ದೇವೆ ಎಂದು ಹೇಳಿದ್ದಾರೆ.

ಭಾರತದಲ್ಲಿ, ಮೈಸೂರು ಮೃಗಾಲಯ ಮಾತ್ರ ಯಶಸ್ವಿ ಸಂತಾನೋತ್ಪತ್ತಿಯನ್ನು ಕಂಡಿದೆ, ಆದರೆ ಅವು ನಂತರ ಸತ್ತವು. ಪ್ರಸ್ತುತ ಇರುವ 3 ಚಿರತೆಗಳನ್ನು 2019–20ರಲ್ಲಿ ತರಲಾಗಿದೆ ಎಂದು ಮೈಸೂರು ಮೃಗಾಲಯದ ಅಧಿಕಾರಿಗಳು ತಿಳಿಸಿದ್ದಾರೆ. ಕುನೊ ರಾಷ್ಟ್ರೀಯ ಉದ್ಯಾನವನಕ್ಕೆ ತರಲಾದ ಪ್ರಭೇದಗಳು ಭಾರತೀಯ ಉಪಖಂಡದಲ್ಲಿ ಬೆಳೆಯುವ ಏಷ್ಯಾಟಿಕ್ ಅಲ್ಲ ಎಂದು ಅರಣ್ಯಾಧಿಕಾರಿಗಳು ಮತ್ತು ತಜ್ಞರು ವಿವರಿಸಿದ್ದಾರೆ. ಕರ್ನಾಟಕ ಕಾಡುಗಳು, ಹುಲ್ಲುಗಾವಲುಗಳು ಮತ್ತು ಇತರ ಪ್ರದೇಶಗಳನ್ನು ಒಳಗೊಂಡಂತೆ, ವರ್ಷಗಳಿಂದಲೂ ಬದಲಾಗಿದೆ. ಪ್ರದೇಶಗಳಲ್ಲಿ ಮತ್ತು ಸುತ್ತಮುತ್ತಲಿನ ಮಾನವ ಮತ್ತು ವನ್ಯಜೀವಿ ಜನಸಂಖ್ಯೆಯು ಬದಲಾಗಿದೆ ಮತ್ತು ಹೊಸ ಜಾತಿಯ ಪರಿಚಯವು ಸಾಧ್ಯವಾಗುವುದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ನಾವು ಪ್ರಯೋಗ ಮಾಡಲು ಸಾಧ್ಯವಿಲ್ಲ, ಮತ್ತು ಕುನೋದಲ್ಲಿನ ಚೀತಾಗಳ ಭವಿಷ್ಯ ಏನಾಗುತ್ತದೆ ಎಂಬುದನ್ನು ಕಾದು ನೋಡಬೇಕು ಎಂದು ಹಿರಿಯ ಅರಣ್ಯ ಇಲಾಖೆ ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ತಜ್ಞರು ಕೂಡ ಇದೇ ಅಭಿಪ್ರಾಯವನ್ನು ಹೊಂದಿದ್ದಾರೆ ಮತ್ತು ಇಲ್ಲಿನ ಪ್ರದೇಶಗಳು ಈಗ ಸಿಂಹಗಳು, ಹುಲಿಗಳು ಮತ್ತು ಚಿರತೆಗಳಿಗೆ ನೆಲೆಯಾಗಿದೆ ಮತ್ತು ಈ ಹೊಸ ಚೀತಾ ಪ್ರಯೋಗವು ಹಾನಿಕಾರಕವಾಗಬಹುದು ಎಂದು ಹೇಳಿದ್ದಾರೆ.

ದೀಪಾಲಂಕಾರ ಕಾರ್ಯ

ತ್ವರಿತವಾಗಿ ನಡೆಯುತ್ತಿದ್ದು, ಸಂಜೆ ವೇಳೆ ಪ್ರಾಯೋಗಿಕವಾಗಿ ಪರೀಕ್ಷಿಸಲಾಗುತ್ತಿದೆ. ಈ ಬಾರಿ ವಿವಿಧೆಡೆ ಸಂಸತ್ ಭವನದ ಮಾದರಿ ದೀಪಗಳನ್ನು ಪವರ್‌ಸ್ಟಾರ್ ಪುನೀತ್ ರಾಜಕುಮಾರ್ ಆಕೃತಿ, ಎಲ್‌ಐಸಿ ವೃತ್ತದಲ್ಲಿ ರಾಷ್ಟ್ರ ಲಾಂಛನ, ರಾಷ್ಟ್ರಧ್ವಜ, ಪ್ರಾಣಿ, ಪಕ್ಷಿಗಳ ಮಾದರಿ ಅಳವಡಿಸಲಾಗುತ್ತಿದೆ. ಕನ್ನಡದ ಜ್ಞಾನಪೀಠ ಪುರಸ್ಕೃತರ ಆಕೃತಿ, ಮೈಸೂರು ಮಹಾರಾಜರು, ಕೆಂಪುಕೋಟೆ ಸೇರಿದಂತೆ ಇನ್ನಿತರ ಆಕೃತಿಗಳನ್ನು ತ್ರಿಡಿ ವ್ಯವಸ್ಥೆಯೊಳಗೆ ಮೂಡಿ ಬರಲಿವೆ ಹಾಗೂ ನವರಾತ್ರಿ ವೇಳೆ ಮೈಸೂರಿನ 96 ವೃತ್ತಗಳು ಬಣ್ಣ ಬಣ್ಣದ ದೀಪಾಲಂಕಾರದಿಂದ ಕಂಗೊಳಿಸಲಿವೆ.

ಸೆ.23ರಿಂದ ಪ್ರಾಯೋಗಿಕ ಪರೀಕ್ಷೆ: ನಗರದಾದ್ಯಂತ ಈಗಾಗಲೇ ಅಳವಡಿಸಿರುವ ವಿದ್ಯುತ್ ದೀಪಗಳನ್ನು ಗುತ್ತಿಗೆದಾರರು ಪ್ರತಿದಿನ ಸಂಜೆ ಚಾಲನೆ ಮಾಡಿ ಪ್ರಾಯೋಗಿಕ ಪರೀಕ್ಷೆ ಮಾಡುತ್ತಿದ್ದಾರೆ. ಆದರೆ, ಅಂತಿಮವಾಗಿ ಸೆಪ್ಟೆಂಬರ್ 23ರಿಂದ 25ವರೆಗೂ ಎರಡು ದಿನಗಳ ಕಾಲ ಚೆಸ್ಕಾಂ ವತಿಯಿಂದ ಪ್ರಾಯೋಗಿಕ ಪರೀಕ್ಷೆ ಮಾಡಿ ಏನಾದರೂ ದೋಷಗಳು ಕಂಡು ಬಂದಲ್ಲಿ ಸರಿಪಡಿಸುತ್ತಾರೆ.

ಜನರ ಪರವಾಗಿಯೇ ಹೊರತು ಸ್ವಾರ್ಥಕ್ಕಲ್ಲ

ಸರ್ಕಾರದಲ್ಲಿ ಯುವಕರಿಗೆ ಉದ್ಯೋಗವಿಲ್ಲ. ಉದ್ಯೋಗ ಪಡೆಯಲು ಲಂಚ ನೀಡಬೇಕಾದ ಪರಿಸ್ಥಿತಿ. ಬೆಲೆ ಏರಿಕೆ ಸಾಮಾನ್ಯ ಜನರು ಬದುಕು ಕಷ್ಟವಾಗಿದೆ ಇಂತಹ ಭ್ರಷ್ಟ, ಜನವಿರೋಧಿ ಸರ್ಕಾರದ ಬಗ್ಗೆ ಪಾದಯಾತ್ರೆ ಮೂಲಕ ರಾಹುಲ್ ಗಾಂಧಿ ಜನಜಾಗೃತಿಗೆ ಮುಂದಾಗಿದ್ದಾರೆ ಎಂದು ತಿಳಿಸಿದರು.

ಮುಂದಿನ ಆರು ತಿಂಗಳಲ್ಲಿ ರಾಜ್ಯ ವಿಧಾನಸಭಾ ಚುನಾವಣೆ ಬರಲಿದ್ದು, ಈ ಪಾದಯಾತ್ರೆ ನಮಗೆ ರಾಜಕೀಯ ಲಾಭ ತರಲಿದೆ. ಹಾಗಾಗಿ ರಾಹುಲ್‌ಗಾಂಧಿ ಪಾದಯಾತ್ರೆ ಮೈಸೂರು ಮತ್ತು ಚಾಮರಾಜನಗರ ಜಿಲ್ಲೆಗಳಿಗೆ ಬಂದಾಗ ಹೆಚ್ಚು ಜನರನ್ನು ಸೇರಿಸಬೇಕು. ಪ್ರತಿಯೊಬ್ಬ ಹಾಲಿ, ಮಾಜಿ ಶಾಸಕರು ಕನಿಷ್ಟ 5 ಸಾವಿರ ಜನರನ್ನು ಕರೆತರಲು ತಿಳಿಸಲಾಗಿದೆ ಎಂದು ಹೇಳಿದರು.

ಸಂವಿಧಾನ ವಿರೋಧ ಮತಾಂತರ ನಿಷೇಧ ಕಾಯ್ದೆ: ವಿಧಾನ ಪರಿಷತ್ತಿನಲ್ಲಿ ಪಾಸಾದ ಮತಾಂತರ ನಿಷೇಧ ಮಸೂದೆ ಸಂವಿಧಾನ ವಿರೋಧಿಯಾಗಿದೆ. ಆರ್ಟಿಕಲ್ 25 ಯಾವುದೇ ಧರ್ಮ ಪಾಲನೆ ಮಾಡುವ ಹಕ್ಕನ್ನು ಕೊಟ್ಟಿದೆ. ಅದರ ಉಲ್ಲಂಘನೆ ಮಾಡಲಾಗಿದೆ. ಅಲ್ಪಸಂಖ್ಯಾತರನ್ನು ಗುರಿಯಾಗಿಸಿಕೊಂಡು ಈ ಕಾನೂನು ತರಲಾಗುತ್ತಿದೆ ಎಂದು ಸಿದ್ದರಾಮಯ್ಯ ಆಕ್ರೋಶ ವ್ಯಕ್ತಪಡಿಸಿದರು.

ಎಐಸಿಸಿ ಉಸ್ತುವಾರಿ ಕಾರ್ಯದರ್ಶಿ ಜಾನ್ ರೋಸಿ, ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್, ಕೆಪಿಸಿಸಿ ಮಹಿಳಾ ಘಟಕದ ಅಧ್ಯಕ್ಷೆ ಡಾ.ಪುಷ್ಪಾ ಅಮರನಾಥ್, ಮಾಜಿ ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ತನ್ವೀರ್‌ಸೇಠ್, ಶಾಸಕರಾದ ಡಾ.ಯತೀಂದ್ರ ಸಿದ್ದರಾಮಯ್ಯ, ಹೆಚ್.ಪಿ.ಮಂಜುನಾಥ್, ಅನಿಲ್ ಚಿಕ್ಕಮಾದು, ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಮಾಜಿ ಸಂಸದ ಕಾಗಲವಾಡಿ ಶಿವಣ್ಣ, ಮಾಜಿ ಶಾಸಕರಾದ ಎಂ.ಕೆ.ಸೋಮಶೇಖರ್, ವಾಸು, ಕಳಲೆ ಕೇಶವಮೂರ್ತಿ, ಆರ್.ಧರ್ಮಸೇನಾ, ಮುಖಂಡರಾದ ರವಿಶಂಕರ್, ಚಂದ್ರಮೌಳಿ, ಕೆ.ಮರೀಗೌಡ, ಎಂ.ಲಕ್ಷ್ಮಣ್, ಮಂಜುಳಾ ಮಾನಸ, ಬಿ.ಎಂ.ರಾಮು ಇನ್ನಿತರರು ಉಪಸ್ಥಿತರಿದ್ದರು.

ಕೃಷ್ಣರಾಜ ಕ್ಷೇತ್ರ 'ಮೋದಿ ಯುಗ ಉತ್ಸವ' ಕಾರ್ಯಕ್ರಮಕ್ಕೆ ಚಾಲನೆ

ಶೀಘ್ರದಲ್ಲೇ ಮೈಸೂರಲ್ಲಿ ಸಾವಿರ ವಿದ್ಯಾರ್ಥಿಗಳಿಗಾಗಿ ದೀನ್ ದಯಾಳ್ ಉಪಾಧ್ಯಾಯ ಹಾಸ್ಟೆಲ್ ಆರಂಭ

— ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ —



ಮೈಸೂರಿನಲ್ಲಿ ಪ್ರಧಾನಿ ಮೋದಿಯವರ ಜನ್ಮದಿನದ ಅಂಗವಾಗಿ ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಭಾನುವಾರ ಆಯೋಜಿಸಲಾದ 'ಮೋದಿ ಯುಗ ಉತ್ಸವ'ದ 2ನೇ ದಿನದ ಕಾರ್ಯಕ್ರಮಕ್ಕೆ ಸಮಾಜ ಕಲ್ಯಾಣ ಸಚಿವ ಕೋಟಾ ಶ್ರೀನಿವಾಸ ಪೂಜಾರಿ ಚಾಲನೆ ನೀಡಿದರು. ಚಿತ್ರದಲ್ಲಿ ಕಾರ್ಪೋರೇಟರ್‌ಗಳಾದ ಶಾಂತಮ್ಮ ವಡಿವೇಲು, ಶಾರದಮ್ಮ, ಬಿಜೆಪಿ ಕೆ.ಆರ್.ಕ್ಷೇತ್ರ ಅಧ್ಯಕ್ಷ ಎಂ.ವಡಿವೇಲು ಇನ್ನಿತರರನ್ನು ಕಾಣಬಹುದು.

ಮೈಸೂರು, ಸೆ.18(ಆರ್‌ಕೆಬಿ)– ಹಿಂದುಳಿದ ಸಮುದಾಯಗಳ ಸಾವಿರಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ವಸತಿ ಕಲ್ಪಿಸಲು ದೀನ್ ದಯಾಳ್ ಉಪಾಧ್ಯಾಯ ಹಾಸ್ಟೆಲ್ ಶೀಘ್ರದಲ್ಲೇ ಮೈಸೂರಿಗೆ ಬರಲಿದೆ ಎಂದು ಸಮಾಜ ಕಲ್ಯಾಣ ಸಚಿವ ಕೋಟ ಶ್ರೀನಿವಾಸ ಪೂಜಾರಿ ತಿಳಿಸಿದರು.

ಮೈಸೂರಿನ ವಿದ್ಯಾರಣ್ಯಪುರಂನ ಶ್ರೀ ರಾಮಲಿಂಗೇಶ್ವರ ಉದ್ಯಾನವನದಲ್ಲಿ ಪ್ರಧಾನಿ ಮೋದಿಯವರ ಜನ್ಮದಿನದ ಅಂಗವಾಗಿ ಕೃಷ್ಣರಾಜ ಕ್ಷೇತ್ರದ ಶಾಸಕ ಎಸ್.ಎ.ರಾಮದಾಸ್ ನೇತೃತ್ವದಲ್ಲಿ ಭಾನುವಾರ ಆಯೋಜಿಸಲಾಗಿದ್ದ 9 ದಿನಗಳ 'ಮೋದಿ ಯುಗ ಉತ್ಸವ–2022' ಕಾರ್ಯಕ್ರಮದ 2ನೇ ದಿನದ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ರಾಜ್ಯದಲ್ಲಿ ಒಟ್ಟು 2239 ಬಿಸಿಎಂ ಹಾಸ್ಟೆಲ್, 1860 ಪರಿಶಿಷ್ಟ ಜಾತಿ ಹಾಸ್ಟೆಲ್, 830 ವಸತಿ ಶಾಲೆಗಳಿವೆ. ಆದರೂ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ಕೊರತೆ ಇದೆ. ಇದಕ್ಕಾಗಿಯೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಹೆಚ್ಚುವರಿ ಶೇ.25ರಷ್ಟು ಹಾಜರಾತಿ ನೀಡುವುದಕ್ಕೆ ಆದೇಶ ನೀಡಿದ್ದಾರೆ. ದೀನ ದಯಾಳ್ ಉಪಾಧ್ಯಾಯ ಅವರ ಹೆಸರಿನಲ್ಲಿ ಸಾವಿರಕ್ಕೂ ಹೆಚ್ಚಿನ ವಿದ್ಯಾರ್ಥಿಗಳಿಗೆ ಹಾಸ್ಟೆಲ್ ವ್ಯವಸ್ಥೆ ನೀಡುವುದಕ್ಕೆ ಸರ್ಕಾರ ಮುಂದಾಗಿದೆ. ಸ್ವಂತ ಕಟ್ಟಡ ದೊರೆಯದಿದ್ದರೂ ಬಾಡಿಗೆ ಕಟ್ಟಡದಲ್ಲಿ ಆರಂಭಿಸುವುದಕ್ಕೆ ನಿರ್ಧರಿಸಲಾಗಿದೆ ಎಂದರು.

ರಾಮದಾಸ್ ಅವರ ಅಭಿವೃದ್ಧಿ ಕಾರ್ಯ ಚಟುವಟಿಕೆಗಳನ್ನು ಶ್ಲಾಘಿಸಿದ ಅವರು, ಡಾ.ಬಿ.ಆರ್. ಅಂಬೇಡ್ಕರ್ ಅವರ ಸಂವಿಧಾನವು ಸಮಾಜದ ಕಟ್ಟಕಡೆಯ ವ್ಯಕ್ತಿಗೂ ಸರ್ಕಾರದ ಸವಲತ್ತುಗಳು ಮತ್ತು ಸೌಲಭ್ಯಗಳನ್ನು ತಲುಪಿಸುವಂತೆ ನೋಡಿಕೊಳ್ಳುವ ರೀತಿಯಲ್ಲಿ ಈ ಕಾರ್ಯಕ್ರಮವೂ ನಡೆದಿದೆ. ಪೌರಕಾರ್ಮಿಕರು, ಯುಜಿಡಿ ಕಾರ್ಮಿಕರಿಗಾಗಿ ಕೆಲಸ ಮಾಡುವುದು ಸಮಾಜಕ್ಕೆ ನಿಜವಾದ ಸೇವೆಯಾಗಿದೆ. ಬಡವರು ಮತ್ತು ದೀನದಲಿತರ ಸಬಲೀಕರಣಕ್ಕಾಗಿ ತಮ್ಮ ಇಲಾಖೆಯು ಕೆಲಸ ಮಾಡುತ್ತಿದೆ ಎಂದು ಪ್ರತಿಪಾದಿಸಿದರು.

ವಿದೇಶದಲ್ಲಿ ಭಾರತದ ಜನರನ್ನು ಕಡೆಗಣಿಸುತ್ತಿದ್ದ ಕಾಲವಿತ್ತು. ಆದರೆ ಇಂದು ಭಾರತದ ಯಾರೇ ಇರಲಿ ವಿದೇಶದಲ್ಲಿ ವಿಮಾನ ನಿಲ್ದಾಣದಲ್ಲಿ ಕಂಡರೆ ಮೋದಿ ಭಾರತದ ಜನ ಎಂದು ಗುರುತಿಸಿ ಗೌರವ ಸಿಗುತ್ತಿದೆ ಇದಕ್ಕೆ ಕಾರಣ ಮೋದಿ ಅವರ ವಿಶ್ವಮಾನ್ಯ ಕಾರ್ಯ ಎಂದರು.

ಭಾರತ ಬದಲಾಗುತ್ತಿದೆ. ರಾಜಕಾರಣದಲ್ಲೂ ಸಾಕಷ್ಟು ಬದಲಾವಣೆ ಕಾಣುತ್ತಿದ್ದೇವೆ. ಆದರೆ ನಾವು ಬದಲಾಗಬೇಕಿದೆ. ನಮ್ಮ ಆಚರಣೆಗಳು ಬದಲಾಗಬೇಕಿದೆ. ಬಡವರ ಮಕ್ಕಳು ವೈದ್ಯರು, ಇಂಜಿನಿಯರುಗಳು ಆಗುವುದನ್ನು ನಾವು ಕಾಣಬೇಕು. ಈ ನಿಟ್ಟಿನಲ್ಲಿ ರಾಮದಾಸ್ ಅವರ ಕಾರ್ಯ ಮೆಚ್ಚುವಂತದ್ದು. ಅವರ ಅಭಿವೃದ್ಧಿ ಪರ ಕಾರ್ಯಗಳು ರಾಜ್ಯದ ಎಲ್ಲಾ 224 ಶಾಸಕರಿಗೂ ಅನುಕರಣೀಯವಾಗಿದೆ ಎಂದು ಹೇಳಿದರು.

ಬಡವರು, ಮಹಿಳೆಯರು ಮತ್ತು ಇತರ ದುರ್ಬಲ ವರ್ಗಗಳ ಪ್ರಯೋಜನ ಮತ್ತು ಉನ್ನತಿ ಮತ್ತು ಸಬಲೀಕರಣಕ್ಕಾಗಿ ಪ್ರಧಾನಿ ಮೋದಿಯವರ ಉಪಕ್ರಮಗಳನ್ನು ಫಲಾನುಭವಿಗಳ ಮನೆ ಬಾಗಿಲಿಗೆ ತಲುಪಿಸುವಲ್ಲಿ ರಾಮದಾಸ್ ಅವರ ಪ್ರಯತ್ನಗಳು ಶ್ಲಾಘನೀಯ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಶಾಸಕ ರಾಮದಾಸ್, ಮೋದಿ ಯುಗ ಉತ್ಸವ ಸಂದರ್ಭದಲ್ಲಿ ಅಗತ್ಯ ಇರುವವರ ನೋಂದಣಿ ಮಾಡಿಕೊಂಡು ಅವರಿಗೆ ಕೌಶಲ್ಯ ತರಬೇತಿ ನೀಡಿ, ಅವರನ್ನು ಉದ್ಯೋಗಿಗಳಾಗಿ ಮಾಡುವ ಯೋಜನೆ ಹಮ್ಮಿಕೊಂಡಿದ್ದೇವೆ. ಭವಿಷ್ಯದ ಮಕ್ಕಳಿಗಾಗಿ 4 ಕೋಟಿ ರೂ. ವೆಚ್ಚದಲ್ಲಿ ಬೃಹತ್ ಗ್ರಂಥಾಲಯ ನಿರ್ಮಿಸುವ ಉದ್ದೇಶವನ್ನೂ ಹೊಂದಿದ್ದೇವೆ ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ಎಸ್‌ಸಿ–ಎಸ್‌ಟಿ ಕಲ್ಯಾಣ ಕಾರ್ಯಕ್ರಮಗಳ ಅಡಿಯಲ್ಲಿ ವಿವಿಧ ಯೋಜನೆಗಳ ಫಲಾನುಭವಿಗಳಿಗೆ ಸವಲತ್ತುಗಳನ್ನು ಸಚಿವ ಕೋಟ ಶ್ರೀನಿವಾಸ ಪೂಜಾರಿ ವಿತರಿಸಿದರು. ಕಾರ್ಯಕ್ರಮದಲ್ಲಿ ನಗರಪಾಲಿಕೆ ಸದಸ್ಯರಾದ ಶಾಂತಮ್ಮ ವಡಿವೇಲು, ಶಾರದಮ್ಮ, ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಮಗದ ಜಿಲ್ಲಾ ವ್ಯವಸ್ಥಾಪಕಿ ಪ್ರತಿಮಾ, ಕರ್ನಾಟಕ ಆದಿಜಾಂಬವ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ಮುನಿರಾಜು, ಸಮಾಜ ಕಲ್ಯಾಣ ಇಲಾಖೆಯ ಜಂಟಿ ನಿರ್ದೇಶಕಿ ಮಾಲತಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಜಿಲ್ಲಾ ಅಧಿಕಾರಿ ಜಿ.ಆರ್. ಮಹೇಶ್, ಡಿ.ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕಿ ಹೆಚ್.ಎ.ಶೋಭಾ ಇನ್ನಿತರರು ಉಪಸ್ಥಿತರಿದ್ದರು.

ಪ್ಲಾಸ್ಟಿಕ್ ಮುಕ್ತ ಮೈಸೂರು: ಮನೆ ಮನೆಗೆ ತೆರಳಿ ಬಟ್ಟೆ ಬ್ಯಾಗ್ ವಿತರಿಸಿ ಜಾಗೃತಿ ಜಾಥಾ



ಮೈಸೂರು, ಸೆ.18(ಆರ್‌ಕೆಬಿ)– ಮೈಸೂರನ್ನು ಪ್ಲಾಸ್ಟಿಕ್ ಮುಕ್ತಗೊಳಿಸುವ ನಿಟ್ಟಿನಲ್ಲಿ ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಹಾಗೂ ವಿದ್ಯಾರಣ್ಯ ಕೋಚಿಂಗ್ ಸೆಂಟರ್ ವತಿಯಿಂದ ಭಾನುವಾರ ಮೈಸೂರಿನ ಚಾಮುಂಡಿಪುರಂ ಸುತ್ತಮುತ್ತ ಪ್ಲಾಸ್ಟಿಕ್ ಮುಕ್ತ ಜಾಗೃತಿ ಜಾಥಾ ನಡೆಸಲಾಯಿತು.

ಈ ಸಂದರ್ಭದಲ್ಲಿ ಶಾಲಾ ಮಕ್ಕಳು ಪರಿಸರ ವಿರೋಧಿ ಪ್ಲಾಸ್ಟಿಕ್‌ನಿಂದಾಗುವ ಹಾನಿ ಕುರಿತ ಕರಪತ್ರ ಹಿಡಿದು ಜಾಥಾದಲ್ಲಿ ಭಾಗವಹಿಸಿದ್ದರು. ಪ್ಲಾಸ್ಟಿಕ್ ತ್ಯಜಿಸಿ, ಪರಿಸರ ಸಂರಕ್ಷಿಸಿ, ಪ್ಲಾಸ್ಟಿಕ್ ಮುಕ್ತ ಪರಿಸರ ನಮ್ಮ ಹೊಣೆ ಇತ್ಯಾದಿ ಘೋಷಣೆಗಳನ್ನು ಕೂಗಿದರು. ಮನೆ ಮನೆಗೆ ತೆರಳಿ ಬಟ್ಟೆ ಬ್ಯಾಗ್ ಬಳಸುವಂತೆ ಜಾಗೃತಿ ಮೂಡಿಸಿದರು.

ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅವರು ಜಾಥಾಕ್ಕೆ ಚಾಲನೆ ನೀಡಿ ಮಾತನಾಡಿ, ಪ್ರತಿಯೊಬ್ಬರೂ ಪ್ಲಾಸ್ಟಿಕ್ ಬಳಕೆ ನಿಲ್ಲಿಸದ ಹೊರತು ಮೈಸೂರನ್ನು ಪ್ಲಾಸ್ಟಿಕ್ ಮುಕ್ತಗೊಳಿಸಲಾಗದು. ಹಾಗಾಗಿ ಪ್ರತಿಯೊಂದು ಮನೆಯಲ್ಲೂ ಈ ಬಗ್ಗೆ ಅರಿವು ಮೂಡ ಬೇಕು. ಪ್ಲಾಸ್ಟಿಕ್ ಬಳಕೆ ನಿಲ್ಲಿಸುವ ಪಣ ತೊಡಬೇಕು. ಮಾರುಕಟ್ಟೆಯಲ್ಲಿ ಪ್ಲಾಸ್ಟಿಕ್ ಬ್ಯಾಗ್‌ಗಳನ್ನೇ ನಂಬಿ ಹೋಗಬಾರದು. ಖರೀದಿಗೆ ಹೋಗುವ ಮೊದಲೇ ಬಟ್ಟೆ ಬ್ಯಾಗ್ ಕೊಂಡೊಯ್ಯಬೇಕು. ಹೀಗಾದರೆ ಮಾತ್ರ ಪರಿಸರ ಸಂರಕ್ಷಣೆ ಮತ್ತು ನಮ್ಮ ಆರೋಗ್ಯ ಕಾಪಾಡಿಕೊಳ್ಳಲು ಸಾಧ್ಯ ಎಂದು ಹೇಳಿದರು.

ನಂತರ ಮಾತನಾಡಿದ ನಗರಪಾಲಿಕೆ ಸದಸ್ಯ ಮಾ.ವಿ.ರಾಮಪ್ರಸಾದ್, ಪರಿಸರ ಸಂರಕ್ಷಣೆ ಮೂಲ ಕರ್ತವ್ಯವಾಗಬೇಕು. ನಮ್ಮ ಹಿಂದಿನ ಪೀಳಿಗೆ ಕೊಟ್ಟ ಪರಿಸರವನ್ನು ಶುದ್ಧವಾಗಿ ಕಾಪಾಡಿಕೊಂಡು ಮುಂದಿನ ಪೀಳಿಗೆಗೆ ನೀಡಬೇಕು. ಪರಿಸರ ಕಾಪಾಡುವುದು ಪ್ರತಿಯೊಬ್ಬರ ಹೊಣೆ ಎಂದರು.

ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಅಧ್ಯಕ್ಷ ರವಿಶಂಕರ್ ಮಾತನಾಡಿ, ಎಲ್ಲೆಂದರಲ್ಲಿ ಬಿಸಾಡುವ ಪ್ಲಾಸ್ಟಿಕ್ ಪ್ರಾಣಿಗಳ ಹೊಟ್ಟೆ ಸೇರಿ ಅವುಗಳ ಜೀವಕ್ಕೂ ಅಪಾಯವಾಗುತ್ತಿದೆ. ಈ ಬಗ್ಗೆ ಮುನ್ನೆಚ್ಚರಿಕೆ ವಹಿಸಬೇಕು. ಗ್ರಾಮೀಣ ಪ್ರದೇಶಗಳಲ್ಲಿ ಪ್ಲಾಸ್ಟಿಕ್ ಬಳಕೆ ನಿಯಂತ್ರಿಸಲು ಜಾಗೃತಿ ಮೂಡಿಸಬೇಕು ಎಂದು ತಿಳಿಸಿದರು.

ಅಖಿಲ ಭಾರತೀಯ ಗ್ರಾಹಕ ಪಂಚಾಯತ್ ಮೈಸೂರು ಘಟಕದ ಸಂಘಟನಾ ಕಾರ್ಯದರ್ಶಿ ವಿಕ್ರಂ ಅಯ್ಯಂಗಾರ್, ಸಾಮಾಜಿಕ ಹೋರಾಟಗಾರ ಅಜಯ್ ಶಾಸ್ತ್ರಿ, ಮೈಸೂರು ರಕ್ಷಣಾ ವೇದಿಕೆಯ ಕಾರ್ಯದರ್ಶಿ ರಾಕೇಶ್ ಭಟ್, ಮುಖಂಡರಾದ ಅನಿಲ್ ಕುಮಾರ್, ಅಪೂರ್ವ ಸುರೇಶ್, ಆನಂದ್, ಶಿಕ್ಷಕ ಚಂದ್ರಶೇಖರ್, ಮಲ್ಲಿಕಾರ್ಜುನ, ರಾಕೇಶ್, ಮಂಜುನಾಥ್, ಸತೀಶ್, ಮಂಜುನಾಥ ಇನ್ನಿತರರು ಉಪಸ್ಥಿತರಿದ್ದರು.

ಸಾರಿಗೆ ಇಲಾಖೆಯಲ್ಲಿ ತೆರಿಗೆ ವಂಚನೆ ಪ್ರಕರಣ

ಸಿಐಡಿ ತನಿಖೆ: ಎಂಎಲ್‌ಸಿ ಸಿ.ಎನ್. ಮಂಜೇಗೌಡರಿಗೆ ಶ್ರೀರಾಮುಲು ಭರವಸೆ



ಬೆಂಗಳೂರು. ಸೆ.18– ಸಾರಿಗೆ ಇಲಾಖೆಯಲ್ಲಿ ನಡೆದಿರುವ ಐಷಾರಾಮಿ ಕಾರುಗಳ ತೆರಿಗೆ ವಂಚನೆ ಪ್ರಕರಣವನ್ನು ಅಧಿವೇಶನ ಮುಗಿಯುವುದರೊಳಗೆ ಸಿ.ಐ.ಡಿ.ಗೆ ವಹಿಸುವುದಾಗಿ ಸಾರಿಗೆ ಸಚಿವ ಶ್ರೀರಾಮುಲು ವಿಧಾನಪರಿಷತ್ ಸದಸ್ಯ ಸಿ.ಎನ್. ಮಂಜೇಗೌಡರಿಗೆ ಭರವಸೆ ನೀಡಿದರು.

ವಿಧಾನ ಪರಿಷತ್‌ನಲ್ಲಿ ಸಿ.ಎನ್. ಮಂಜೇಗೌಡರು ಮಾತನಾಡಿ, ಕಳೆದ ಮಾ. 25ರಂದು ವಿಧಾನ ಪರಿಷತ್ತಿನಲ್ಲಿ ಸಾರಿಗೆ ಇಲಾಖೆಯಲ್ಲಿ ತೆರಿಗೆ ವಂಚನೆ ಪ್ರಕರಣದ ಬಗ್ಗೆ ಚುಕ್ಕೆ ಗುರುತಿನ ಪ್ರಶ್ನೆ ಮೇಲೆ ಸರ್ಕಾರದ ಗಮನ ಸೆಳೆದಿದ್ದು ಸರಿಯಷ್ಟೆ ಆಗ ಸಾರಿಗೆ ಸಚಿವರಾದ ಶ್ರೀರಾಮುಲುರವರು ತಪ್ಪಿತಸ್ಥರ ಎರುದ್ಧ ಕ್ರಮ ಕೈಗೊಳ್ಳಲು ಪ್ರಕರಣವನ್ನು ಸಿ.ಐ.ಡಿ.ಗೆ ಒಪ್ಪಿಸುವ ಭರವಸೆ ನೀಡಿದ್ದರು. ಆದರೆ ಆರು ತಿಂಗಳಾದರೂ ಸಹ ಯಾವುದೇ ತನಿಖೆಗೆ ಒಳಪಡಿಸದೆ. ಇಲಾಖೆಯ ಅಧಿಕಾರಿಗಳಿಗೆ ಪತ್ರ ಬರೆದು ವರದಿ ಕೇಳಿರುವುದು ಕುರಿ ಕಾಯಲು ತೋಳ ನೇಮಿಸಿದಂತೆ ಆಗಿದೆ. ಈ ಹಗರಣದಲ್ಲಿ ಯಾವ ಅಧಿಕಾರಿಗಳು ಭಾಗಿಯಾಗಿದ್ದಾರೆಂದು ಸರ್ಕಾರಕ್ಕೆ ಗೊತ್ತಿದ್ದರೂ ಸಹ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಂಡಿಲ್ಲವೇಕೆ? ಗುತ್ತಿಗೆದಾರರಿಂದ ಶೇ.40 ಕಮೀಷನ್ ತೆಗೆದುಕೊಂಡಿದ್ದೀರಿ ಎಂದು ಹೇಳಿದರೆ ಸಾಕ್ಷಿ ಕೊಡಿ ಎನ್ನುತ್ತೀರಿ. ಈಗ ಸಾಕ್ಷಿ ಸಮೇತ ಕೊಟ್ಟರು ಏಕೆ ಕ್ರಮ ಕೈಗೊಂಡಿಲ್ಲ ಸರ್ಕಾರಕ್ಕೆ ಕೊಟ್ಯಾಂತರ ರೂ. ತೆರಿಗೆ ವಂಚಿಸಿರುವವರನ್ನು ಸರ್ಕಾರ ರಕ್ಷಿಸುತ್ತಿದೆಯೇ ಎಂಬ ಬಗ್ಗೆ ಅನುಮಾನ ಸಾರ್ವಜನಿಕರಲ್ಲಿ ಮೂಡುತ್ತಿದೆ. ಆದ್ದರಿಂದ ಈ ಪ್ರಕರಣವನ್ನು ಸಿ.ಐ.ಡಿ.ಗೆ. ವಹಿಸಬೇಕೆಂದು ಪಟ್ಟು ಹಿಡಿದಾಗ, ಸಾರಿಗೆ ಸಚಿವ ಶ್ರೀರಾಮುಲು ಉತ್ತರಿಸಿ ಈ ಅಧಿವೇಶನ ಮುಗಿಯುವುದರೊಳಗೆ ತೆರಿಗೆ ವಂಚನೆ ಪ್ರಕರಣವನ್ನು ಸಿ.ಐ.ಡಿ ತನಿಖೆಗೆ ವಹಿಸುವುದಾಗಿ ತಿಳಿಸಿದರು.



ಕನ್ನಡ ಪ್ರಭ ಮತ್ತು ಸುವರ್ಣ ನ್ಯೂಸ್ ಚಾನೆಲ್ ಬಿಸಿನೆಸ್ ಅವಾರ್ಡ್ ಪ್ರಶಸ್ತಿಗೆ ಭಾಜನರಾದ ಹೋಟೆಲ್ ಲೀ ರುಚಿ ದಿ ಪ್ರಿನ್ಸ್ ಮಾಲೀಕ ಹಾಗೂ ಉದ್ಯಮಿ ಬಿ.ಮಂಜುನಾಥ್ ಅವರನ್ನು ಕೆ.ಜಿ.ಕೊಪ್ಪಲು ಶ್ರೀ ಸಿದ್ದಪ್ಪಾಜಿ ದೇವಸ್ಥಾನದ ವತಿಯಿಂದ ಸನ್ಮಾನಿಸಲಾಯಿತು

ಸೆ.25ರಂದು ಡಾ. ಎಸ್.ಪಿ.ಬಾಲಬ್ರಹ್ಮಣ್ಯಂಗೆ ಗಾನಗೌರವ



ಮೈಸೂರು,ಸೆ.18(ಪಿಎಂ)– ಸಿರಿಗನ್ನಡ ವೇದಿಕೆ ರಾಜ್ಯ ಸಮಿತಿ, ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಜಂಟಿ ಆಶ್ರಯದಲ್ಲಿ ಸೆ.25ರಂದು ಗಾನಮಾಂತ್ರಿಕ ಡಾ.ಎಸ್.ಪಿ.ಬಾಲಬ್ರಹ್ಮಣ್ಯಂ ಅವರಿಗೆ ಗಾಯನದ ಮೂಲಕ ಗೌರವ ಸಮರ್ಪಿಸುವ ಗಾಯನ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ ಎಂದು ಗಾಯಕ ವೇದಾಂತ್ ಅತಿಶಯ್ ಜೈನ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಭಾನುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಂದು ಸಂಜೆ 4.30ಕ್ಕೆ ಜೆಎಲ್‌ಬಿ ರಸ್ತೆಯ ನಾದಬ್ರಹ್ಮ ಸಂಗೀತ ಸಭಾದಲ್ಲಿ ಕಾರ್ಯಕ್ರಮ ನಡೆಯಲಿದೆ. ಎಸ್.ಪಿ.ಬಾಲಸುಬ್ರಹ್ಮಣ್ಯಂ ಅವರು ಹಾಡದ ಹಾಡುಗಳಿಲ್ಲ. ಅವರು ಒಂದು ವಿವಿಯಂತೆಯೇ ಇದ್ದರು. ಹೀಗಾಗಿ ಅವರ 2ನೇ ವರ್ಷದ ಪುಣ್ಯಸ್ಮರಣೆ ಅಂಗವಾಗಿ ಈ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದರು.

25 ಹಾಡುಗಳನ್ನು ಸಾದರಪಡಿಸಲಿದ್ದು, ಇದಕ್ಕಾಗಿ ನಿರಂತರವಾಗಿ ಎರಡು ತಿಂಗಳಿಂದ ಅಭ್ಯಾಸ ನಡೆಸಲಾಗಿದೆ. ಸಾರ್ವಜನಿಕರಿಗೆ ಉಚಿತ ಪ್ರವೇಶವಿದೆ. ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್ ಉದ್ಘಾಟಿಸಲಿದ್ದು, ಅತಿಥಿಗಳಾಗಿ ಸಮಾಜ ಸೇವಕ ಡಾ.ಕೆ.ರಘುರಾಂ ವಾಜಪೇಯಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಎಸ್.ಟಿ.ರವಿಕುಮಾರ್ ಮತ್ತಿತರ ಗಣ್ಯರು ಪಾಲ್ಗೊಳ್ಳಲಿದ್ದಾರೆ ಎಂದು ತಿಳಿಸಿದರು. ಮೈಸೂರು ಸಾಹಿತ್ಯ ಮತ್ತು ಸಾಂಸ್ಕೃತಿಕ ಪ್ರತಿಷ್ಠಾನದ ಸಂಸ್ಥಾಪಕ ಅಧ್ಯಕ್ಷ ಎಂ.ಬಿ.ಸಂತೋಷ್, ಸಿರಿಗನ್ನಡ ವೇದಿಕೆ ರಾಜ್ಯಾಧ್ಯಕ್ಷೆ ಎ.ಹೇಮಗಂಗಾ, ಕಾರ್ಯಾಧ್ಯಕ್ಷೆ ಡಾ.ಸೌಗಂಧಿಕಾ ವಿ.ಜೋಯಿಸ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಎಲ್ಲೂ ಇಲ್ಲದ ಮೀಸಲಾತಿ ನಮ್ಮಲ್ಲಿ ಈಗಲೂ ಮುಂದುವರೆದಿದೆ

ಡಿಎನ್‌ಕೆ ಅವರ 'ಕರ್ಮಯೋಗಿ ಪುಸ್ತಕ ಬಿಡುಗಡೆ



ಮೈಸೂರು, ಸೆ.18(ಎಸ್‌ಪಿಎನ್)– ಜಗತ್ತಿನ ಯಾವ ದೇಶದಲ್ಲೂ ಮೀಸಲಾತಿ ಇಲ್ಲ. ಆದರೆ, ನಮ್ಮ ದೇಶದಲ್ಲಿ ಸ್ವಾತಂತ್ರ್ಯ ಬಂದ ನಂತರ ಅನೇಕ ಸಾಮಾಜಿಕ ಕಾರಣಗಳಿಗಾಗಿ ಮೀಸಲಾತಿ ಅಳವಡಿಸಲಾಗಿದ್ದು, ಅದು ಇನ್ನೂ ಮುಂದುವರೆದಿದೆ ಎಂದು ಹಿರಿಯ ಸಾಹಿತಿ ಡಾ.ಕಬ್ಬಿನಾಲೆ ವಸಂತ ಭಾರದ್ವಾಜ್ ತಿಳಿಸಿದ್ದಾರೆ.

ಮೈಸೂರು ಜೆಎಲ್‌ಬಿ ರಸ್ತೆಯಲ್ಲಿರುವ ದಿ ಇನ್‌ಸ್ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಡಿ.ಎನ್.ಕೆ ಸ್ನೇಹ ಬಳಗ ವತಿಯಿಂದ ಆಯೋಜಿಸಿದ್ದ ಸಮಾರಂಭದಲ್ಲಿ ಲೇಖಕ ಡಿ.ಎನ್.ಕೃಷ್ಣಮೂರ್ತಿ ರಚಿತ ಭಾರತರತ್ನ ಸರ್.ಎಂ.ವಿಶ್ವೇಶ್ವರಯ್ಯ ಅವರ ಜೀವನ ಚರಿತ್ರೆಯನ್ನೊಳಗೊಂಡ 'ಕರ್ಮಯೋಗಿ' ಪುಸ್ತಕ ಬಿಡುಗಡೆ ಹಾಗೂ ಡಿಎನ್‌ಕೆ 60ರ ಹೆಜ್ಜೆ: ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಮೈಸೂರು ಸಂಸ್ಥಾನದಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ಸಂದರ್ಭದಲ್ಲಿ ಮೀಸಲಾತಿ ವಿರೋಧಿಸಿ ತಮ್ಮ ದಿವಾನ್ ಪದವಿಗೆ ರಾಜೀನಾಮೆ ನೀಡಿದ್ದರು ಎಂಬುದು ಇಂದಿಗೂ ಒಂದು ಚರ್ಚಾ ವಿಷಯ. ಅದೇ ರೀತಿ ನಮ್ಮ ದೇಶದಿಂದ ಯುರೋಪ್ ಸೇರಿದಂತೆ ಜಗತ್ತಿನ ಮುಂದುವರೆದ ದೇಶಗಳಿಗೆ ಪ್ರತಿಭಾ ಪಲಾಯನವಾಗುತ್ತಿದೆ ಎಂಬುದು ಕೂಡ ಚರ್ಚಾ ವಿಷಯ. ಇದು ನಮ್ಮ ದೇಶದ ಅಭಿವೃದ್ಧಿಗೆ ಹಿನ್ನಡೆಯಲ್ಲವೆ? ಎಂದು ಪ್ರಶ್ನಿಸಿದರು.

ವಿಜ್ಞಾನ, ತಂತ್ರಜ್ಞಾನ, ವೈದ್ಯಕೀಯ, ಇಂಜಿನಿಯರ್ ಕ್ಷೇತ್ರ ಸೇರಿದಂತೆ ಇತರೆ ವಿಷಯದ ಪ್ರತಿಭೆಗಳು ಅಮೆರಿಕಾ ದೇಶಕ್ಕೆ ಪಲಾಯನವಾಗುತ್ತಿದೆ. ಏಕೆಂದರೆ, ನಮ್ಮ ದೇಶದಲ್ಲಿ ಆ ಪ್ರತಿಭೆಗಳಿಗೆ ಸಿಗಬೇಕಾದ ಗೌರವ, ಮನ್ನಣೆ ನಮ್ಮ ದೇಶದಲ್ಲಿ ಸಿಗುತ್ತಿಲ್ಲ. ಹಾಗಾಗಿ ಪ್ರತಿಭಾ ಪಲಾಯನವಾಗುತ್ತಿದೆ. ಇದು ಯಾರಿಗೆ ನಷ್ಟ ಎಂಬುದರ ಕುರಿತು ಚರ್ಚೆಯಾಗಬೇಕು ಎಂದರು.

ಸರ್.ಎಂ.ವಿಶ್ವೇಶ್ವರಯ್ಯನವರು ದಿವಾನರಾಗಿದ್ದ ವೇಳೆ ಒಮ್ಮೆ ವಿದೇಶಕ್ಕೆ ಹೋಗುವ ಸನ್ನಿವೇಶ ಬಂತು. ಇದರ ವೆಚ್ಚಕ್ಕಾಗಿ ಅವರೇ ಸ್ಥಾಪಿಸಿದ್ದ ಎಸ್‌ಬಿಎಂ ಬ್ಯಾಂಕ್‌ನಲ್ಲಿ ಸಾಲಕ್ಕೆ ಅರ್ಜಿ ಹಾಕಿದ್ದರು. ಅವರಿಗೆ ಎಸ್‌ಬಿಎಂ ಬ್ಯಾಂಕ್‌ನವರು ವಿಧಿಸಿದ್ದ ಶೇ.3.5 ರಷ್ಟು ಬಡ್ಡಿ ವಿಚಾರವನ್ನು ಗಮನಿಸಿ, ಬ್ಯಾಂಕ್ ವ್ಯವ ಸ್ಥಾಪಕರೊಂದಿಗೆ ಮಾತುಕತೆ ನಡೆಸಿ, ಜನಸಾಮಾನ್ಯರಿಗೆ ವಿಧಿಸುವ ಬಡ್ಡಿದರವನ್ನೇ ವಿಧಿಸುವಂತೆ ಮನವಿ ಮಾಡಿದ್ದ ಪ್ರಸಂಗ. ಇಂದಿನ ಪೀಳಿಗೆಗೆ ಆದರ್ಶವಾಗಬೇಕು ಎಂದು ತಿಳಿಸಿದರು,

ಸರ್.ಎಂ.ವಿ ಅವರು ಬ್ರಾಹ್ಮಣ ಸಮುದಾಯದಲ್ಲಿ ಜನಿಸಿದರೂ ಎಂದಿಗೂ ದೈವಕ್ಕೆ ಶರಣಾಗಲಿಲ್ಲ, ಬ್ರಾಹ್ಮಣ್ಯಕ್ಕೆ ಮೊರೆ ಹೋಗಲಿಲ್ಲ ಅಥವಾ ಬೇರೆಯವರಂತೆ ಯಾವ ಲಾಬಿಗೂ ಮಣಿಯಲಿಲ್ಲ. ಪದವಿಯಲ್ಲಿದ್ದಾಗ ಅವರು, ಹೇಳುತ್ತಿದ್ದ ಮಾತು ಇಂತಿದೆ. 'ಉಸಿರು ನಿಲ್ಲುವವರೆಗೂ ದುಡಿಯಬೇಕು. 'ಪ್ರತಿಯೊಬ್ಬರ ಯಶಸ್ಸು ಅವರ ಪ್ರಯತ್ನವನ್ನು ಅವಲಂಬಿಸಿರುತ್ತದೆ' ಎನ್ನುತ್ತಿದ್ದರು ಎಂದರು.

ಸರ್ ಎಂ.ವಿ ಅವರು ಕೆಆರ್‌ಎಸ್ ಅಣೆಕಟ್ಟು, ಹೈದರಾಬಾದಿನಲ್ಲಿ ಸಂಭವಿಸಿದ್ದ ಜಲಪ್ರಳಯ ತಗ್ಗಿಸಿದ್ದು, ಆಡಳಿತದಲ್ಲಿ ಕರ್ತವ್ಯ ನಿಷ್ಠೆ, ಗಣ್ಯರು ಮತ್ತು ಜನಸಾಮಾನ್ಯರ ನಡುವೆ ಸಮಾನತೆ ಮೂಡಿಸಿದ್ದು, ಇದು ಅವರ ಆಡಳಿತ ವೈಖರಿಗೆ ಹಿಡಿದ ಕೈಗನ್ನಡಿ. ಸರ್ ಎಂ.ವಿ ಅವರು ತಮ್ಮ ಜೀವಿತಾವಧಿಯ ಕೊನೆಯವರಿಗೂ ದುಡಿಮೆಗೆ ಹೆಚ್ಚಿನ ಪ್ರಾಧಾನ್ಯತೆ ನೀಡಿದ್ದ ಪ್ರಸಂಗವನ್ನು ವಿವರಿಸಿದರು.

'ಕರ್ಮಯೋಗಿ' ಪುಸ್ತಕದಲ್ಲಿ ಸರ್.ಎಂ. ವಿಶ್ವೇಶ್ವರಯ್ಯನವರ ಜನನ, ಬಾಲ್ಯ, ಶಿಕ್ಷಣ ಮತ್ತು ವೈವಾಹಿಕ ಜೀವನ, ವೃತ್ತಿ ಜೀವನ, ವೃತ್ತಿಯಲ್ಲಿ ಯಶಸ್ಸಿನ ದಾರಿ, ಹೈದರಾಬಾದ್ ಪುನರ್‌ನಿರ್ಮಾಣ, ಕೆಆರ್‌ಎಸ್ ನಿರ್ಮಾಣ, ಮೈಸೂರಿನ ದಿವಾನರಾಗಿ ಆದರ್ಶ ಜೀವನ, ಶಿಕ್ಷಣ ಕ್ಷೇತ್ರಕ್ಕೆ ಸಲ್ಲಿಸಿದ ಕೊಡುಗೆಗಳು, ಭದ್ರಾವತಿ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆ, ರೈಲು ಮತ್ತು ಬಂದರು, ಪತ್ರಿಕಾ ಸ್ವಾತಂತ್ರ್ಯ ಮತ್ತಿತರ ಸುಧಾರಣಾ ಕಾರ್ಯಗಳು, ಇತರೆ ವಿಶೇಷ ಸಮಿತಿಗಳಲ್ಲಿ ಜವಾಬ್ದಾರಿ ನಿರ್ವಹಣೆ, ರಾಜಕೀಯ ಹಾಗೂ ಇನ್ನಿತರೆ ಸಮಾವೇಶಗಳಲ್ಲಿ, ವಿದೇಶ ಪ್ರವಾಸ, ಗಾಂಧೀಜಿ ಮತ್ತು ಸರ್ ಎಂ.ವಿ ಸಮಕಾಲೀನ ಆದರ್ಶಪುರುಷರು, ದೂರದೃಷ್ಟಿಯ ಯೋಚನಾ ಲಹರಿ, ಸಮಗ್ರ ರಾಷ್ಟ್ರ ಚಿಂತನೆ ಸೇರಿದಂತೆ ಲೇಖನಗಳನ್ನ ಕಾಣಬಹುದು, ಈ ಪುಸ್ತಕಕ್ಕೆ ಮುನ್ನುಡಿ ಡಾ.ಕಬ್ಬಿನಾಲೆ ವಸಂತಕುಮಾರ್ ಬರೆದಿದ್ದು, ಹಿರಿಯ ಬರಹಗಾರ ಬನ್ನೂರ ಕೆ.ರಾಜು ಅವರು ಲೇಖಕ ಹಾಗೂ ಪುಸ್ತಕ ಕುರಿತು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಈ ವೇಳೆ ಹಿರಿಯ ಸಾಹಿತಿ ಡಾ.ಸಿ.ಪಿ.ಕೃಷ್ಣಮೂರ್ತಿ 'ಕರ್ಮಯೋಗಿ' ಪ್ರಥಮ ಪುಸ್ತಕವನ್ನು ಸ್ವೀಕರಿಸಿ ಮಾತನಾಡಿದರು. ಈ ಸಂದರ್ಭದಲ್ಲಿ ಮಾಜಿ ಸಿ.ಎಚ್.ವಿಜಯ್ ಶಂಕರ್, ಬಿಜೆಪಿ ನಗರ ಘಟಕದ ಅಧ್ಯಕ್ಷ ಶ್ರೀವತ್ಸ, ಬಿಜೆಪಿ ಮುಖಂಡ ಗೋಪಾಲ್‌ರಾವ್, ಹಿರಿಯ ಸಾಹಿತಿ ಬನ್ನೂರು ಕೆ.ರಾಜು ಸೇರಿದಂತೆ ಇತರರಿದ್ದರು. ಈ ವೇಳೆ ಹಿರಿಯ ಸಾಹಿತಿ ಡಿ.ಎನ್.ಕೃಷ್ಣಮೂರ್ತಿ ದಂಪತಿಯನ್ನು ಅಭಿನಂದಿಸಲಾಯಿತು.

ಹಾಲಿಗೆ ಬೆಂಬಲ ಬೆಲೆ ನೀಡದಿದ್ದರೆ ಪ್ರತಿಭಟನೆ; ಎಚ್ಚರಿಕೆ

ಮೈಮುಲ್ ನಿರ್ದೇಶಕ ಆರ್.ಚೆಲುವರಾಜು



ತಿ.ನರಸೀಪುರ, ಸೆ.18– ರೈತರು ಉತ್ಪಾದಿಸುವ ಹಾಲಿಗೆ ಹೆಚ್ಚಿನ ಬೆಂಬಲ ಬೆಲೆ ನೀಡದ ರಾಜ್ಯ ಸರ್ಕಾರದ ನಿಲುವು ಖಂಡಿಸಿ ಹಾಲು ಉತ್ಪಾದಕರು ಪ್ರತಿಭಟನೆ ಮಾಡುವ ಮೂಲಕ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡಬೇಕಿದೆ ಎಂದು ಮೈಮುಲ್ ನಿರ್ದೇಶಕ ಆರ್.ಚೆಲುವರಾಜು ಹಾಲು ಉತ್ಪಾದಕರಿಗೆ ಕರೆ ನೀಡಿದರು.

ತಾಲೂಕಿನ ಅತ್ತಹಳ್ಳಿ ಗ್ರಾಮದ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ನಡೆದ ಸಂಘದ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆ ಉದ್ಘಾಟಿಸಿ ಅವರು ಮಾತನಾಡಿದರು.

4 ವರ್ಷಗಳಿಂದೀಚೆಗೆ ಹಾಲಿನ ದರದಲ್ಲಿ ವ್ಯತ್ಯಾಸ ಕಂಡು ಬರುತ್ತಿದೆ. ಒಕ್ಕೂಟದಿಂದ ಮಾರಾಟ ಮಾಡುವ ಹಾಲಿನ ದರ ಜಾಸ್ತಿ ಮಾಡದಿರುವುದೇ ವ್ಯತ್ಯಾಸಕ್ಕೆ ಕಾರಣ. ಹಾಲಿನ ದರ ಹೆಚ್ಚಿಸುವ ಅಧಿಕಾರ ಕೆಎಂಎಫ್ ಅಥವಾ ಒಕ್ಕೂಟಕ್ಕಾಗಲೀ ಇಲ್ಲ. ಸರ್ಕಾರದ ಅನುಮತಿ ಪಡೆದು ಜಾಸ್ತಿ ಮಾಡಬಹುದಾಗಿದೆ. ಆದರೆ ಸರ್ಕಾರ ಬೆಲೆ ಹೆಚ್ಚಿಸಲು ಮೀನಾಮೇಷ ಎಣಿಸುತ್ತಿದೆ. ಹಾಗಾಗಿ ರೈತರು ತಾವು ಸರಬರಾಜು ಮಾಡುವ ಹಾಲಿಗೆ ಬೆಂಬಲ ಬೆಲೆ ಪಡೆಯಲು ಸರ್ಕಾರವನ್ನು ಪ್ರಶ್ನಿಸುವ ಮನೋಭಾವ ಬೆಳೆಸಿಕೊಳ್ಳಬೇಕು. ಸರ್ಕಾರದ ನಡೆ ಖಂಡಿಸಿ ಜಾಗೃತಿ ಮೂಡಿಸಲು ಮುಂದಿನ ದಿನಗಳಲ್ಲಿ ತಾಲೂಕಿನಾದ್ಯಂತ ಉತ್ಪಾದಕರ ಸಮಾವೇಶ ಮಾಡಲು ನಿರ್ಧರಿಸಿದ್ದು, ಸಹಕಾರಿಗಳೆಲ್ಲರೂ ಸಮಾವೇಶದಲ್ಲಿ ಭಾಗವಹಿಸಿ ತಮ್ಮ ಹಕ್ಕಿಗೆ ಹೋರಾಡುವಂತೆ ಮನವಿ ಮಾಡಿದರು.

ಸಂಘದ ವಾರ್ಷಿಕ ವರದಿ ಮಂಡಿಸಿ ಮಾತನಾಡಿದ ಜಿಲ್ಲಾ ಹಾಲು ಒಕ್ಕೂಟದ ಉಪ ವ್ಯವಸ್ಥಾಪಕ ಆರ್.ಪ್ರಮೋದ್, ಪ್ರಸಕ್ತ ಸಾಲಿನಲ್ಲಿ ಸಂಘವು 4,01,573 ರೂ. ನಿವ್ವಳ ಗಳಿಸಿದೆ. 2021–22ನೇ ಸಾಲಿನಲ್ಲಿ ಹಾಲು ಉತ್ಪಾದಕರಿಂದ ಸಂಘವು 96,12,805 ರೂ. ಹಾಲು ಖರೀದಿ ಮಾಡಿದೆ. ಲಾಭಾಂಶವನ್ನು ವಿವಿಧ ನಿಧಿಗಳಿಗೆ ವರ್ಗಾವಣೆ ಮಾಡುವುದು ನಿಯಮವಾಗಿದೆ. ಸಂಘದ ಆರ್ಥಿಕ ವ್ಯವಹಾರದ ಬಗ್ಗೆ ಚರ್ಚಿಸಲು ವಾರ್ಷಿಕ ಸಭೆ ಕರೆಯ ಲಾಗುತ್ತದೆ. ಕುಂದು ಕೊರತೆ, ದೂರುಗಳಿದ್ದಲ್ಲಿ ಮುಂದಿನ ದಿನಗಳಲ್ಲಿ ಸರಿಪಡಿಸಲಾಗುವುದು ಎಂದರು.

ಇದೇ ವೇಳೆ ಡೈರಿಗೆ ಹೆಚ್ಚು ಹಾಲು ಸರಬರಾಜು ಮಾಡಿದ ಸಹಕಾರಿಗಳಿಗೆ ಉಡುಗೊರೆ ನೀಡಿ ಸನ್ಮಾನಿಸಲಾಯಿತು. ಮೈಮುಲ್ ನಿರ್ದೇಶಕ ಚೆಲುವರಾಜು ಹಾಗೂ ಪ್ರಮೋದ್ ಅವರನ್ನು ಸಂಘದಿಂದ ಸನ್ಮಾನಿಸಲಾಯಿತು.

ಸಭೆ ಅಧ್ಯಕ್ಷತೆಯನ್ನು ಸಂಘದ ಅಧ್ಯಕ್ಷ ಹೆಚ್.ಕುಮಾರ್ ವಹಿಸಿದ್ದರು. ಉಪಾಧ್ಯಕ್ಷ ನಿಂಗೇಗೌಡ, ನಿರ್ದೇಶಕರಾದ ಎ.ಎನ್.ಗೋಪಿಕೃಷ್ಣ, ಸ್ವಾಮಿ, ಮಹದೇವು, ಶಂಭಯ್ಯ, ತಮ್ಮಯ್ಯ, ಪುಟ್ಟರಾಜು, ಜಯಮ್ಮ, ನಿಂಗಮ್ಮ, ಗೋದಾವರಿ ಬಾಯಿ, ರೈತ ಮುಖಂಡ ಸಿ.ಲಿಂಗಣ್ಣ, ಮುಖ್ಯ ಕಾರ್ಯನಿರ್ವಾಹಕ ಕೆ.ಲೋಕೇಶ್, ಹಾಲು ಪರೀಕ್ಷಕ ಆರ್.ತೇಜಸ್, ಸಹಾಯಕ ಎಂ.ಮಹದೇವ ಸೇರಿದಂತೆ ಸಂಘದ ಸದಸ್ಯರು ಹಾಜರಿದ್ದರು.

> **6** ಹಾಲು ಉತ್ಪಾದಕರಿಗೆ ಕೇರಳದಲ್ಲಿ 38.50 ರೂ., ಮಹಾರಾಷ್ಟ್ರದಲ್ಲಿ 45 ರೂ. ಹಾಗೂ ತೆಲಂಗಾಣದಲ್ಲಿ 40 ರೂ. ನೀಡಲಾಗುತ್ತಿದೆ. ಆದರೆ ಕರ್ನಾಟಕದಲ್ಲಿ ಕೇವಲ 28 ರೂ. ನೀಡಲಾಗುತ್ತಿದ್ದು, 10 ರಿಂದ 12 ರೂ. ವ್ಯತ್ಯಾಸವಿದೆ. ಇದರಿಂದ ರೈತರು ನಷ್ಟ ಅನುಭವಿಸುವಂತಾಗಿದೆ.
> – ಆರ್.ಚೆಲುವರಾಜು, ಮೈಮುಲ್ ನಿರ್ದೇಶಕ.

ಹಾಡಹಗಲೇ ಅರ್ಚಕನ ಹತ್ಯೆ



ಹೆಚ್.ಡಿ.ಕೋಟೆ, ಸೆ.18– ಹಾಡಹಗಲೇ ದುಷ್ಕರ್ಮಿಗಳು ಅರ್ಚಕನನ್ನು ಹತ್ಯೆ ಮಾಡಿರುವ ಘಟನೆ ತಾಲೂಕಿನ ಗಣೇಶ್‌ಪುರ ಗ್ರಾಮದಿಂದ ವರದಿಯಾಗಿದೆ. ಗ್ರಾಮದ ಗಣೇಶನ ದೇವಸ್ಥಾನದ ಅರ್ಚಕ ಕೆಂಪದೇವು (55) ಹತ್ಯೆಗೊಳಗಾದವರು.

ವಿವರ: ಸೆ.15ರಂದು ಮುಂಜಾನೆ ಅರ್ಚಕ ಕೆಂಪದೇವರು ಅವರ ಮನೆಗೆ ನುಗ್ಗಿರುವ ದುಷ್ಕರ್ಮಿಗಳು ಅರ್ಚಕರ ಕೈ, ಕಾಲು ಕಟ್ಟಿ, ಬಾಯಿಗೆ ಬಟ್ಟೆ ತುರುಕಿ ಕೊಲೆ ಮಾಡಿದ್ದಾರೆ. ಬಳಿಕ ಮನೆಯಲ್ಲಿದ್ದ ಹಣ, ಚಿನ್ನಾಭರಣ ದೋಚಿ ಮನೆಗೆ ಬೀಗ ಹಾಕಿ ಕೀಯನ್ನು ಬಾಗಿಲ ಬಳಿ ಬೀಳಿಸಿ ಪರಾರಿಯಾಗಿದ್ದಾರೆ ಎನ್ನಲಾಗಿದೆ.

ಇತ್ತ ಎಂದಿನಂತೆ ದೇವಾಲಯದ ಬಳಿ ಭಕ್ತರು ಕಾದು ಕುಳಿತಿದ್ದರು. ಸಮಯವಾದರೂ ಅರ್ಚಕರು ದೇವಾಲಯಕ್ಕೆ ಬಾರದ ಹಿನ್ನೆಲೆಯಲ್ಲಿ ಭಕ್ತರು ಹಾಗೂ ಗ್ರಾಮಸ್ಥರು ಅರ್ಚಕರ ಮನೆಗೆ ಹೋಗಿ ಪರಿಶೀಲಿಸಿ ಮನೆ ಬಾಗಿಲ ಮುಂದೆ ಬಿದ್ದಿದ್ದ ಕೀ ತೆಗೆದುಕೊಂಡು ಮನೆ ಬೀಗ ತೆಗೆದ ವೇಳೆ ಪ್ರಕರಣ ಬೆಳಕಿಗೆ ಬಂದಿದೆ. ಈ ವೇಳೆ ಗ್ರಾಮಸ್ಥರು ಪೊಲೀಸರಿಗೆ ವಿಷಯ ಮುಟ್ಟಿಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಚೇತನ್, ಎಎಸ್‌ಪಿ ನಂದಿನಿ, ಡಿವೈಎಸ್ಪಿ ರವಿ ಪ್ರಸಾದ್, ಸರ್ಕಲ್ ಇನ್ಸ್‌ಪೆಕ್ಟರ್‌ಗಳಾದ ಆನಂದ್, ಬಸವರಾಜು, ಚಿಕ್ಕಸ್ವಾಮಿ ಹಾಗೂ ಸಿಬ್ಬಂದಿ ವರ್ಗ ಪರಿಶೀಲನೆ ನಡೆಸಿದರು. ಈ ಸಂಬಂಧ ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಈ ವೇಳೆ ಮಾತನಾಡಿದ ಡಿವೈಎಸ್ಪಿ ರವಿಪ್ರಸಾದ್, ಎಸ್ಪಿ ಮಾರ್ಗದರ್ಶನದ ಮೇರೆಗೆ ಆರೋಪಿಗಳ ಬಂಧನಕ್ಕೆ ವಿಶೇಷ ತಂಡ ರಚಿಸಲಾಗಿದ್ದು, ಶೀಘ್ರ ಆರೋಪಿಗಳನ್ನು ಬಂಧಿಸಲಾಗುವುದು ಎಂದರು.

ಹುಣಸೂರಲ್ಲಿ ಇಬ್ಬರು ಸರಗಳ್ಳರ ಬಂಧನ

ಹುಣಸೂರು, ಸೆ.18– ಇಬ್ಬರು ಸರಗಳ್ಳರನ್ನು ಬಂಧಿಸುವಲ್ಲಿ ಹುಣಸೂರು ಪೊಲೀಸರು ಯಶಸ್ವಿಯಾಗಿದ್ದಾರೆ. ಪಟ್ಟಣದ ಸರಸ್ವತಿಪುರಂ ಬಡಾವಣೆಯ ದುರ್ಗಮ್ಮ–ಮರ್ಗಮ್ಮ ದೇವಸ್ಥಾನದ ಬೀದಿ ನಿವಾಸಿ ಅಭಿಷೇಕ್(23), ಬನ್ನಿಬೀದಿ ನಿವಾಸಿ ಮೋಹನ್ (22) ಬಂಧಿತ ಆರೋಪಿಗಳು. ಇವರಿಂದ ಮಾಂಗಲ್ಯ ಸರ ಹಾಗೂ ಡಿಸ್ಕವರ್ ಬೈಕ್(ಕೆಎ–09, ಇಪಿ–50670 ವಶಪಡಿಸಿಕೊಳ್ಳಲಾಗಿದೆ.

ವಿವರ: ಸೆ.10ರಂದು ರಾತ್ರಿ 9.20ರಲ್ಲಿ ಪಟ್ಟಣದ ಹಳೇ ಟೌನ್ ರತ್ನಪುರಿ ರಸ್ತೆಯಲ್ಲಿರುವ ಬಂಗಾರ್ ಪೇಟೆ ಪಾನಿಪುರಿ ಅಂಗಡಿ ಮಾಲೀಕರೂ ಆದ ತಾಲೂಕಿನ ನಾಗನಹಳ್ಳಿ ನಿವಾಸಿ ಸುವರ್ಣ ಅವರು ಅಂಗಡಿಯಲ್ಲಿ ಬಟಾಣಿ ತರಲು ಹೋಗಿದ್ದ ವೇಳೆ ಬೈಕ್‌ನಲ್ಲಿ ಬಂದ ಇಬ್ಬರು ಕಳ್ಳರು ಮಾಂಗಲ್ಯ ಸರ ಕಿತ್ತುಕೊಂಡು ಪರಾರಿಯಾಗಿದ್ದರು. ಈ ಸಂಬಂಧ ಪಟ್ಟಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ಆರೋಪಿಗಳ ಪತ್ತೆಗೆ ಡಿವೈಎಸ್ಪಿ ರವಿಪ್ರಸಾದ್ ಅವರ ಮಾರ್ಗದರ್ಶನದಲ್ಲಿ ಪಟ್ಟಣ ಠಾಣೆ ಇನ್ಸ್‌ಪೆಕ್ಟರ್ ಶ್ರೀನಿವಾಸ್ ತಮ್ಮ ಸಿಬ್ಬಂದಿಗಳೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಅಕ್ಕಪಕ್ಕದ ಅಂಗಡಿಯವರನ್ನು ವಿಚಾರಿಸಿ, ಸುತ್ತಮುತ್ತಲಿನ ಸಿಸಿ ಟಿವಿ ದೃಶ್ಯಾವಳಿ ಪರಿಶೀಲಿಸಿ, ವಾಹನಗಳ ತಪಾಸಣೆ ನಡೆಸಿದ್ದರು. ಸೆ.18 ರಂದು ಪೊಲೀಸರು ಹಳೇ ಕಳ್ಳರನ್ನು ಠಾಣೆಗೆ ಕರೆಸಿ ವಿಚಾರಣೆಗೊಳಪಡಿಸಿದಾಗ ಪ್ರಕರಣ ಬೆಳಕಿಗೆ ಬಂದಿದ್ದು, ಸರಗಳ್ಳರನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದ್ದಾರೆ. ಕಾರ್ಯಾಚರಣೆಯಲ್ಲಿ ಪಟ್ಟಣ ಠಾಣೆ ಅಪರಾಧ ವಿಭಾಗದ ಎಸ್ಐ ಲೋಕೇಶ್, ಸಿಬ್ಬಂದಿಗಳಾದ ಪ್ರಭಾಕರ್, ಇರ್ಫಾನ್, ರಘು ಹಾಗೂ ಗುಪ್ತಮಾಹಿತಿ ಸಿಬ್ಬಂದಿ ಪ್ರಸಾದ್ ಭಾಗವಹಿಸಿದ್ದರು.

ಸಂಗರಶೆಟ್ಟಿಹಳ್ಳಿ ಪಿಎಸಿಎಸ್ ಕಟ್ಟಡ ಕಾಮಗಾರಿಗೆ 10 ಲಕ್ಷ ಅನುದಾನ

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ ಭರವಸೆ



ಬೆಟ್ಟದಪುರ, ಸೆ.18– ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಕಟ್ಟಡ ನಿರ್ಮಾಣಕ್ಕೆ ನಮ್ಮ ಬ್ಯಾಂಕ್ ವತಿಯಿಂದ 10 ಲಕ್ಷ ರೂ. ಅನುದಾನ ನೀಡುವುದಾಗಿ ಭರವಸೆ ನೀಡಿದ ರಾಜ್ಯ ಅಪೆಕ್ಸ್ ಬ್ಯಾಂಕ್ ಉಪಾಧ್ಯಕ್ಷರೂ ಆದ ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ಜಿ.ಡಿ.ಹರೀಶ್‌ಗೌಡ, ರೈತರಿಗೆ 5 ಕೋಟಿ ರೂ.ವರೆಗೆ ಸಾಲ ನೀಡುವಂತೆ ಸಂಘದ ಆಡಳಿತ ಮಂಡಳಿಗೆ ಸೂಚಿಸಿದರು.

ಇಲ್ಲಿಗೆ ಸಮೀಪದ ಸಂಗರಶೆಟ್ಟಿಹಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ನೂತನ ಕಟ್ಟಡ ಕಾಮಗಾರಿ ಗುದ್ದಲಿ ಪೂಜೆ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಸರ್ಕಾರ ನೀಡುವ ಬಡ್ಡಿರಹಿತ ಸಾಲ ಸೌಲಭ್ಯ ಪಡೆದು ಆರ್ಥಿಕವಾಗಿ ಸಬಲರಾಗುವಂತೆ ಸಲಹೆ ನೀಡಿದರು.

ಕಾರ್ಯಕ್ರಮಕ್ಕೂ ಮುನ್ನಾ ಗುದ್ದಲಿ ಪೂಜೆ ನೆರವೇರಿಸಿ ಮಾತನಾಡಿದ ಶಾಸಕ ಕೆ.ಮಹದೇವ್, ಗ್ರಾಮಗಳಿಗೆ ಸಹಕಾರ ಸಂಘ ಅತೀ ಅವಶ್ಯಕವಾಗಿದ್ದು, ರೈತರು ಸಹಕಾರ ಸಂಘದಿಂದ ಪಡೆದ ಸಾಲವನ್ನು ಸಕಾಲದಲ್ಲಿ ಮರುಪಾವತಿಸಬೇಕು. ಅಲ್ಲದೆ ಕೃಷಿ ಚಟುವಟಿಕೆಗಾಗಿ ಸರ್ಕಾರ ನೀಡುವ 3 ಲಕ್ಷ ರೂ.ಗಳ ಬಡ್ಡಿರಹಿತ ಸಾಲವನ್ನು ಸದುಪಯೋಗಪಡಿಸಿಕೊಳ್ಳಬೇಕು ಕಿವಿಮಾತು ಹೇಳಿದರು.

ಮೈಮುಲ್ ಅಧ್ಯಕ್ಷ ಪಿ.ಎಂ.ಪ್ರಸನ್ನ ಮಾತನಾಡಿ, ಗ್ರಾಮದ ಸಹಕಾರ ಸಂಘಕ್ಕೆ ನಿವೇಶನ ದಾನ ನೀಡಿರುವ ಸಂಘದ ಅಧ್ಯಕ್ಷ ಮಂಜುನಾಥ್ ಅವರು ಹಾಲಿನ ಡೈರಿಗೂ ನಿವೇಶನ ದಾನ ನೀಡಿದರೆ ಹಾಲಿನ ಡೈರಿ ಕಟ್ಟಡ ನಿರ್ಮಾಣ ಕಾಮ ಗಾರಿಗೆ 4 ಲಕ್ಷ ರೂ. ಅನುದಾನ ನೀಡುವುದಾಗಿ ಘೋಷಿಸಿದರು.

ಕಾರ್ಯಕ್ರಮದಲ್ಲಿ ಜೆಡಿಎಸ್ ತಾಲೂಕು ಅಧ್ಯಕ್ಷ ಅಣ್ಣಯ್ಯಶೆಟ್ಟಿ, ಜಿಲ್ಲಾ ಬ್ಯಾಂಕ್ ನಿರ್ದೇಶಕ ರವಿ, ತಾಪಂ ಮಾಜಿ ಸದಸ್ಯ ರಘುನಾಥ್, ಜೆಡಿಎಸ್ ಮುಖಂಡ ಗಗನ್, ವಿದ್ಯಾಶಂಕರ, ಸಹಕಾರ ಸಂಘದ ಅಧ್ಯಕ್ಷ ಎನ್.ಪಿ.ಮಂಜುನಾಥ್, ಉಪಾಧ್ಯಕ್ಷ ಸ್ವಾಮಿಗೌಡ, ನಿರ್ದೇಶಕರಾದ ಶಶಿಧರ್, ಕಾಂತರಾಜು, ಸೋಮೇಗೌಡರು, ದಶರಥ, ಬೇಬಿ, ರೂಪ, ಶೋಭಾ, ಮಹದೇವಾಚಾರ್, ಕುಮಾರ ನಾಯಕ್, ಬೆಟ್ಟದಪುರ ಜಿಲ್ಲಾ ಬ್ಯಾಂಕ್ ಮೇಲ್ವಿಚಾರಕ ಶಿವಕುಮಾರ್, ಗ್ರಾಮದ ಮುಖಂಡರಾದ ಪುಟ್ಟರಾಜಣ್ಣ, ನಟೇಶ್, ಅತ್ತಿಗೋಡು ಪಿಡಿಓ ಮನು, ತಾಲೂಕು ಜೆಡಿಎಸ್ ಮಹಿಳಾ ಘಟಕದ ಅಧ್ಯಕ್ಷೆ ಪ್ರೀತಿ ಅರಸ್, ಬೆಟ್ಟದಪುರ ಗ್ರಾಪಂ ಅಧ್ಯಕ್ಷ ದೇವರಾಜ್, ಅತ್ತಿಗೋಡು ಗ್ರಾಪಂ ಅಧ್ಯಕ್ಷೆ ಮಂಜುಳಾ, ಪಿರಿಯಾಪಟ್ಟಣ ತಾಲೂಕು ಜಿಲ್ಲಾ ಬ್ಯಾಂಕ್‌ನ ರಾವಂದೂರು, ಬೆಟ್ಟದಪುರ, ಪಿರಿಯಾಪಟ್ಟಣ, ಶಾಖೆಗಳ ಅಧಿಕಾರಿಗಳು, ಸಂಘದ ಸಿಇಓ ಮೂರ್ತಿ ಸೇರಿದಂತೆ ಇನ್ನಿತರರಿದ್ದರು.

ಜಿಲ್ಲಾ ಆರೋಗ್ಯ ರಕ್ಷಾ ಸಮಿತಿ ನಿರ್ದೇಶಕರಾಗಿ ನೇಮಕ





ತಿ.ನರಸೀಪುರ, ಸೆ.18– ಮೈಸೂರು ಜಿಲ್ಲಾ ಆರೋಗ್ಯ ರಕ್ಷಾ ಸಮಿತಿ ನಾಮ ನಿರ್ದೇಶಕ ಸದಸ್ಯರಾಗಿ ವರಕೋಡು ಪ್ರಕಾಶ್ ಹಾಗೂ ಕಾವೇರಿಪುರ ಗೂಳಿ ಮಹೇಶ್ ಅವರನ್ನು ನೇಮಕ ಮಾಡಲಾಗಿದೆ ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಅಧೀನ ಕಾರ್ಯದರ್ಶಿ ವಿ.ಪದ್ಮ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕಂಪಲಾಪುರ ಆರೋಗ್ಯ ಕೇಂದ್ರಕ್ಕೆ ವೈದ್ಯರ ನೇಮಕ

ಕಂಪಲಾಪುರ, ಸೆ.18– ಕಂಪಲಾಪುರ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೆಚ್ಚುವರಿಯಾಗಿ ಇಬ್ಬರು ವೈದ್ಯರನ್ನು ನೇಮಕ ಮಾಡಲಾಗಿದೆ. ಒಂದು ವರ್ಷದ ಗ್ರಾಮೀಣ ಸೇವೆಯಡಿ ಈ ಇಬ್ಬರು ನೇಮಕಗೊಂಡಿದ್ದು, ಹಗಲು ವೇಳೆ ಡಾ.ಆರ್. ಸಿಂಚನ, ರಾತ್ರಿ ವೇಳೆ ಡಾ.ಸಿಂಧು ಕರ್ತವ್ಯ ನಿರ್ವಹಿಸಲಿದ್ದಾರೆ. ಇದರಿಂದ ರೋಗಿಗಳಿಗೆ 24x7 ಸೇವೆ ಸಿಗಲಿದೆ ಎಂದು ವೈದ್ಯಾಧಿಕಾರಿ ಡಾ.ಪ್ರಸನ್ನಕುಮಾರ್ ತಿಳಿಸಿದ್ದಾರೆ.

ನಗರ್ಲೆ ಪಿಎಸಿಎಸ್ ವಾರ್ಷಿಕ ಮಹಾಸಭೆ



ನಗರ್ಲೆ, ಸೆ.18– ನಂಜನಗೂಡು ತಾಲೂಕಿನ ನಗರ್ಲೆ ಗ್ರಾಮದ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ 2021–22ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಮಹಾಸಭೆ ಸಂಘದ ಆವರಣದಲ್ಲಿ ನಡೆಯಿತು.

ಕಾರ್ಯಕ್ರಮವನ್ನು ಸಂಘದ ಅಧ್ಯಕ್ಷ ಎನ್.ಎಂ.ಗುರುಸ್ವಾಮಿ ಉದ್ಘಾಟಿಸಿದರು. ಈ ವೇಳೆ ಮಾತನಾಡಿದ ಜಿಲ್ಲಾ ಸಹಕಾರ ಸಂಘದ ಉಪಾಧ್ಯಕ್ಷ ಬಿ.ಎನ್.ಸದಾನಂದ, ನಮ್ಮ ಸಂಘ ಅಭಿವೃದ್ಧಿಯತ್ತ ಸಾಗುತ್ತಿದ್ದು, ಸದಸ್ಯರು ಸಾಲಸೌಲಭ್ಯ ಪಡೆದು ಸಕಾಲದಲ್ಲಿ ಮರುಪಾವತಿಸಿ ಸಂಘದ ಅಭಿವೃದ್ಧಿಗೆ ಶ್ರಮಿಸಿ ಎಂದರು. ಸಂಘದ ಅಧ್ಯಕ್ಷ ಎನ್.ಎಂ.ಗುರುಸ್ವಾಮಿ ಮಾತನಾಡಿ, ಷೇರು ಪಾವತಿಸಿ ಸಂಘದ ಸದಸ್ಯತ್ವ ಪಡೆಯಿರಿ. ಸಂಘದ ಅಭಿವೃದ್ಧಿಗೆ ಸದಸ್ಯರ ಸಹಕಾರ ಅಗತ್ಯ ಎಂದರು. ಈ ವೇಳೆ ಉಪಾಧ್ಯಕ್ಷ ರವಿ, ಕೆ.ಪಿ.ಶಿವಕುಮಾರ್, ಹೆಚ್.ಎಸ್.ಮಹದೇವಪ್ಪ, ಧನಲಕ್ಷ್ಮಿ, ಎಸ್.ಮಾದಯ್ಯ, ಚಿನ್ನಸ್ವಾಮಿ, ಸತೀಶ್, ಬ್ಯಾಂಕ್ ಪ್ರತಿನಿಧಿ ಎನ್.ರಂಗನಾಥ್, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಎನ್.ಬಿ.ಮಹೇಂದ್ರ, ಸಿಬ್ಬಂದಿ ಬಿ.ರೂಪ, ಮುದ್ದುಮಾದಯ್ಯ ಸಂಘದ ಸದಸ್ಯರು ಹಾಜರಿದ್ದರು.

ಸೇವಾ ಕಾರ್ಯಗಳೊಂದಿಗೆ ಮೋದಿ ಹುಟ್ಟುಹಬ್ಬ



ಪಿರಿಯಾಪಟ್ಟಣ, ಸೆ.18– ಪಟ್ಟಣದಲ್ಲಿ ವಿವಿಧ ಸೇವಾ ಕಾರ್ಯಗಳೊಂದಿಗೆ ಪ್ರಧಾನಿ ಮೋದಿಯವರ ಹುಟ್ಟುಹಬ್ಬ ಆಚರಿಸಲಾಯಿತು.

ಮೊದಲಿಗೆ ಪಟ್ಟಣದ ಸರ್ಕಾರಿ ಆಸ್ಪತ್ರೆಗೆ ತೆರಳಿದ ಬಿಜೆಪಿ ಕಾರ್ಯಕರ್ತರು ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು. ನಂತರ ಬೆಟ್ಟದಪುರ ಸರ್ಕಲ್‌ನಲ್ಲಿ ಮೋದಿ ಅವರ ಬೃಹತ್ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಪೌರಕಾರ್ಮಿಕರ ಕಾಲೋನಿಗೆ ತೆರಳಿ ಪೌರ ಕಾರ್ಮಿಕರನ್ನು ಸನ್ಮಾನಿಸಿದರು. ಬಳಿಕ ಬಿಜೆಪಿ ಕಚೇರಿಯಲ್ಲಿ ದೃಷ್ಟಿದೋಷವುಳ್ಳ ಮಕ್ಕಳಿಗೆ ಉಚಿತವಾಗಿ ಕನ್ನಡಕಗಳನ್ನು ವಿತರಿಸಲಾಯಿತು.

ಈ ವೇಳೆ ತಾಲೂಕು ಬಿಜೆಪಿ ಅಧ್ಯಕ್ಷ ಎಂ.ಎಂ.ರಾಜೇಗೌಡ, ಮಾಜಿ ಸಂಸದ ಸಿ.ಹೆಚ್.ವಿಜಯಶಂಕರ್, ಮಾಜಿ ಶಾಸಕ ಹೆಚ್.ಸಿ.ಬಸವರಾಜ್, ಮುಖಂಡರಾದ ಸೋಮಶೇಖರ್, ವಿಕ್ರಂರಾಜ್, ಕೃಷ್ಣ, ಆರ್.ಟಿ.ಸತೀಶ್, ಪಿ.ಜೆ.ರವಿ, ಜಿಲ್ಲಾ ಮಹಿಳಾ ಮೋರ್ಚಾ ಪ್ರಧಾನ ಕಾರ್ಯದರ್ಶಿ ನಳಿನಿಗೌಡ, ಜಿಲ್ಲಾ ಕಾರ್ಯದರ್ಶಿ ಸತೀಶ್, ಜಯರಾಮೇಗೌಡ, ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಪ್ರವೀಣ್ ಶೆಟ್ಟಿ, ಅನಿಲ್, ಅರವಿಂದ್, ಹರೀಶ್ ಸೇರಿದಂತೆ ಕಾರ್ಯಕರ್ತರು ಹಾಜರಿದ್ದರು.

ಶ್ರೀರಂಗರಾಜಪುರ ಶಾಲಾ ಮಕ್ಕಳಿಗೆ ಸಮವಸ್ತ್ರ ವಿತರಣೆ



ತಿ.ನರಸೀಪುರ, ಸೆ.18– ಶಿಕ್ಷಣವು ವಿದ್ಯಾರ್ಥಿಗಳಿಗೆ ಮನುಷ್ಯತ್ವ, ಮಾನವೀಯತೆಯ ಗುಣಗಳನ್ನು ಧಾರೆ ಎರೆಯುತ್ತದೆ ಎಂದು ಎಸ್ಸಿ, ಎಸ್ಟಿ ಗುತ್ತಿಗೆದಾರರ ಸಂಘದ ಉಪಾಧ್ಯಕ್ಷ ಎಂ.ಸಿದ್ದರಾಜು ತಿಳಿಸಿದರು.

ಪ್ರಧಾನಿ ಮೋದಿ ಹುಟ್ಟುಹಬ್ಬ ಹಿನ್ನೆಲೆಯಲ್ಲಿ ತಾಲೂಕಿನ ಶ್ರೀರಂಗರಾಜಪುರ ಗ್ರಾಮದ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆ ಮಕ್ಕಳಿಗೆ ವೈಯಕ್ತಿಕವಾಗಿ ಉಚಿತವಾಗಿ ಸಮವಸ್ತ್ರ ವಿತರಿಸಿ ಅವರು ಮಾತನಾಡಿದರು.

ಅಜ್ಞಾನದಿಂದ–ಸುಜ್ಞಾನದೆಡೆಗೆ, ಕತ್ತಲೆಯಿಂದ ಬೆಳಕಿನೆಡೆಗೆ ಕೊಂಡೊಯ್ಯುವ ಶಿಕ್ಷಣದ ದಿವ್ಯವಾದ ಹೊಂಬೆಳಕಿನಿಂದ ಸಮಾಜದಲ್ಲಿ ಆದರ್ಶ ವ್ಯಕ್ತಿಗಳಾಗಿ, ರಾಷ್ಟ್ರದ ಸತ್ಪ್ರಜೆಗಳಾಗಿ ಗುರುತಿಸಿಕೊಂಡರೆ, ಸರ್ವೋದಯದ, ಸರ್ವತೋಮುಖದ ವ್ಯಕ್ತಿತ್ವದ ವೈಶಾಲ್ಯತೆ ಪ್ರಬುದ್ಧಗೊಳಿಸಬಹುದು. ಸಮೃದ್ಧ, ಸಮರ್ಥ, ಸರ್ವೋದಯದ ರಾಷ್ಟ್ರವನ್ನು ನಿರ್ಮಿಸಲು ವಿದ್ಯಾರ್ಥಿಗಳಲ್ಲಿ ಏಕತೆ, ಭಾವೈಕ್ಯತೆ, ರಾಷ್ಟ್ರೀಯ ಐಕ್ಯತೆಯ ಗುಣ ಮೌಲ್ಯಗಳನ್ನು ಬೆಳೆಸಬೇಕು ಎಂದರು. ಈ ವೇಳೆ ಗ್ರಾಪಂ ಮಾಜಿ ಅಧ್ಯಕ್ಷ ನಾಗಣ್ಣ, ರಾಜೇಶ್, ಎಸ್‌ಡಿಎಂಸಿ ಅಧ್ಯಕ್ಷ ರಾಮು, ಪುಟ್ಟಸ್ವಾಮಿ, ಗ್ರಾಪಂ ಸದಸ್ಯ ಸುಂದರ, ವಕೀಲ ಜಯರಾಮು, ಶಾಲೆಯ ಮುಖ್ಯ ಶಿಕ್ಷಕ ಮಂಜುನಾಥ್, ಸಹ ಶಿಕ್ಷಕಿ ಶೆರ್ಲಿ ಸೇರಿದಂತೆ ಗ್ರಾಮದ ಯಜಮಾನರು ಹಾಜರಿದ್ದರು.

ವಾಕ್, ಶ್ರವಣ ದೋಷವುಳ್ಳ ಮಕ್ಕಳಿಗೆ ತರಬೇತಿ

ಹುಣಸೂರು, ಸೆ.18– ಮಾತೃಶ್ರೀ ವಿದ್ಯಾ ಸಂಸ್ಥೆ, ವಿಕಲಚೇತನ ಹಾಗೂ ಹಿರಿಯ ನಾಗರಿಕರ ಸಬಲೀಕರಣ ಇಲಾಖೆ ಸಹಯೋಗದಲ್ಲಿ ವಾಕ್ ಮತ್ತು ಶ್ರವಣ ದೋಷವುಳ್ಳ 4 ವರ್ಷದೊಳಗಿನ ಮಕ್ಕಳಿಗೆ ಹಾಗೂ ಅವರ ತಾಯಂದಿರಿಗೆ ಉಚಿತವಾಗಿ ವಾಕ್ ಮತ್ತು ಭಾಷಾ ತರಬೇತಿ ನೀಡಲಾಗುವುದು. ತರಬೇತಿ ವೇಳೆ ಮಧ್ಯಾಹ್ನದ ಬಿಸಿಯೂಟ ನೀಡಲಾಗುವುದು. ಕೇಂದ್ರಕ್ಕೆ ದೂರದ ಊರುಗಳಿಂದ ಬರುವ ಫಲಾನುಭವಿಗಳಿಗೆ ಬಸ್ ವ್ಯವಸ್ಥೆ ಮಾಡಿ ಕೊಡಲಾಗುವುದು. ತರಬೇತಿಗೆ ಬರುವವರು ಬಿಪಿಎಲ್ ಕಾರ್ಡ್, ಮಗು ಮತ್ತು ತಾಯಿಯ ಆಧಾರ್ ಕಾರ್ಡ್, ತಾಯಿ ಕಾರ್ಡ್, ಮಗುವಿನ ಯುಡಿ ಐಡಿ ಕಾರ್ಡ್ ಜೆರಾಕ್ಸ್ ಪ್ರತಿ ಹಾಗೂ ತಾಯಿ ಮಗುವಿನ 2 ಫೋಟೋ ತರಬೇಕು. ಹೆಚ್ಚಿನ ಮಾಹಿತಿಗೆ ಮೊ.9742434753, 9380819403 ಸಂಪರ್ಕಿಸಿ.

ಭಾರತದ ಅಗ್ರಗಣ್ಯ ಶಿಕ್ಷಕರಲ್ಲಿ ಸರ್ವಪಲ್ಲಿ ರಾಧಾಕೃಷ್ಣನ್ ಪ್ರಮುಖರು

ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಸಿ.ಬಸವರಾಜ್ ಅಭಿಪ್ರಾಯ



ಹುಣಸೂರು, ಸೆ.18– ಸರ್ವಪಲ್ಲಿ ರಾಧಾಕೃಷ್ಣನ್ ಅವರು ಶಿಕ್ಷಣದ ಬಗ್ಗೆ ಅತ್ಯಂತ ಗೌರವ, ಪ್ರೀತಿ, ನಿಷ್ಠೆ ಹೊಂದಿದ್ದರು. ಸ್ವತಃ ಶಿಕ್ಷಕರಾಗಿ ಹಲವಾರು ವರ್ಷಗಳ ಕಾಲ ಸೇವೆಗೈದು, ಭಾರತ ಕಂಡ ಅಗ್ರಗಣ್ಯ ಶಿಕ್ಷಕರಲ್ಲಿ ಪ್ರಮುಖರಾಗಿದ್ದಾರೆ ಎಂದು ರಾಜ್ಯ ಉತ್ತಮ ಶಿಕ್ಷಕ ಪ್ರಶಸ್ತಿ ಪುರಸ್ಕೃತ ಸಿ.ಬಸವರಾಜ್ ಅಭಿಪ್ರಾಯಪಟ್ಟರು.

ಪಟ್ಟಣದ ರೋಟರಿ ಕ್ಲಬ್ ಸಹಯೋಗದಲ್ಲಿ ರೋಟರಿ ವಿದ್ಯಾ ಸಂಸ್ಥೆಯಲ್ಲಿ ನಡೆದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ರಾಧಾಕೃಷ್ಣನ್ ಅವರು ಶಿಕ್ಷಕ ವೃತ್ತಿಯಿಂದ ದೇಶದ ಪ್ರಥಮ ಪ್ರಜೆಯಾದರೂ ಸಹ ಶಿಕ್ಷಕ ವೃತ್ತಿಗೆ ನೀಡಿದ ಗೌರವದಿಂದ ಈ ದೇಶದಲ್ಲೇ ಶಿಕ್ಷಣಕ್ಕೆ ಮತ್ತಷ್ಟು ಪುಷ್ಟಿ ನೀಡಿದಂತಾಯಿತು. ಆದ್ದರಿಂದ ಎಲ್ಲಾ ಶಿಕ್ಷಕ ವರ್ಗಕ್ಕೂ ಕೂಡ ರಾಧಾಕೃಷ್ಣನ್ ಆದರ್ಶವಾಗಿದ್ದಾರೆ ಎಂದರು. ಸಮಾಜದಲ್ಲಿ ಯಾವುದೇ ವೃತ್ತಿಯಲ್ಲಿ ಸಿಗದ ಸ್ಥಾನಮಾನ ಮತ್ತು ಗೌರವ ಈ ಶಿಕ್ಷಣ ಕ್ಷೇತ್ರದಲ್ಲಿ ಸಿಗುತ್ತದೆ. ಶಿಕ್ಷಕರು ಮಕ್ಕಳಿಗೆ ಗುಣಮಟ್ಟ ಶಿಕ್ಷಣ, ಉತ್ತಮವಾದ ನಡವಳಿಕೆ ನೀಡಿ ಉತ್ತಮ ಸಮಾಜ ನಿರ್ಮಾಣ ಮಾಡುವಂತೆ ಮನವಿ ಮಾಡಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಎಸ್‌ಡಿಎಂಸಿ ಅಧ್ಯಕ್ಷ ಡಾ.ವೃಷಬೇಂದ್ರಸ್ವಾಮಿ, ಶಿಕ್ಷಣ ಕ್ಷೇತ್ರ ಪವಿತ್ರವಾದ ಕ್ಷೇತ್ರ. ಮಠ ಮಾನ್ಯಗಳು ಶಿಕ್ಷಣಕ್ಕೆ ಒತ್ತು ಕೊಟ್ಟಿದ್ದರಿಂದಲೇ ಬಹುತೇಕ ಮಂದಿ ಎತ್ತರಕ್ಕೆ ಬೆಳೆದು ನಿಂತಿದ್ದಾರೆ. ಪ್ರತಿಯೊಬ್ಬರಿಗೂ ಶಿಕ್ಷಣ ಕೊಡುವ ನಿಟ್ಟಿನಲ್ಲಿ ಸೇವಾ ಸಂಸ್ಥೆಗಳು ಮುಂದಾಗಬೇಕು ಎಂದರು.

ರೋಟರಿ ವಿದ್ಯಾಸಂಸ್ಥೆ ಉಪಾಧ್ಯಕ್ಷ ಆರ್.ಆನಂದ್, ವಿದ್ಯಾಸಂಸ್ಥೆ ಕಾರ್ಯದರ್ಶಿ ನಾರಾಯಣ್ ಮಾತನಾಡಿದರು. ಇದೇ ವೇಳೆ ಹಿರಿಯ ಶಿಕ್ಷಕರಾದ ಬಿ.ಅಕ್ಮಲ್ ಅಹ್ಮದ್, ನಾಜಿಮಾ ಹಾಗೂ ಸಿ.ಜಿ.ಕೃತಿಕ ಅವರನ್ನು ಸನ್ಮಾನಿಸಲಾಯಿತು. ವಿದ್ಯಾರ್ಥಿಗಳು ಶಿಕ್ಷಕರಿಗೆ ಕ್ರೀಡಾಕೂಟ ಏರ್ಪಡಿಸಿ ಬಹುಮಾನ ನೀಡಿದರು. ಆಡಳಿತ ಮಂಡಳಿಯಿಂದ ಎಲ್ಲಾ ಶಿಕ್ಷಕರಿಗೂ ನೆನಪಿನ ಕಾಣಿಕೆ ನೀಡಿ ಗೌರವಿಸಿದರು.

ರೋಟರಿ ವಿದ್ಯಾ ಸಂಸ್ಥೆ ಮಾಜಿ ಅಧ್ಯಕ್ಷ ರಾಜಶೇಖರ್, ಅನಂತರಾಜೇ ಅರಸ್, ರೋಟರಿ ಸಂಸ್ಥೆ ಕಾರ್ಯದರ್ಶಿ ಎಸ್.ಚನ್ನಕೇಶವ, ರೋಟರಿ ಸಂಸ್ಥೆ ಅಧ್ಯಕ್ಷ ಪಾಂಡು ಕುಮಾರ್, ಖಜಾಂಚಿ ತಂಗಮಾರಿಯಪ್ಪನ್, ಮಾಜಿ ಅಧ್ಯಕ್ಷ ಡಾ.ಸರೋಜಿನಿ ವಿಕ್ರಂ, ಹೆಚ್.ಎಸ್. ಅಶೋಕ್ ಕುಮಾರ್ ಹಾಗೂ ಮುಖ್ಯ ಶಿಕ್ಷಕ ಶ್ರೀವತ್ಸ, ಸಹಾಯಕ ಮುಖ್ಯ ಶಿಕ್ಷಕಿಯರಾದ ದೀಪಾ, ಮಮತ, ಎಲಿಜಬತ್ ರಾಣಿ ಹಾಗೂ ಶಿಕ್ಷಕ ವೃಂದ, ಸಿಬ್ಬಂದಿ, ವಿದ್ಯಾರ್ಥಿಗಳು ಹಾಜರಿದ್ದರು.

ಡಿಆರ್‌ಸಿ ಸಿನಿಮಾಸ್

ದೂ : 4240422/4241800

- ಸ್ಕ್ರೀನ್ 1 ಮರ್ದಿನಿ (ಕ): ಬೆ.10.45ಕ್ಕೆ, ಲಕ್ಕಿಮ್ಯಾನ್ (ಕ): ಮ.1ಕ್ಕೆ, ಸಂ.4ಕ್ಕೆ, ಸಂ.6.55ಕ್ಕೆ, ರಾ.9.55.
- ಸ್ಕ್ರೀನ್ 2 ಮಾನ್ಸೂನ್ ರಾಗ (ಕ): ಬೆ.10.20ಕ್ಕೆ, ಸಂ.4.20ಕ್ಕೆ, ರಾ.7.15ಕ್ಕೆ, ರಿಯಾ (ಕ): ಮ.1.35ಕ್ಕೆ, ನೇನು ಮೀಕು ಭಾಗ ಕಾವಾಲ್ಸಿನವಾಡಿನಿ (ತೆ): ರಾ.10ಕ್ಕೆ.
- ಸ್ಕ್ರೀನ್ 3 ವೇರ್ ದಿ ಕ್ರೌಡಾಡ್ಸ್ ಸಿಂಗ್ (ಇಂ): ಬೆ.10.55ಕ್ಕೆ, ರಾ.10ಕ್ಕೆ, ಸಿನಮ್ (ತ): ಮ.1.30ಕ್ಕೆ, ವೆಂದು ತನಿಂದದು ಕಾಡು (ತ): ಮ.3.55ಕ್ಕೆ, ಆ ಅಮ್ಮಾಯಿ ಗುರಿಂಚಿ ಮೀಕು ಚೆಪ್ಪಾಲಿ (ತೆ): ರಾ.7.10ಕ್ಕೆ.
- ಸ್ಕ್ರೀನ್ 4 ಬ್ರಹ್ಮಾಸ್ತ್ರ (3ಡಿ) (ಹಿಂ): ಬೆ.9.55ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10.05ಕ್ಕೆ.

ಐನಾಕ್ಸ್ ಮೂವೀಸ್

LIVE THE MOVIE

ದೂ : 2533444 / 2433456

- ಸ್ಕ್ರೀನ್ 1 ಬ್ರಹ್ಮಾಸ್ತ್ರ (3ಡಿ)(ಹಿಂ): ಬೆ.10.50ಕ್ಕೆ, ಮ.2.20ಕ್ಕೆ, ಸಂ.5.50ಕ್ಕೆ, ರಾ.9.20ಕ್ಕೆ.
- ಸ್ಕ್ರೀನ್ 2 ಲಕ್ಕಿಮ್ಯಾನ್ (ಕ): ಬೆ.10.25ಕ್ಕೆ, ಶಾಕಿನಿ ಡಾಕಿನಿ (ತೆ): ಮ.1.35ಕ್ಕೆ, ಮಾನ್ಸೂನ್‌ರಾಗ (ಕ): ಸಂ.4.10ಕ್ಕೆ, ಆ ಅಮ್ಮಾಯಿ ಗುರಿಂಚಿ ಮೀಕು ಚೆಪ್ಪಾಲಿ (ತೆ): ರಾ.7ಕ್ಕೆ, ವೆಂದು ತಣಿಂದದು ಕಾಡು (ತ): ರಾ.10ಕ್ಕೆ.
- ಸ್ಕ್ರೀನ್ 3 ಮಾನ್ಸೂನ್ ರಾಗ (ಕ): ಬೆ.10.10ಕ್ಕೆ, ರಾ.10.10ಕ್ಕೆ, ಲಕ್ಕಿಮ್ಯಾನ್ (ಕ): ಮ.1ಕ್ಕೆ, ರಾ.7ಕ್ಕೆ, ಪಂಪ ಪಂಚಳ್ಳಿ ಪರಶಿವಮೂರ್ತಿ (ಕ): ಸಂ.4.10ಕ್ಕೆ,
- ಸ್ಕ್ರೀನ್ 4 ಕಪಾಲ (ಕ): ಬೆ.10.45ಕ್ಕೆ, ಮಾನ್ಸೂನ್ ರಾಗ (ಕ): ಮ.1.30ಕ್ಕೆ, ವೆಂದು ತಣಿಂದದು ಕಾಡು (ತ): ಸಂ.4.20ಕ್ಕೆ, ಮರ್ದಿನಿ (ಕ): ರಾ.7.50ಕ್ಕೆ, ಬ್ರಹ್ಮಾಸ್ತ್ರ (3ಡಿ)(ಹಿಂ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ

ದೂ : 0821–2973519

- ಸ್ಕ್ರೀನ್ 1 ಪಂಪ (ಕ): ಬೆ.10.35ಕ್ಕೆ, ಮರ್ದಿನಿ (ಕ): ಮ.1.10ಕ್ಕೆ, ಕಪಾಲ (ಕ): ಮ.3.30ಕ್ಕೆ, ವೆಂದು ತನಿಂದದು ಕಾಡು (ತ): ಸಂ.6ಕ್ಕೆ, ರಾ.9.20ಕ್ಕೆ
- ಸ್ಕ್ರೀನ್ 2 ಮಾನ್ಸೂನ್ ರಾಗ (ಕ): ಬೆ.10.30ಕ್ಕೆ, ಮ.1.15ಕ್ಕೆ, ಸಂ.4ಕ್ಕೆ, ಸಂ.6.40ಕ್ಕೆ, ರಾ.9.20ಕ್ಕೆ.
- ಸ್ಕ್ರೀನ್ 3 ಬ್ರಹ್ಮಾಸ್ತ್ರ (3ಡಿ)(ಹಿಂ): ಮ.1.15ಕ್ಕೆ, ರಾ.7.45ಕ್ಕೆ, ಬ್ರಹ್ಮಾಸ್ತ್ರ (3ಡಿ)(ಕ): ಸಂ.4.30ಕ್ಕೆ
- ಸ್ಕ್ರೀನ್ 4 ಲಕ್ಕಿಮ್ಯಾನ್ (ಕ): ಬೆ.10.30ಕ್ಕೆ, ಮ.1.35ಕ್ಕೆ, ಸಂ.4.40ಕ್ಕೆ, ರಾ.7.45ಕ್ಕೆ.

ಪಿವಿಆರ್ ಸಿನಿಮಾಸ್

ಮೊ.ನಂ: 8951357139

ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ,

ಲಕ್ಕಿಮ್ಯಾನ್ (ಕ): ಬೆ.9ಕ್ಕೆ, ಮ.12.15ಕ್ಕೆ, ಮ.3.30ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಬ್ರಹ್ಮಾಸ್ತ್ರ (ಕ): ಮ.2.55ಕ್ಕೆ, ಗಾಳಿಪಟ–2 (ಕ): ಮ.3.25ಕ್ಕೆ, ನಾನ್ ರೌಡಿ (ಕ): ಮ.11.45ಕ್ಕೆ, ಬ್ರಹ್ಮಾಸ್ತ್ರ (3ಡಿ) (ಹಿಂ): ಬೆ.8.30ಕ್ಕೆ, ಬೆ.11ಕ್ಕೆ, ಮ.12ಕ್ಕೆ, ಮ.2.30ಕ್ಕೆ, ಮ.3.30ಕ್ಕೆ, ಸಂ.6ಕ್ಕೆ, ರಾ.7ಕ್ಕೆ, ರಾ.9.30ಕ್ಕೆ, ರಾ.10.30ಕ್ಕೆ, ಬ್ರಹ್ಮಾಸ್ತ್ರ (2ಡಿ) (ಹಿಂ): ಬೆ.11.30ಕ್ಕೆ, ಮ.3ಕ್ಕೆ, ರಾ.9.15ಕ್ಕೆ, ಕ್ಯಾಪ್ಟನ್ (ತ): ಮ.12.10ಕ್ಕೆ, ಸಂ.6.35ಕ್ಕೆ, ಒಕೇ ಒಕ ಜೀವಿತಂ (ತೆ): ಸಂ.6.30ಕ್ಕೆ, ರಾ.9.45ಕ್ಕೆ, ಪಥೋಪಥಂ ನೋಟಂಡು (ಮ): ಸಂ.6.25ಕ್ಕೆ, ಒರು ತೆಕ್ಕ (ಮ): ರಾ.9.45ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪದ್ಮ ಚಿತ್ರಮಂದಿರ	(ದೂ: 2521923)
ಸಿನಮ್ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಲಕ್ಕಿಮ್ಯಾನ್ (ಕ)	4 ಪ್ರದರ್ಶನಗಳು
ಉಮಾ ಚಿತ್ರಮಂದಿರ	(ದೂ: 2520009)
ಮಿಸ್ ಮಲ್ಲಿಗೆ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಕೋಬ್ರಾ (ತ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮರ್ದಿನಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಮರ್ದಿನಿ (ಕ)	4 ಪ್ರದರ್ಶನಗಳು
ರಾಜ್‌ಕಮಲ್	
ವೆಂದು ತನಿಂದದು ಕಾಡು (ತ)	4 ಪ್ರದರ್ಶನಗಳು
ಸಂಗಂ	
ಮಾನ್ಸೂನ್ ರಾಗ (ಕ)	4 ಪ್ರದರ್ಶನಗಳು
ಲಿಡೋ	
ಪಂಪ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸಿನಮ್ (ತ)	4 ಪ್ರದರ್ಶನಗಳು
ಪ್ರಭಾ	
ಗಾಳಿಪಟ–2 (ಕ)	4 ಪ್ರದರ್ಶನಗಳು

ಹೊಮ್ಮರಗಳ್ಳಿ ಪಿಎಸಿಎಸ್ ವಾರ್ಷಿಕ ಮಹಾಸಭೆ



ಹಂಪಾಪುರ, ಸೆ.18– ಇಲ್ಲಿನ ಹೊಮ್ಮರಗಳ್ಳಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಕ್ಕೆ 2021–22ನೇ ಸಾಲಿನಲ್ಲಿ 1,06,024 ಲಕ್ಷ ರೂ. ನಿವ್ವಳ ಲಾಭ ಗಳಿಸಿದೆ ಎಂದು ಸಂಘದ ಅಧ್ಯಕ್ಷ ಪಿ.ಪರಮೇಶ್ ತಿಳಿಸಿದರು.

ಗ್ರಾಮದ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ನಡೆದ ವಾರ್ಷಿಕ ಮಹಾಸಭೆ ಉದ್ಘಾಟಿಸಿ ಮಾತನಾಡಿದ ಅವರು, ಪ್ರಸಕ್ತ ಸಾಲಿನಲ್ಲಿ ಸಂಘಕ್ಕೆ ಹೆಚ್ಚಿನ ನಿವ್ವಳ ಆದಾಯ ಬಂದಿದ್ದು, ಸಂಘದ ಅಭಿವೃದ್ಧಿಗೆ ಸಹಕಾರಿಯಾಗಿದ್ದು ಸಂಘದ ಶ್ರೇಯೋಭಿವೃದ್ಧಿಗೆ ಸದಸ್ಯರು, ಅಧಿಕಾರಿ ವರ್ಗದವರು ಶ್ರಮಿಸುತ್ತಿದ್ದಾರೆ ಎಂದರು.

ಸಭೆಯಲ್ಲಿ ಗ್ರಾಪಂ ಅಧ್ಯಕ್ಷೆ ಅಲಮೇಲಮ್ಮ, ಉಪ ನಿರ್ದೇಶಕ ಮಹದೇವಪ್ಪ, ನಿರ್ದೇಶಕರಾದ ಗೋಪಾಲಗೌಡ, ಜಗದೀಶ, ಸಿದ್ದಾಚಾರಿ, ನಾಗರಾಜ, ರುದ್ರಪ್ಪ, ಮಲ್ಲನಾಯಕ, ದೇವೀರಮ್ಮ, ನಂಜಮ್ಮಣಿ, ದೇವಮ್ಮ, ಪುಟ್ಟಮ್ಮ ಹಾಗೂ ಸೋಮಶೇಖರ್, ಮುಖ್ಯ ಕಾರ್ಯ ನಿರ್ವಹಣಾಧಿಕಾರಿ ಎನ್.ಮಧು, ಮಾರಾಟ ಗುಮಾಸ್ತೆ ಬೇಬಿ ರೇಖಾ, ಅಟೆಂಡರ್ ರವಿಕುಮಾರ್, ಮುಖಂಡರಾದ ಮಾಯೇಗೌಡ, ಚಿಕ್ಕದೇವಯ್ಯ, ಭೋರನಂಜೇಗೌಡ, ಅಂಗಪ್ಪ, ನಂಜುಂಡಸ್ವಾಮಿ, ಮಾದಾಬೋವಿ, ಕುಳ್ಳೇಗೌಡ, ಮೋಹನ್, ನಟರಾಜು, ಸಿದ್ದರಾಜು, ಪರಮೇಶ್, ಚಲುವ ನಾಯಕ, ಮರಿತಿಮ್ಮನಾಯಕ ಹಾಗೂ ಕಾಳಯ್ಯ ಸೇರಿದಂತೆ ಇತರರು ಉಪಸ್ಥಿತರಿದ್ದರು.

ನೇಮಕ



ಸರಗೂರು, ಸೆ.18– ಮೈಸೂರು ಜಿಲ್ಲಾ ಆರೋಗ್ಯ ರಕ್ಷಾ ಸಮಿತಿ ನಾಮನಿರ್ದೇಶಕ ಸದಸ್ಯರಾಗಿ ಮನುಗನಹಳ್ಳಿ ಎಂ.ಪಿ.ಮಂಜುನಾಥ್ ಅವರನ್ನು ನೇಮಕ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.



ಪ್ರಧಾನಿ ಮೋದಿ ಹುಟ್ಟುಹಬ್ಬ ಅಂಗವಾಗಿ ಸರಗೂರಿನ ಸ್ವಾಮಿ ವಿವೇಕಾನಂದ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು. ಈ ವೇಳೆ ಬಿಜೆಪಿ ಮುಖಂಡ ಕೃಷ್ಣಸ್ವಾಮಿ, ಪಪಂ ಅಧ್ಯಕ್ಷೆ ರಾಧಿಕಾ, ಉಪಾಧ್ಯಕ್ಷ ವಿನಾಯಕ ಪ್ರಸನ್ನ, ಸದಸ್ಯರಾದ ವೀರೇಶ್, ಜಿಲ್ಲಾ ಬಿಜೆಪಿ ರಾಜ್ಯ ಕಾರ್ಯಕಾರಿಣಿ ಸದಸ್ಯ ಸುನಂದಾರಾಜ್, ಜಿಲ್ಲಾ ಉಪಾಧ್ಯಕ್ಷೆ ಮಂಜುಳಾ, ಪಕ್ಷದ ಮುಖಂಡರಾದ ನಾಗರಾಜರಾಮ್, ನವೀನ್, ನಾಗರಾಜು, ಶಿವಪ್ಪ, ರಾಜೇಶ್, ಸಿದ್ದಪಾಜಿ, ಶಿವು, ಶ್ರೀರಾಮುಲು, ರಾಜೇಶ್ ಇನ್ನಿತರರಿದ್ದರು.

ಬಳ್ಳಾರಿ ವಿಮ್ಸ್ ರೋಗಿಗಳ ಸಾವಿನ ದುರಂತದ ಹಿಂದೆ ಷಡ್ಯಂತ್ರ

ವಿಮ್ಸ್ ನಿರ್ದೇಶಕ ಗಂಗಾಧರಗೌಡ ಗಂಭೀರ ಆರೋಪ

ಬಳ್ಳಾರಿ, ಸೆ.18– ಪ್ರಮುಖ ಬೆಳವಣಿಗೆಯಲ್ಲಿ ಬಳ್ಳಾರಿ ವಿಮ್ಸ್ ಆಸ್ಪತ್ರೆಯ ರೋಗಿಗಳ ಸಾವಿನ ಪ್ರಕರಣಕ್ಕೆ ಸಂಬಂಧಿಸಿದಂತೆ ದುರಂತದ ಹಿಂದೆ ಷಡ್ಯಂತ್ರ ಅಡಗಿದೆ ಎಂದು ವಿಮ್ಸ್ ನಿರ್ದೇಶಕ ಗಂಗಾಧರಗೌಡ ಆಘಾತಕಾರಿ ಹೇಳಿಕೆ ನೀಡಿದ್ದಾರೆ. ಬಳ್ಳಾರಿಯ ವಿಜಯನಗರ ವೈದ್ಯಕೀಯ ವಿಜ್ಞಾನ ಸಂಸ್ಥೆ ಪ್ರತಿಷ್ಠೆಗೆ ಚ್ಯುತಿ ತರುವ ಷಡ್ಯಂತ್ರದ ಭಾಗವಾಗಿ ಐಸಿಯುನಲ್ಲಿದ್ದ ಇಬ್ಬರು ರೋಗಿಗಳ ಸಾವು ಪೂರ್ವಯೋಜಿತವಾಗಿದೆ ಎಂದು ಸಂಸ್ಥೆಯ ನಿರ್ದೇಶಕ ಗಂಗಾಧರಗೌಡ ಆರೋಪಿಸಿದ್ದು, ಅವರನ್ನು ಹುದ್ದೆಯಿಂದ ತೆಗೆದು ಹಾಕಲು ಈ ಸಂಚು ರೂಪಿಸಲಾಗಿದೆ ಎಂದು ಅವರು ಆರೋಪಿಸಿದ್ದಾರೆ. ಅಲ್ಲದೆ ಈ ಬಗ್ಗೆ ಪೊಲೀಸರಿಗೆ ದೂರು ನೀಡಲು ಮುಂದಾಗಿರುವುದಾಗಿ ಅವರು ತಿಳಿಸಿದ್ದಾರೆ.

ವಿಮ್ಸ್‌ನ ಐಸಿಯುನಲ್ಲಿ ದಾಖಲಾಗಿದ್ದ ಇಬ್ಬರು ರೋಗಿಗಳು ವಿದ್ಯುತ್ ವೈಫಲ್ಯದಿಂದ ಸೆಪ್ಟೆಂಬರ್ 14ರಂದು ಸಾವನ್ನಪ್ಪಿದ್ದರು. ಆದರೆ, ಘಟನೆಯಲ್ಲಿ ಸಾವಿನ ಸಂಖ್ಯೆಯ ಬಗ್ಗೆ ಗೊಂದಲವಿದೆ. ಇಬ್ಬರು ವ್ಯಕ್ತಿಗಳು ಸಾವನ್ನಪ್ಪಿದ್ದಾರೆ ಎಂದು ಆಸ್ಪತ್ರೆ ಆಡಳಿತ ಹೇಳಿಕೊಂಡರೂ, ನಾಲ್ಕು ರೋಗಿಗಳ ಸಾವಿನ ವರದಿಗಳಿವೆ ಎಂದು ಗಂಗಾಧರಗೌಡ ಅವರು ಸುದ್ದಿ ಸಂಸ್ಥೆಗೆ ಮಾಹಿತಿ ನೀಡಿದ್ದಾರೆ. ಅಲ್ಲದೆ ಷಡ್ಯಂತ್ರ ಸಂಬಂಧ ನನ್ನ ಬಳಿ ಆಡಿಯೋ ಕ್ಲಿಪ್‌ಗಳ ರೂಪದಲ್ಲಿ ಪುರಾವೆಗಳಿವೆ ಎಂದು ಹೇಳಿಕೆ ನೀಡಿದ್ದಾರೆ.

ಈ ಬಗ್ಗೆ ಶೀಘ್ರದಲ್ಲೇ ದೂರು ದಾಖಲಿಸಿ ಕಾನೂನು ಹೋರಾಟ ನಡೆಸುತ್ತೇನೆ. ತನಿಖಾ ಸಮಿತಿಯ ಸದಸ್ಯರು ಶುಕ್ರವಾರ ಆಸ್ಪತ್ರೆಗೆ ಭೇಟಿ ನೀಡಿದಾಗ, ನಾನು ಅವರಿಗೆ ಘಟನೆ ಗಳ ಅನುಕ್ರಮವನ್ನು ವಿವರಿಸಿದ್ದೇನೆ. ಶೀಘ್ರದಲ್ಲೇ ಸತ್ಯ ಹೊರ ಬರುತ್ತದೆ ಎಂದು ನಾನು ಭಾವಿಸುತ್ತೇನೆ. ನನ್ನ ಕಡೆಯಿಂದ ಯಾವುದೇ ಲೋಪವಾಗಿದ್ದರೆ, ನಾನು ಕ್ರಮವನ್ನು ಎದು ರಿಸಲು ಸಿದ್ಧನಿದ್ದೇನೆ ಎಂದು ಹೇಳಿದರು.

ತಪ್ಪಿತಸ್ಥರ ಮೇಲೆ ಕ್ರಮ



ಬಳ್ಳಾರಿ: ವಿಮ್ಸ್‌ನಲ್ಲಿ ಸತ್ತವರು ನಾಲ್ವರಲ್ಲ, ಇಬ್ಬರು ಮಾತ್ರ ಎಂದು ಆರೋಗ್ಯ ಸಚಿವ ಡಾ.ಕೆ ಸುಧಾಕರ್ ಮಾಹಿತಿ ನೀಡಿದ್ದಾರೆ.

ವಿಮ್ಸ್ ದುರಂತ ನಡೆದ ಬಳಿಕ ಆಸ್ಪತ್ರೆಗೆ ಭೇಟಿ ನೀಡಿ, ನಂತರ ಘಟನೆ ಸಂಬಂಧ ಅಧಿಕಾರಿಗಳಿಂದ ಮಾಹಿತಿ ಪಡೆದರು. ಬಳಿಕ ಮಾಧ್ಯಮಗಳ ಜೊತೆಗೆ ಮಾತನಾಡಿದ ಅವರು, ಘಟನೆ ಸಂಬಂಧ ಸಂಪೂರ್ಣ ಮಾಹಿತಿಯನ್ನು ತನಿಖಾ ಸಮಿತಿ ಎಲ್ಲಾ ವಿಭಾಗಗಳಿಂದಲೂ ಮಾಹಿತಿ ಪಡೆದುಕೊಂಡಿದ್ದೇನೆ. ರಾಜ್ಯದಲ್ಲಿ ವಿಮ್ಸ್ ಒಂದು ಅತ್ಯುತ್ತಮ ಸಂಸ್ಥೆ. ಇಲ್ಲಿ ಸತ್ತವರ ಸಂಖ್ಯೆ ಎರಡು ಮಾತ್ರ. ಈ ಪ್ರಕರಣದ ಹಿಂದೆ ಯಾವುದೇ ಕಾಣದ ಕೈಗಳಿದ್ದರು ಕ್ರಮ ತೆಗೆದುಕೊಳ್ಳುತ್ತೇವೆ. ತನಿಖೆಯ ನಂತರ ಸತ್ಯ ತಿಳಿಯಲಿದೆ.

ತನಿಖಾ ಸಮಿತಿ ವರದಿ ನೀಡಿದ ಬಳಿಕ ತಪ್ಪಿತಸ್ಥರ ಮೇಲೆ ಕ್ರಮ ಜರುಗಿಸಲಾಗುವುದು. ಒಂದು ವೇಳೆ ವಿಮ್ ಆಡಳಿತದಿಂದ ತಪ್ಪಾಗಿದ್ದರೆ ಅವರ ಮೇಲೆ ಎಫ್ಐಆರ್ ದಾಖಲು ಮಾಡಲಾಗುವುದು ಎಂದು ಹೇಳಿದರು.

ಆರೋಗ್ಯ ಸಚಿವರ ವಿರುದ್ಧ ಶಾಸಕ ಸೋಮಶೇಖರ್ ರೆಡ್ಡಿ ಆಕ್ರೋಶ: ಶಾಸಕ ಸೋಮಶೇಖರ್ ರೆಡ್ಡಿ ಆರೋಗ್ಯ ಸಚಿವ ಡಾ.ಕೆ.ಸುಧಾಕರ್ ವಿರುದ್ಧ ವಾಗ್ದಾಳಿ ನಡೆಸಿದರು. ಗಂಗಾಧರಗೌಡರನ್ನು ನಿರ್ದೇಶಕರನ್ನಾಗಿ ನೇಮಕ ಮಾಡುವ ಬಗ್ಗೆ ಅನುಮಾನ ಮೂಡಿಸಿದೆ ಎಂದರು. ನಾನು ಮೊದಲ ದಿನದಿಂದ ಗೌಡರ ನೇಮಕವನ್ನು ವಿರೋಧಿಸಿದ್ದೆ. ಶೀಘ್ರದಲ್ಲೇ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಭೇಟಿ ಮಾಡಿ ಈ ಬಗ್ಗೆ ಚರ್ಚಿಸುತ್ತೇನೆ ಎಂದು ತಿಳಿಸಿದರು.

ಇಂದು ವಿಶೇಷ ಕೌನ್ಸಿಲ್ ಸಭೆ



ಮೈಸೂರು, ಸೆ.18–ಮೈಸೂರು ಮಹಾನಗರ ಪಾಲಿಕೆ ವತಿಯಿಂದ ಸೆ.19ರಂದು ಮಧ್ಯಾಹ್ನ 3 ಗಂಟೆಗೆ ಮೈಸೂರು ಮಹಾ ನಗರಪಾಲಿಕೆಯ ನಾಲ್ವಡಿ ಕೃಷ್ಣರಾಜ ಒಡೆಯರ್ ಸಭಾಂಗಣದಲ್ಲಿ 2022ನೇ ಸಾಲಿನ ನಾಡಹಬ್ಬ ಮೈಸೂರು ದಸರಾ ಮಹೋತ್ಸವದ ಬಗ್ಗೆ ಚರ್ಚಿಸಲು ವಿಶೇಷ ಕೌನ್ಸಿಲ್ ಸಭೆಯನ್ನು ಏರ್ಪಡಿಸಲಾಗಿದೆ ಎಂದು ಮೈಸೂರು ಮಹಾನಗರ ಪಾಲಿಕೆಯ ಕೌನ್ಸಿಲ್ ಕಾರ್ಯದರ್ಶಿ ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಾರ್ವಜನಿಕ ಪ್ರಕಟಣೆ

ಈ ಮೂಲಕ ಸಾರ್ವಜನಿಕರಿಗೆ ತಿಳಿಸುವುದೇನೆಂದರೆ. ಈ ಕೆಳಗೆ ಷೆಡ್ಯೂಲ್ ಸ್ವತ್ತನ್ನು ಅದರ ಮಾಲೀಕರಾದ ಮೈಸೂರು ಸಿಟಿ, ಕಲ್ಯಾಣಗಿರಿನಗರ 3ನೇ ಹಂತ, ಮನೆ ನಂ ಎಂಐಜಿ 734ರಲ್ಲಿ ವಾಸವಾಗಿರುವ ಲೇಟ್ ಗೌಸ್ ಷರೀಫ್ ರವರ ಧರ್ಮಪತ್ನಿಯಾದ ಸುಮಾರು 74 ವರ್ಷ ವಯಸ್ಸುಳ್ಳ ಶ್ರೀಮತಿ ನೂರ್ ಜಹಾನ್ ಹಾಗೂ ಇವರ ಮಕ್ಕಳುಗಳಾದ ಸುಮಾರು 45ವರ್ಷ ವಯಸ್ಸುಳ್ಳ ಶ್ರೀಮತಿ ಖಮರ್ ಜಹಾನ್ ಸುಮಾರು 38 ವರ್ಷ ವಯಸ್ಸುಳ್ಳ ಶ್ರೀ ಇಬ್ರಾಹಿಂ ಷರೀಫ್ ಮತ್ತು ಸುಮಾರು 33 ವರ್ಷ ವಯಸ್ಸುಳ್ಳ ಬಾದರ್ ಜಹಾನ್ ರವರುಗಳಿಂದ ನಮ್ಮ ಕಕ್ಷಿದಾರರಾದ ಮೈಸೂರು ಜಿಲ್ಲೆ, ತಿ.ನರಸೀಪುರ ತಾಲ್ಲೂಕು, ಹೊಸಕೆಂಪಯ್ಯನಹುಂಡಿ ಗ್ರಾಮದಲ್ಲಿ ವಾಸವಾಗಿರುವ ಶ್ರೀ ಮಹದೇವು ಡಿ.ಎನ್ ರವರ ಮಗನಾದ ಸುಮಾರು 37 ವರ್ಷ ವಯಸ್ಸುಳ್ಳ ಶ್ರೀ ಜೈಕುಮಾರ್ ಮತ್ತು ಹಾಸನ ಜಿಲ್ಲೆ ಮತ್ತು ತಾಲ್ಲೂಕು, ಅಡಗೂರು ಅಂಚೆ, ಅಡಗೂರು ಗ್ರಾಮದಲ್ಲಿ ವಾಸವಾಗಿರುವ ಶ್ರೀ ಚಂದ್ರಪ್ಪರವರ ಮಗನಾದ 33 ವರ್ಷ ವಯಸ್ಸುಳ್ಳ ಶ್ರೀ ಜೀವನ್.ಎ.ಸಿ.ರವರು ಜಂಟಿಯಾಗಿ ಕ್ರಯಕ್ಕೆ ಪಡೆಯಲು ಕ್ರಯದ ಕರಾರನ್ನು ಮಾಡಿಕೊಂಡಿರುತ್ತಾರೆ. ಷೆಡ್ಯೂಲ್ ಸ್ವತ್ತಿನ ವಿಚಾರದಲ್ಲಿ ಮೇಲೆ ಕಾಣಿಸಿದವರಿಗಲ್ಲದೇ ಬೇರೆ ಯಾರಿಗಾದರೂ ಯಾವುದೇ ರೀತಿಯ ಹಕ್ಕಾಗಲೀ, ಹಿತಾಸಕ್ತಿಯಾಗಲೀ ಭಾಗಾಂಶವಾಗಲೀ ಅಥವಾ ಋಣಗಳಾಗಲೀ ಇದ್ದಲ್ಲಿ, ಸೂಕ್ತ ದಾಖಲಾತಿಗಳೊಡನೆ ಈ ಪ್ರಕಟಣೆ ನೀಡಿದ 15 ದಿನದೊಳಗಾಗಿ ಕೆಳಗಿನ ವಿಳಾಸಕ್ಕೆ ತಮ್ಮ ತಂಟೆ ತಕರಾರುಗಳನ್ನು ಸಲ್ಲಿಸಬೇಕೆಂದು ಈ ಮೂಲಕ ಕೋರಲಾಗಿದೆ ಹಾಗೂ ಈ ಅವಧಿ ಮುಗಿದ ನಂತರ ಬರುವ ತಂಟೆ ತಕರಾರನ್ನು ಪರಿಗಣಿಸಲಾಗುವುದಿಲ್ಲ ಮತ್ತು ಮುಂದಿನ ಯಾವುದೇ ಪರಿಣಾಮಕ್ಕೆ ಮೇಲ್ಕಂಡ ನಮ್ಮ ಕಕ್ಷಿದಾರರು ಜವಬ್ದಾರರಾಗಿರುವುದಿಲ್ಲವೆಂದು ಈ ಮೂಲಕ ಸಾರ್ವಜನಿಕ ಪ್ರಕಟಣೆ ನೀಡಲಾಗಿದೆ.

ಷೆಡ್ಯೂಲ್ ಸ್ವತ್ತಿನ ವಿವರ: ಮೈಸೂರು ಜಿಲ್ಲೆ.ತಿ. ನರಸೀಪುರ ತಾಲ್ಲೂಕು, ಕಸಬಾ ಹೋಬಳಿ, ಯಡದೊರೆ ಗ್ರಾಮದ ಸರ್ವೆ ನಂ. 75ರಲ್ಲಿ ವಿಸ್ತೀರ್ಣ 1 ಎಕರೆ 16 ಗುಂಟೆ, ಆಕಾರ್ 3.50 ಪೈಸೆಯುಳ್ಳ ತರಿ ಜಮೀನು ಇದಕ್ಕೆ ಚಕ್ಕುಬಂದಿ– ಪೂರ್ವಕ್ಕೆ : ರೈಸ್‌ಮಿಲ್, ಪಶ್ಚಿಮಕ್ಕೆ: ಬಂಡಿ ಬಚ್ಚಲು ನಾಲೆ, ಉತ್ತರಕ್ಕೆ : ಮೈಸೂರು ರಸ್ತೆ, ದಕ್ಷಿಣಕ್ಕೆ : ಬಂಡಿ ಬಚ್ಚಲು ನಾಲೆ.

ಸಹಿ/– ಎಚ್.ಎನ್.ಮಹೇಶ, ವಕೀಲರು, ಕೆಎಆರ್.1622/2004, ನಂ. 518/2, ರೂಂ ನಂ.5, ಪ್ರಗತಿ ಮೆಡಿಕಲ್ ಕಾಂಪ್ಲೆಕ್ಸ್, ಅಗ್ರಹಾರ ಮೈಸೂರು. ಮೊಬೈಲ್ ನಂ. 9845029683